ಪ್ರಜಾವಾಣಿ ಶನಿವಾರ • ಫೆಬ್ರುವರಿ 15, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

THE HINDU GROUP

PROPERTY SHOPPING SEASON IS HERE!

WALK IN TO BAG THE BEST PROPERTY DEALS IN TOWN.



AJMERA
BUILT ON TRUST

Presents

THE HINDU
Livingspaces 2025

Powered by

SHR
Sweet Home Realty
Your Trusted partner in Real Estate

In association with

Unitern

GET A CHANCE TO WIN A FREE GOLD COIN* EVERY HOUR!

Join the contests at the venue and stand a chance to win prizes worth up to ₹10,000.*

*T & C apply

TODAY & TOMORROW

TRIPURA VASINI
PALACE GROUNDS, BENGALURU
10 AM ONWARDS

200+ PRESTIGIOUS PROJECTS

The Hindu Livingspaces brings you an unmatched range of homes, apartments & commercial investments that best suit your tastes, budget, and dreams.

The exhibition features **reputed builders, trusted land developers, and leading financial institutions** under one roof.

FREE ENTRY

FOR QUERIES, CONTACT +91 94483 64925

To find your dream property, register using the QR code or visit link: **newsth.live/THPF2025DH**

Gold Sponsors: Canara Bank | SUMADHURA | Bank of Baroda | Assetz | Karnataka Housing Board

Silver Sponsors: PURAVANKARA | RANKA GROUP | URBANEST REALTY | ELEGANT Builders & Developers | EARTHERN PROJECTS | MOTHER EARTH


Associate Sponsors: SOBHA | DS MAX | ATZ PROPERTIES | Guru Punyaavni | ALLIANCE SQUARE | NISCHITHA PROPERTIES | Central Bank of India | IDBI BANK | pnb | MOGG'S ESTATES | LOKATIONS | KUTEERA REALTY | SAI PANCHAMI Developers Pvt. Ltd. | ESS & ESS INFRASTRUCTURE PVT. LTD.

Associate Sponsors: KRISHI VISHWA HOUSING CO-OPERATIVE SOCIETY LTD. | RIONS | Land Trades | SANCTUARY | COEVOLVE ESTATES

Exclusive Auto Partner: HYUNDAI | Jewellery Partner: Prathibha | Gift Partner: Smart Grahak | Food Partner | Coffee Partner: Levista

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CROES
Call: 96322-37557/ 96065-47557

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್
16.8
ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ಮುಖ್ಯರಸ್ತೆ, ಸರ್ಜಾಪುರ ಮತ್ತು ವೈಟ್‌ಫೀಲ್ಡ್ ಹತ್ತಿರ
ಎಸ್.ಟಿಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ



ಕರೆಮಾಡಿ
91489 82036

ಶ್ರೀನಿಧಿ ಹಾಲಿಡೇಸ್ Since 2005
ನಿಮ್ಮ ಕನಸಿನ ಪ್ರಯಾಣವು
ಕನಿಷ್ಠ ದರ ಅತ್ಯುತ್ತಮ ಸೌಕರ್ಯಗಳೊಂದಿಗೆ
Travel the World Explore Your Dream Destination
Visit Office to Get 5000 Discount Voucher life time Free Membership First 1000 Customer only
SREENIDHI HOLIDAYS
Domestic & International Tour Packages
Contact : Yogesh Deepu
Malleswaram , 112/1, 17th A Cross, 8th Main Road, 1st Floor, Bengaluru-560055.
9740776666, 7557553777

Unparalleled Luxury Living.
Possession before December 2025.
NIRMALA CONSTRUCTIONS
By H N Vijaya Raghava Reddy & Co VRR & Co Builders



VRR GREEN CREST Live Beyond Nature
2 & 3 BHK Luxury Flats @ Electronic City Phase - I
Price Starts From Rs.6500/- Per Sqft
BDA APPROVED
V. R. R & Co. Builders & Developers
RERA No. PRM/KA/1251/308/PR/040823/006114
Project Approved by SBI, Bank of Baroda & Other leading Banks
73492 42134 / 99726 23278
sales@vrrbuilders.com www.vrrbuilders.com
CREDAI

Building for Sale
30x52, 4 floor (G+3)
2 BHK 4 houses,
3 BHK duplex 1 house
Ganapathi Nagar,
Adjacent to Girinagar
Rent around 1.25 lakhs
Price: 3.30 crore
9632922604, 9448069581

FLORAL DESIGNS
14th Cross,Kanaka Nagar, R.T.Nagar, Bangalore - 560 032 Mob :94485 93982
Floral Designs Proposes to Import & Supply the below said Fertilizers to Entire Districts of Karnataka The Said Fertilizers are 100% Soluble in Water & helps FARMERS for Getting better Crops Growth.
NPK. 10-31-10.
NPK. 00-38-34.
NPK. 07-08-34.
NPK. 00-00-51

REAL ESTATE SELLING

Sites

Anjanapura

ANJANAPURA 4TH Block Site No.111 facing/South 30x40 @ 10th Block Site No.410 facing/South 20x30 good location immediate construction. 9845132011, 9591211555

PLOT FOR Sale In Anjanapura_11th Block,50x80,On 80'Road Commercial Price 6.5cr 40x60,On 40'Road Price11000/-9845600007

Arkavathi Layout

ARKAVATHY 20X30 30x40 West 3 Block Anjanapura 30x40 BSK 6th Stage 30x40 Buyers: 7019770736/ 8951614989

Banashankari

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

AVAILABLE BDA site 50/80 Banashankari 6th Stage, 7th Block, North Facing, opposite park near toll plaza. Genuine Buyers Contact:- 9980831787

BSK 6TH Stage 11th Block BDA 20X30 North facing allottee site, excellent vastu for sale -9986075122

"AVAILABLE BANASHANKARI 6th-Stage BDA-Site's 50x80 East-facing 7th`Black 60`feet`Road and`40x60 North`facing 1st`Black`30x40 East`facing. Contact: 9845146725/ 9741466369"

BSK 10TH block bda site sale Contact - 9481889006

Kanakapura Road

UM KAVAL-TALAGHATAPURA (Off Kanakapura Road) East Facing Residential Plot measuring about 2325 sqft. in 'Purva Tree Havan' Gated Community is for SALE. Contact: 9448282243.

KAGGALIPURA 'E' Khatha Site Sale 60x90 West Facing Gated Community 3,950/- Psqft. Negotioble 9740150364/ 8884707773

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

NADA PRABHU Kempegowda Layout BDA 30x40 South Facing, 2nd Block, I Sector, Direct Owner: 9980860138

30X40 BDA Site Available at Kempegowda Layout & Sir.M. V. Layout Contact For More Information- 9972220339/ 9739383649

Mysore

SITES_@MYSORE DTCP Facing State_Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD_Kote Road. 10Minutes to Airport,Ring Road, 15Minutes to Palace: 9845287802/ 8050001571.

Nagarabhavi

30X40 BDA Sites Nagarbhavi Vidhan Soudha Layout South Facing, 40X60 3rd Block VISHVESHWARAIAH LAYOUT: 9980409820

SALE: SITE 30x60 Nagarabhavi 2nd Stage, 'A' Khata, Immediate Registration. Genuine Buyers. Contact:6361819741.

Vishweswariah Layout

"VISHVESWARAIAH LAYOUT 30x40 West facing Allottee`Site for Sale Near Saibaba Temple. Contact Genuine Buyers:- 9845268611"

AVAILABLE 30X40 BDA Site 1st-Block, Viswesavaraiah Layout Near 100ft Parallel Road, Close To Shirke Apartment Beautifull Location: 9035470616

AVAILABLE 40X60 BDA Site 3rd-Block, Ullal Main Road Viswesavaraiah Layout, 40ft Road East Face Near AMMA Asharam: 9035470616

"RAILWAY LAYOUT 1st Stage 40x60 North_facing Site 40`feet Road for Sale. 9845500019/ 7019314962"

30X40 NORTH BDA Site Sale Vishveshwaraiah Layout 7500 Sqft & 40x60 North 8000 Sqft Owner Meeting Contact: 8310003509

40X60 NORTH Facing site, SMV 5th block, DC converted, BBMP A & E Khata. Contact: 9900266984

Devanahalli

PLOT FOR SALE @ Jangammakote, 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

ITPL

SITE FOR sale near ITPL 55*65 E/F 80 ft wide main road property with clear title Call:- 7899492581

Anekal

KHB SITE For Sale 30X50 North Facing Direct Allottee At Surya City Phase-3 Attibele.9845023423


Whitefield

PLOT FOR sale 4030 Sqft prime location on Channasandra Main Road near Hope Farm junction Whitefield, clear titles, approved layout plan. Call 6366384863

SPACIOUS 4,142 sqft plot available for sale in Whitefield next to MVJ college. Genuine buyers, please reach out for details. Call: 9980155241

Flat

Malleshwaram



MALLESWARAM SALE.
2 bhk units 2.5 crores.
3 bhk units 3.35 crores.
5 bhk unit 5 crores. New building. OC received.
Contact +916363161053.

Basavanagudi

1300SFT_2_BHK 1st_Floor`Semi Furnished`with Modular`Kitchen & One`Covered Parking Rs.90 Lacs.`Behind Shankarpuram Telecom Exchange, Ramakrishna Mutt`Layout. Call-9341226696

Dollars Colony

SANJAYNAGAR, DOLLARS Colony, Prestige Fairfield, 3.5 & 4 BHK luxury apartments for sale, ready to occupy. Price starts @ Rs. 4.5 Cr onwards. Call:- 9148047452.

Hebbal

SALE APARTMENT 3BHK Hebbal 70 Lakhs Ready Ground First North Lift Carpark Vastu Kumar 9343733415

Nagarabhavi

PLATS FOR-SALE Near Nagharbhavi Circle 2 & 3 BHK @ Prime-Location Ready to`Move in`Just`1.km from Metro-Station 9538828808 9845066608

Whitefield

BIRLA ALOKYA, 3 BHK Duplex, 1488 sq. ft., 2nd Floor Villament, North facing, East and West sunlight and ventilation, New construction, Price: Rs. 2.2 crores. Contact: 9972115156

House

Jayanagar

SALE HOUSES & Flats Jayanagar JPNagar Banashankari 30x40 30x50, 40x60, 60x90 Price 2.9cr To 10cr CLASSIC ESTATES 9845302589

Kanakapura Road

4 BEDROOM Designed Stone Constructed Duplex House And Hallow Bricks Factory For Sale Contact: 9916817739

RMV

INDEPENDENT HOUSE posh locality 2500 sqft Builtup, 50X90 site @ Aramane Nagar 1st Block RMV 2nd Stage, Clear Title. Call 9381009151.

Konanakunte Cross

SALE 40X50 Corner 2 BHK House with 4 Shops Konanakunte Near Sowdhamini Price Negotiable, 9845289422

Agricultural Land

Out-Station

9-LAKH PER acre Challakere 33acre Land for Immediate Settlement (Agriculture, Solar, Poultry) 9886154355

Commerical

Kanakapura Road

2 WAREHOUSES Available in Jakkasandra 3rd Phase Bangalore Tenant Occupied Genuine buyers Contact- 9606154546/ 9019851332

Vishweshwariah Layout

"VISHVESWARAIAH 6TH-BLOCK 60ft_Road 50x80 South facing Commercial Property with 75 Squares Building. 9845500019/ 7019314962"

FOR SALE 50x80 BDA Commercial Site On 100 feet Road, East facing, at 6th BLOCK, Sir M.V. Layout. Direct owner Contact: 9880956229. BROKERS EXCUSE

Residential/ Commercial

Rajarajeshwari Nagar

RAJARAJESHWARI NAGAR Ideal Homes 44 X 50 North facing Excellent Location. 9900522163

Farm House/ Land/ Resorts

Out-Station

FARMHOUSE BEST_PRICE 3Acre_Channapatna, 4Acre Mysore, 2Acre_Kanakapura, 6Acre Tumkur Road 8951240669

REAL ESTATE BUYING

Farm House/ Land/ Resorts

Multiple Locations

ADELIE INTERNATIONAL SCHOOL: Chain of schools backed by Eduweft group looking to takeover management of Preschools, CBSE, CISCE & Residential Schools (Long Lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan of Eduweft Services Pvt Ltd, Mobile: 9606353036 Email: info@eduweft.com; www.eduweft.com.

Sites

Anjanapura

WANTED BDA Site Anjanapura, Banashankari 6th Stage,Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40, 40x60 Jayanagar Housing Society, Anjanapura BDA, BCC Housing Society Banashankari 6th Stage Agent`Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

COMMERCIAL BUILDING Ground Floor, North`West Corner 1350_Sqft For`RENT. Suitable for: Showroom Shop,Office #625_10th`Cross 18th_Main Padmanabhanagar Bangalore-70. Contact: 9845226316 9611844667 9986372614.

TO LET Office space 1st Floor, St.John's Road, Dasappa Colony, 250 Sqft. Brokers Excuse. 9448840967.

OFFICE SPACE For Rent 6000sqft, stilt + 5floors, Lift, Car parking, Borewell, Cauvery water,Cambridge Layout.Call:9449424735, 9845848032.

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

YELAHANKA INDUSTRIAL Area Ground Floor 1250 sq.feet, First Floor 1250 sq.feet, Second floor 500 sq.feet. Contact: 9448505538.

RERA NO. PRM/KA/RERA/1251/310/PR/150922/005241



Since 1997
Anand Group
Builders & Developers
An ISO 9001 : 2015 Company
For a splendid living
As per Vaastu with CC & OC
Exclusively Designed Podium Row Houses
ANAND SOMU AARUSH
3 BHK Duplex & 4 BHK Triplex with Lift
Anjanapura BDA Layout
₹ 3.73* cr Onwards
9141 222 444
www.anand-group.com
Scan for Website
*T&C Apply

BUILDERS ESSENTIAL

Building Contractors

BUILDIA PROJECTS CONSTRUCTION COMPANY. With Over 30-Years of Experience We Build Your Dream Residence and Commercial Buildings As-Per Vaastu Using The Best Quality Material on-Time Within Your Budget. Call:9148691980 9845843667

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PUBLIC NOTICE

PUBLIC NOTICE

The General Public are hereby notified that my client intends to purchase the Schedule property from its Owners Sri Belur Venkatachalan Dasarathy residing at : No. 8474, Pamela way, Laurel Maryland - 20723-1098 , United States of America and Smt. Sheela Venkatachalan Belur residing at No. 12210 Quadrille LN Bowie MD , Maryland 20720 , United States of America If any person/s have any manner of right , title and or interest or claim or charge or lien over the schedule property or otherwise have any lawful objection/s for this sale transaction , they are hereby called upon to file their objection/s in writing, along with the photocopies of the documents on which they are relying , with the undersigned, within 7 days from the date of publication of this notice. Objection/s received thereafter will not be binding on my client .

Schedule

All that piece and parcel of the residential property bearing House No 9/1 (Previously part of Property No. 14 and later Property No . 9) BBMP PID No. 50-34-9/1, measuring East to West 40 ft 6-3/16 inches and North to south 27 ft 6 inches totally measuring 1114 Sq.ft with a house there on, situated at Jain temple cross road ,visveshwarapuram ,Bengaluru - 560004 and bounded on :
East by : Jain Temple Cross road
West by : Earlier Plot "D" Allotted to Sri RS Kumar , Presently bearing No.9 Owned by Smt Susheela and others
North by : Property No.10 of sri K.Sathyanarayana Shetty
South by : Earlier plot "F" allotted to LRs of late sri BLN Iyengar presently bearing No. 9 owned by smt Susheela and others

Sd/-Surana and Co,
Advocates and consultants
Railway Parallel Road , KP west , Seshadripuram , Bangalore -560020

PUBLIC NOTICE

This is to inform the general public that my client intends to purchase the immovable property mentioned and described in the schedule below from **Sri. Krishnappa,** son of Sri. Chikkanna, (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 123/3, measuring 1 acre 12.08 guntas, situated at **Kethohalli Village, Kasaba Hobli, Ramanagara Taluk** and is bounded on the:
East by : Property bearing Survey No. 124;
West by : Property bearing Survey No. 126;
North by : Property bearing Survey No. 123/2; and
South by : Property bearing Survey Nos. 122 and 216.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885
email : vinay@vinaykademane.in
Place :Bengaluru
Date:14-02-25

JOB OPPORTUNITIES

Marketing & Sales

BIOLAB INDIA, Jalahalli Bangalore (South India's Leading suppliers of Scientific Teaching and Educational Aids used in Nursing & Medical Institutes) REQUIRES MARKETING EXECUTIVES- BANGALORE / KERALA Male Graduates with experience in marketing. Please send your resume to sales@biolab.co.in

PERSONAL

Change of Name

I, SHARDINDU Residing #B-1002, Janapriya Lakeview phase-2, Kodichikkanahalli, Bangalore-76 have changed my name to SHARDINDU TIWARI vide affidavit dated 13.02.2025 sworn before K.C.Shashikala Notary Bangalore. Henceforth I shall be called as SHARDINDU TIWARI only.

CHANGE OF NAME

I, **MADHUSUDAN BHANDARKAR @ BANTWAL MADHUSUDAN BHANDARKAR** S/o **B Janaradhan Bhandary** Residing at # 175, "Girishree" 14th Cross, Girinagar 3rd Phase, BSK 3rd Stage, Bangalore-560085. Declare that both the above names same person myself only vide affidavit dated 12.02.2025 before notary H.G. Venkataramu, Bangalore.

CHANGE OF NAME

I, CHITRA W/o. Subhash N Sharma R/a #175/971, 2nd Block, 5th Cross, BEL Layout, Vidyaranyapura, Bangalore, Karnataka - 560097 have changed my Name from **CHITRA SUBHASH SHARMA** to **CHITRA** vide affidavit dated 7.2.2025 before Notary G. Hemalatha, Bangalore.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ದಯಾನಂದಗೆ ಕೇಂದ್ರದ ಫೆಲೋಶಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯವು ಸಾಹಿತ್ಯ ಕ್ಷೇತ್ರದಲ್ಲಿ ನೀಡುವ ಜ್ಯೂನಿಯರ್ ಫೆಲೋಶಿಪ್‌ಗೆ ಕಥೆಗಾರ ದಯಾನಂದ ಆಯ್ಕೆಯಾಗಿದ್ದಾರೆ.

ಫೆಲೋಶಿಪ್ ಭಾಗವಾಗಿ ಕನ್ನಡದ ಸಣ್ಣಕತೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳ ಬಗ್ಗೆ ಅಧ್ಯಯನ ನಡೆಸಲಿದ್ದಾರೆ. ₹2.40 ಲಕ್ಷ ಮೊತ್ತದ ಫೆಲೋಶಿಪ್ ಇದಾಗಿದೆ.


ದಯಾನಂದ

ರೈತರ ಆಗ್ರಹ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಮುಲ್ ಮಾದರಿಯಲ್ಲಿ ಹೈನೋದ್ಯಮವನ್ನು ಪ್ರೋತ್ಸಾಹಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಭಾರತೀಯ ರೈತ ಒಕ್ಕೂಟ ಆಗ್ರಹಿಸಿದೆ.

ಗರ್ಡರ್ ದುರಸ್ತಿ: ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್‌ನ 14ನೇ ಮುಖ್ಯರಸ್ತೆಯ ಮೇಲ್ಸೇತುವೆಯಲ್ಲಿ ಬಿಎಂಆರ್‌ಸಿಎಲ್‌ನಿಂದ 'ಸ್ಲೈಡಿಂಗ್ ಗರ್ಡರ್' (ತೊಲೆ) ದುರಸ್ತಿ ಕಾರ್ಯ ಕೈಗೊಂಡಿದ್ದು, ಈ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಫೆಬ್ರುವರಿ 15ರ ಮಧ್ಯಾಹ್ನ 2ರಿಂದ ಫೆ.16ರ ಬೆಳಿಗ್ಗೆ 10ರವರೆಗೆ ಸಿಲ್ಕ್ ಬೋರ್ಡ್ ಕಡೆಗೆ ಸಾಗುವ ರಸ್ತೆ ಹಾಗೂ ಇಬ್ಬಲೂರು ಕಡೆಗೆ ಸಾಗುವ ರಸ್ತೆಗಳನ್ನು ಮುಚ್ಚಲಾಗುವುದು. ಸಿಲ್ಕ್ ಬೋರ್ಡ್ ಹಾಗೂ ಇಬ್ಬಲೂರು ಕಡೆಗೆ ಸಾಗುವ ವಾಹನ ಸವಾರರು ಬದಲಿ ಮಾರ್ಗದಲ್ಲಿ ತೆರಳಬೇಕು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

ಸಿಲ್ಕ್ ಬೋರ್ಡ್ ಕಡೆಗೆ ಸಾಗುವ ವಾಹನ ಸವಾರರು: 14ನೇ ಮುಖ್ಯ ರಸ್ತೆಯ ಸರ್ವೀಸ್ ರಸ್ತೆ ಮೂಲಕ ಸಾಗಬಹುದು ಅಥವಾ ಹೊರವರ್ತುಲ ರಸ್ತೆಯ 19ನೇ ಮುಖ್ಯ ರಸ್ತೆಯಲ್ಲಿ ಎಡಕ್ಕೆ ತಿರುವು ಪಡೆದುಕೊಂಡು, 17ನೇ ಅಡ್ಡರಸ್ತೆಯಲ್ಲಿ ಸಾಗಿ, 5ನೇ ಮುಖ್ಯ ರಸ್ತೆ ಮೂಲಕ ಸಿಲ್ಕ್ ಬೋರ್ಡ್ ಜಂಕ್ಷನ್‌ಗೆ ತೆರಳಬಹುದು.

ಇಬ್ಬಲೂರು ಕಡೆಗೆ ಸಾಗುವ ವಾಹನ ಸವಾರರು: 14ನೇ ಮುಖ್ಯ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಸಾಗಬಹುದು ಅಥವಾ 14ನೇ ಮುಖ್ಯ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಂಡು ಆಟೋಮಾರ್ಟ್ ಜಂಕ್ಷನ್‌ಗೆ ಸಾಗಿ, ಅಗರ ಮೂಲಕ ಇಬ್ಬಲೂರಿಗೆ ತೆರಳುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

'ಮುನಿರತ್ನ ತಪಾಸಣೆ ಮಾಡಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಜ್ಞ ವೈದ್ಯರಾದ ಸಂಸದರೊಬ್ಬರು ಮುನಿರತ್ನ ತಲೆಗೆ ಮೊಟ್ಟೆ ಏಟು ಬಿದ್ದಿದ್ದು, ಆಸಿಡ್ ದಾಳಿಯಾಗಿ ಪೆಟ್ಟು ಬಿದ್ದಿದೆ. ಹೀಗಾಗಿ, ತಲೆಕೆಟ್ಟಿದೆ ಎಂದಿದ್ದರು. ಅವರು ಮತ್ತೆ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ಮಾಜಿ ಸಂಸದ ಕಾಂಗ್ರೆಸ್‌ನ ಡಿ.ಕೆ.ಸುರೇಶ್ ಹೇಳಿದರು.

'ಅಭಿವೃದ್ಧಿ ವಿಚಾರದಲ್ಲಿ ಬೆಂಗಳೂರು 20 ವರ್ಷ ಹಿಂದಕ್ಕೆ ಹೋಗಿದೆ' ಎಂಬ ಶಾಸಕ ಮುನಿರತ್ನ ಅವರ ಆರೋಪದ ಬಗ್ಗೆ ಸುದ್ದಿಗಾರರು ಶುಕ್ರವಾರ ಪ್ರಶ್ನಿಸಿದಾಗ, 'ಮುನಿರತ್ನ ಮೊದಲು ತಮ್ಮ ಮೇಲಿನ ಆರೋಪಗಳಿಂದ ಮುಕ್ತರಾಗಿ ಬರಲಿ. ಆನಂತರ ಬೇರೆ ವಿಷಯಗಳ ಬಗ್ಗೆ ಮಾತನಾಡೋಣ' ಎಂದರು.

ಪಂಚತಾರಾ ಹೋಟೆಲ್‌ನಲ್ಲಿ ಕುಳಿತುಕೊಂಡು ಶಿವಕುಮಾರ್ ಅವರು ಶೇ 35 ರಷ್ಟು ಕಮಿಷನ್ ಕೇಳುತ್ತಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಶಿವಕುಮಾರ್ ಪಂಚತಾರಾ ಹೋಟೆಲ್‌ಗಳಿಗೆ ಹೋಗುವುದಿಲ್ಲ. ಅದೇನಿದ್ದರು ಬಿಜೆಪಿಯವರ ಸಂಸ್ಕೃತಿ' ಎಂದು ಹೇಳಿದರು.


ಡಿ.ಕೆ. ಸುರೇಶ್

ಡಿ.ಕೆ.ಶಿವಕುಮಾರ್ ಅವರ ಮೇಲಿನ ಆರೋಪಕ್ಕೆ ಪ್ರತಿಯಾಗಿ ತಮ್ಮ ಮೇಲೆ ಸರ್ಕಾರ ಪ್ರಕರಣ ದಾಖಲಿಸಬಹುದು ಎಂಬ ಮುನಿರತ್ನ ಹೇಳಿಕೆ ಬಗ್ಗೆ ಕೇಳಿದಾಗ, 'ಅವರು ಈ ಮೊದಲೇ ಮಾಡಿಟ್ಟುಕೊಂಡಿರುವ ಎಡವಟ್ಟು ಮತ್ತು ಕುತಂತ್ರಗಳ ಬಗ್ಗೆ ಹೀಗೆ ಸಾರ್ವಜನಿಕವಾಗಿ ಹೇಳಿಕೊಳ್ಳುತ್ತಿದ್ದಾರೆ ಅಷ್ಟೆ. ಅವರು ಯಾವ-ಯಾವ ಠಾಣೆಗಳಲ್ಲಿ ಇರುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ. ಅವುಗಳಿಂದ ಪಲಾಯನ ಮಾಡಲು ಈ ರೀತಿಯ ಹೇಳುತ್ತಿದ್ದಾರೆ' ಎಂದು ಹೇಳಿದರು.

ಬೆಂಗಳೂರು ಕೃಷಿ ವಿ.ವಿಗೆ ಎ+ ಶ್ರೇಣಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ಎ+ ಶ್ರೇಣಿ ದೊರೆತಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ತಿಳಿಸಿದ್ದಾರೆ.

'ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ನ್ಯಾಕ್ ಮಾನ್ಯತೆಗೆ ಅರ್ಜಿ ಸಲ್ಲಿಸಿತ್ತು. ಫೆಬ್ರುವರಿ 5ರಿಂದ 7ರವರೆಗೆ ನ್ಯಾಕ್ ಪರಿಶೀಲನಾ ಸಮಿತಿಯು ವಿಶ್ವವಿದ್ಯಾಲಯ ಹಾಗೂ ಇದರ ಅಧೀನದಲ್ಲಿರುವ ಕಾಲೇಜುಗಳಿಗೆ ಭೇಟಿ ನೀಡಿತ್ತು. ಕೃಷಿ ವಿಜ್ಞಾನ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಆಡಳಿತದಲ್ಲಿ ವಿಶ್ವವಿದ್ಯಾಲಯ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ. ಶೈಕ್ಷಣಿಕ ಗುಣಮಟ್ಟ, ಪರಿಣಾಮಕಾರಿ ಸಂಶೋಧನೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತು ನವೀನ ಬೋಧನಾ ವಿಧಾನಗಳಿಗೆ ಅದರ ಬದ್ಧತೆಯನ್ನು ಎತ್ತಿಹಿಡಿದಿದೆ' ಎಂದು ಹೇಳಿದ್ದಾರೆ.

ಈ ಮಾನ್ಯತೆಯು ಮುಂದಿನ ಐದು ವರ್ಷಗಳವರೆಗೆ ಇರಲಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಎ+ ಮಾನ್ಯತೆ ಪಡೆದ ರಾಜ್ಯದ ಮೊದಲ ವಿಶ್ವವಿದ್ಯಾಲಯವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


OPENS TODAY
ELEVATE YOUR LOOK WITH THE
FRESHEST FASHION TRENDS!
HI LIFE
EXHIBITION
Fashion | Style | Decor | Luxury
OVER 250+ OF THE FINEST DESIGNERS
15.16.17
FEB
THE LaLiT
ASHOK
BANGALORE
10 am - 8 pm | Valet Parking | Entry fee Rs.100
Image Courtesy:
NEERU'S


Over 60 Years of Excellence 1962-2022
Margadarsi
RAMOJI GROUP
ನನ್ನ ಮಗಳ ಮದುವೆಯಲ್ಲಿ
ಮಾರ್ಗದರ್ಶಿಯಾಗಿ
ಸಲಹೆ
ನೀಡಿದಕ್ಕಾಗಿ
ಮಾರ್ಗದರ್ಶಿ ಗೆ
ಧನ್ಯವಾದಗಳು
ನನ್ನ ಮಗಳ ಮದುವೆ ಇಷ್ಟು ಅದ್ದೂರಿಯಾಗಿ ನಡೆಯಲಿದೆ ಎಂದು ನಾನು ಊಹಿಸಿರಲಿಲ್ಲ, ಮಾರ್ಗದರ್ಶಿ ಅದನ್ನು ಸಾಕಾರಗೊಳಿಸಿದೆ. ನನ್ನ ವಿಶ್ವಾಸಾರ್ಹ ಮಾರ್ಗದರ್ಶಿ, ನನಗೆ ಹಣವನ್ನು ಉಳಿಸಲು, ಲಾಭಾಂಶಗಳನ್ನು ಗಳಿಸಲು ಸಹಾಯ ಮಾಡಿದೆ ಮತ್ತು ಈ ವಿಶೇಷ ಸಂದರ್ಭಕ್ಕಾಗಿ ನನಗೆ ಅಗತ್ಯವಿರುವಾಗ ಒಂದು ದೊಡ್ಡ ಮೊತ್ತವನ್ನು ಹಿಂಪಡೆಯಲು ನನಗೆ ನಮ್ಯತೆಯನ್ನು ಒದಗಿಸಿದೆ.
ಮಾರ್ಗದರ್ಶಿಯನ್ನು ನಿಮ್ಮ ಜೀವನದ ಒಂದು ಭಾಗವಾಗಿಸಿ. ಮಾರ್ಗದರ್ಶಿ ನಿಮ್ಮ ಎಲ್ಲಾ ಗುರಿಗಳನ್ನು ಪೂರೈಸುವ ಮಾರ್ಗದಲ್ಲಿ ನಿಮಗೆ ಮಾರ್ಗದರ್ಶನ ನೀಡುವುದರಲ್ಲಿ ಅನುಭವಶಾಲಿಯಾಗಿದೆ.
1962 ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಸಲ್ಲಿಸಿದ್ದೇವೆ
₹9,396 ಕೋಟಿ ಕ್ಯುಮುಲೇಟಿವ್ ಆಕ್ಷನ್ ಟರ್ನೋವರ್
ಕರ್ನಾಟಕ, ತೆಲಂಗಾಣಾ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 121 ಶಾಖೆಗಳು
ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸರಳ
www.margadarsi.com
ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042
ಫೋನ್ : 080-25322939 | ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ <MARG>ಎಸ್ಎಂಎಸ್ ಮಾಡಿ
For more details scan this QR-Code
ಬೆಂಗಳೂರು: ಆರ್.ಒ. ಬೆಂಗಳೂರು: 080-25322939 / 25322938 / 7618795559 | ಗಾಂಧಿ ನಗರ: 080-22384676 / 85 / 7618795562 | ಜಯನಗರ: 080-22457994 / 22457374 / 7618795565 | ಇಂದಿರಾ ನಗರ: 080-25203738 / 25211048 / 7618795569 | ಬಸವೇಶ್ವರ ನಗರ: 080-23118228 / 7618795572 | ಬಿಟಿಎಂ ಲೇಔಟ್: 080-26687374 / 26687375 / 7618795573 | ಆರ್ ಟಿ ನಗರ: 080-23534949 / 22744685 / 7618795574 | ಮಾರತಹಳ್ಳಿ: 080-25401305 / 7618795575 | ಬನಶಂಕರಿ: 080-26796804 / 26790682 / 7618795576 | ಪೀಣ್ಯ: 080-28392044 / 7618795578 | ಹೆಚ್ ಎಸ್ ಆರ್ ಲೇಔಟ್: 080-25723636 / 7618795580 | ಕೆಂಗೇರಿ: 080-29904055/ 7618794468 | ಬಳ್ಳಾರಿ: 08392-268990 / 267990 / 7618795560 | ಹೊಸಪೇಟೆ: 08394-222552 / 53 / 7618795561 | ರಾಯಚೂರು: 08532-229516 / 7618795564 | ಮೈಸೂರು: 0821-2524223 / 7618795563 | ದಾವಣಗೆರೆ: 08192-251461 / 237700 / 7618795566 | ಹುಬ್ಬಳ್ಳಿ: 0836-2356211 / 2354149 / 7618795568 | ಶಿವಮೊಗ್ಗ: 08182-224644 / 228233 / 7618795567 | ಮಂಗಳೂರು: 0824-2442142 / 2447742 / 7618795570 | ಹಾಸನ: 08172-233576 / 233252 / 7618795571 | ತುಮಕೂರು: 0816-2255103 / 104 / 7618795577 | ಬೆಳಗಾವಿ: 0831-2431687 / 780 / 7618795579 | ಕೋಲಾರ: 08152-200566 / 7618795581 | ಹಾವೇರಿ: 08375-200543 / 7618795556 | ಚಿಕ್ಕಬಳ್ಳಾಪುರ: 08156-299911 / 7618794467 | ಚಿತ್ರದುರ್ಗ: 08194-231205 / 7618794469


Pure Since 1925
ಭೀಮ
Fabulous Feb
ಚಿನ್ನ ಮತ್ತು ಬೆಳ್ಳಿ
ಮೇಕಿಂಗ್ ಶುಲ್ಕಗಳ ಮೇಲೆ
70%*
ವರೆಗೆ ರಿಯಾಯಿತಿ
ವಜ್ರ
ಪ್ರತಿ ಕ್ಯಾರೆಟ್‌ಗೆ
ಫ್ಲಾಟ್
₹7,000
ರಿಯಾಯಿತಿ +
ಪ್ರತಿ ಕ್ಯಾರೆಟ್‌ನೊಂದಿಗೆ
1 ಗ್ರಾಂ ಚಿನ್ನದ ನಾಣ್ಯ ಉಚಿತ *
ಲಕ್ಕಿ ಡ್ರಾ
ಗೆಲ್ಲಿರಿ 20 APRILIA
ಸ್ಕೂಟರ್ಸ್ ಪ್ರತಿ ವಾರ*
ಸ್ಕ್ರಾಚ್ ಅಂಡ್ ವಿನ್
ಪ್ರತಿ ಗ್ರಾಂಗೆ
₹150 ವರೆಗೆ ಕ್ಯಾಶ್ ಬ್ಯಾಕ್
ಪ್ರತಿ ಖರೀದಿಯ ಮೇಲೆ*
ಆಫರ್‌ಗಳು ಫೆಬ್ರವರಿ 5 ರಿಂದ 28, 2025 ರವರೆಗೆ ಮಾನ್ಯವಾಗಿರುತ್ತವೆ
BHIMA
FORMERLY
BHIMA
GOLD • DIAMONDS • SILVER • PLATINUM
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ
ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ
ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ
BHIMA Helpline
1800-121-9076
(10:00 a.m. to 7:00 p.m.)

ದೇಶದಲ್ಲೇ ಮೊದಲ ಬಾರಿಗೆ ಕಾರ್ಯಕ್ರಮ, ಬಿಬಿಎಂಪಿಯಿಂದ ₹4.98 ಕೋಟಿ ವೆಚ್ಚ

1.84 ಲಕ್ಷ ಬೀದಿ ನಾಯಿಗಳಿಗೆ 'ಸಂಯುಕ್ತ ಲಸಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿಯೇ ಮೊದಲ ಬಾರಿಗೆ ಬೀದಿ ನಾಯಿಗಳಿಗೆ 'ಸಂಯುಕ್ತ ಲಸಿಕೆ' ಹಾಕುವ ಕಾರ್ಯಕ್ರಮವನ್ನು ಪಾಲಿಕೆ ಆಯೋಜಿಸಿದೆ. ಇದಕ್ಕಾಗಿ ₹4.98 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ 'ಸಂಯುಕ್ತ ಲಸಿಕೆ' ಹಾಕುವ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿರುವ 1.84 ಲಕ್ಷ ಬೀದಿ ನಾಯಿಗಳಿಗೆ ಸಂಯುಕ್ತ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಲಸಿಕೆ ಮತ್ತು 'ಕೋಲ್ಡ್ ಸ್ಟೋರೇಜ್'ಗಾಗಿ ₹4.98 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಿಬಿಎಂಪಿಯ ಪಶುಪಾಲನಾ ವಿಭಾಗದ ವತಿಯಿಂದ ಬೀದಿ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಹಾಗೂ ರೇಬೀಸ್ ರೋಗ ನಿರೋಧಕ ಲಸಿಕೆಗಳನ್ನು ಹಾಕಲಾಗುತ್ತಿದೆ. ರೇಬೀಸ್ ಲಸಿಕೆ ಹೊರತುಪಡಿಸಿ ಬೀದಿ ನಾಯಿಗಳಲ್ಲಿ ಹಲವು ಮಾರಣಾಂತಿಕ ಸಾಂಕ್ರಾಮಿಕ ರೋಗಗಳು ಕಂಡು ಬರುತ್ತವೆ. ಅಲ್ಲದೆ, ಮನುಷ್ಯರಿಗೆ ನಾಯಿಗಳಿಂದ ಹರಡಬಹುದಾದ ರೋಗಗಳಿವೆ. ಅವುಗಳನ್ನು ತಡೆಗಟ್ಟಲು 'ಸಂಯುಕ್ತ ಲಸಿಕೆ' ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಇದು ಅತ್ಯಗತ್ಯವಾಗಿದೆ ಎಂದು ಮಾಹಿತಿ ನೀಡಿದರು.

ಬೀದಿ ನಾಯಿಗಳಿಗೆ ಮಾರಕವಾಗಿರುವ ಕೆನೈನ್ ಡಿಸ್ಟೆಂಪರ್, ಕೆನೈನ್ ಹೆಪಟೈಟಿಸ್, ಕೆನೈನ್ ಪಾರ್ವೊವೈರಸ್, ಕೆನೈನ್ ಪ್ಯಾರಾ ಇನ್ಫ್ಲುಯಂಜಾ, ಕೆನೈನ್ ಲೆಪ್ಟೊಸ್ಪೈರೋಸಿಸ್ (ನಾಯಿಗಳಿಂದ ಮನುಷ್ಯರಿಗೆ ಹರಡಬಹುದಾದ ರೋಗ) ರೋಗಗಳನ್ನು ತಡೆಗಟ್ಟಲು 'ಸಂಯುಕ್ತ ಲಸಿಕೆ' ನೆರವಾಗುತ್ತದೆ' ಎಂದರು.

'ನಾಗರಿಕರ ಆರೋಗ್ಯ ಕಾಪಾಡುವುದು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಆದ್ಯ ಕರ್ತವ್ಯ. ಇದೇ ರೀತಿ ಪಾಲಿಕೆ ವ್ಯಾಪ್ತಿಯ ಬೀದಿ ನಾಯಿಗಳ ಆರೋಗ್ಯ ಕಾಪಾಡುವುದೂ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಬಿಬಿಎಂಪಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. 2023ರಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ 2.79 ಲಕ್ಷ ನಾಯಿಗಳಿವೆ' ಎಂದು ತಿಳಿಸಿದರು.

ಪಶು ಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಯಲಹಂಕ ವಲಯ ಆಯುಕ್ತ ಕರೀಗೌಡ, ಪಶು ಸಂಗೋಪನಾ ವಿಭಾಗದ ಜಂಟಿ ನಿರ್ದೇಶಕ ಡಾ. ಚಂದ್ರಯ್ಯ ಉಪಸ್ಥಿತರಿದ್ದರು.


ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಬೀದಿ ನಾಯಿಗಳಿಗೆ 'ಸಂಯುಕ್ತ ಲಸಿಕೆ' ಅಭಿಯಾನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ತುಷಾರ್ ಗಿರಿನಾಥ್, ಸುರಳ್ಕರ್ ವಿಕಾಸ್ ಕಿಶೋರ್, ಕರೀಗೌಡ, ಡಾ. ಚಂದ್ರಯ್ಯ ಉಪಸ್ಥಿತರಿದ್ದರು

ಮನೆ ಬಾಗಿಲಿಗೆ ಇ-ಖಾತಾ

ಪಾಲಿಕೆ ವ್ಯಾಪ್ತಿಯಲ್ಲಿರುವ ಆಸ್ತಿ ಮಾಲೀಕರ ಮನೆ ಬಾಗಿಲಿಗೆ ಇ-ಖಾತಾ ತಲುಪಿಸುವ ಅಭಿಯಾನವನ್ನು ಮುಂದಿನ ವಾರ ಆರಂಭಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ತಿಳಿಸಿದರು.

'ನಮ್ಮ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಕರಡು ಇ-ಖಾತಾದಂತೆ ಯಾವುದೇ ರೀತಿಯ ಬದಲಾವಣೆ ಇಲ್ಲದಿದ್ದರೆ, ನಮ್ಮ ಸಿಬ್ಬಂದಿ ಅವರ ಮನೆಗೆ ಹೋಗಿ, ಅಗತ್ಯ ದಾಖಲೆಗಳನ್ನು ಪಡೆದು ಅಪ್‌ಲೋಡ್ ಮಾಡಿ ಅಂತಿಮ ಇ-ಖಾತಾ ನೀಡಲಿದ್ದಾರೆ' ಎಂದರು.

ಈ ಸೇವೆಗಾಗಿ ಟೆಂಡರ್ ಕರೆಯಲಾಗಿದ್ದು, ಅದನ್ನು ಅಂತಿಮಗೊಳಿಸಲಾಗುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಕೆರೆ ಒತ್ತುವರಿ: ಇಇಗಳಿಗೆ ನೋಟಿಸ್

'ಪಾಲಿಕೆ ವ್ಯಾಪ್ತಿಯಲ್ಲಿರುವ ಕೆರೆಗಳ ಒತ್ತುವರಿ ತೆರವುಗೊಳಿಸುವ ಜವಾಬ್ದಾರಿಯನ್ನು ನಿರ್ವಹಿಸದ ಕೆರೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ನೋಟಿಸ್ ಜಾರಿ ಮಾಡಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಕೆರೆಗಳ ಒತ್ತುವರಿ ತೆರವಿನ ಬಗ್ಗೆ ಹೈಕೋರ್ಟ್‌ಗೆ ಕ್ರಿಯಾಯೋಜನೆ ಸಲ್ಲಿಸಲಾಗಿದೆ. ಇದೀಗ ತೆರವಿನ ವರದಿಯನ್ನೂ ಸಲ್ಲಿಸಲಾಗುತ್ತದೆ. ಯಾವ ಅಧಿಕಾರಿ ಕಾರ್ಯನಿರ್ವಹಿಸಿಲ್ಲವೋ ಅವರಿಗೆ ನೋಟಿಸ್ ನೀಡಲಾಗುತ್ತದೆ. ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್‌ಗೂ ಮನವಿ ಮಾಡಿಕೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

10ನೇ ತರಗತಿ ಪರೀಕ್ಷೆ ಬರೆಯಲು ಹೈಕೋರ್ಟ್ ಸಮ್ಮತಿ

ಬೆಂಗಳೂರು: ಕಾಡುಗುಡಿ 'ಜನನಿ ಪಬ್ಲಿಕ್ ಶಾಲೆ'ಯ 18 ವಿದ್ಯಾರ್ಥಿಗಳಿಗೆ 2024-25ನೇ ಸಾಲಿನ 10ನೇ ತರಗತಿ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಿರುವ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶವನ್ನು ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಕೇಂದ್ರ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: '18 ವಿದ್ಯಾರ್ಥಿಗಳಿಗೆ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಜನನಿ ಪಬ್ಲಿಕ್ ಶಾಲೆ ಸಿಬಿಎಸ್‌ಇಗೆ ಮನವಿ ಮಾಡಿತ್ತು. ಸಿಬಿಎಸ್‌ಇ ಇದನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಶಾಲೆ ಹೈಕೋರ್ಟ್ ಮೆಟ್ಟಿಲೇರಿತ್ತು.

ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 2025ರ ಫೆಬ್ರುವರಿ 15ರಿಂದ ನಡೆಯಲಿರುವ 2024-25ನೇ ಸಾಲಿನ 10ನೇ ತರಗತಿ ಪರೀಕ್ಷೆಗೆ 18 ವಿದ್ಯಾರ್ಥಿಗಳಿಗೆ ಅವಕಾಶ ನೀಡುವಂತೆ ಜನವರಿ 27ರಂದು ಮಧ್ಯಂತರ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಸಿಬಿಎಸ್‌ಇ ಮೇಲ್ಮನವಿ ಸಲ್ಲಿಸಿತ್ತು.



ಇಂದು ಉಚಿತ ಹೃದಯ ಶಸ್ತ್ರಚಿಕಿತ್ಸೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದ ಸತ್ಯಸಾಯಿ ಸರಳಾ ಆಸ್ಪತ್ರೆಯಲ್ಲಿ ಫೆ.15 ರಂದು ಹೃದ್ರೋಗಗಳಿಗೆ ಸಂಬಂಧಿಸಿದ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಆಂಜಿಯೋಪ್ಲಾಸ್ಟಿ, ಆಂಜಿಯೋಗ್ರಾಮ್, ಮಕ್ಕಳ ಹೃದಯದ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗುತ್ತದೆ.

ಹೆಸರಾಂತ ಹೃದ್ರೋಗ ತಜ್ಞರು ಮತ್ತು ಹೃದಯ ಶಸ್ತ್ರ ಚಿಕಿತ್ಸಕರು ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಚಿಕಿತ್ಸೆ ಅಗತ್ಯವಿರುವವರು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ 08516-275801 ಮತ್ತು ಸಂಜೆ ನಾಲ್ಕು ಗಂಟೆ ನಂತರ 7483124299 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬೇಕು.

ಸಮಾಲೋಚನೆ, ತಪಾಸಣೆ, ಚಿಕಿತ್ಸೆ ಮತ್ತು ಔಷಧೋಪಚಾರ ಸಂಪೂರ್ಣ ಉಚಿತವಾಗಿರುತ್ತದೆ. ಅವಶ್ಯವುಳ್ಳವರು ಸೌಲಭ್ಯದ ಉಪಯೋಗ ಪಡೆಯಬೇಕು ಎಂದು ಆಸ್ಪತ್ರೆಯು ತಿಳಿಸಿದೆ.

'ಭಾರತದಲ್ಲೇ ಹೆಚ್ಚು ನಿರುದ್ಯೋಗಿಗಳು'

ಹೂಡಿಕೆದಾರರ ಸಮಾವೇಶದಲ್ಲಿ ಶಶಿ ತರೂರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತಿನಲ್ಲೇ ಭಾರತ ಅತಿಹೆಚ್ಚು ನಿರುದ್ಯೋಗಿಗಳನ್ನು ಹೊಂದಿದೆ. ಯುವಜನರನ್ನು ಸಬಲೀಕರಣಗೊಳಿಸುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆ ಬದಲಾಗಬೇಕು ಎಂದು ಸಂಸದ ಶಶಿ ತರೂರ್ ತಿಳಿಸಿದರು.

'ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ'ದಲ್ಲಿ ಶುಕ್ರವಾರ 'ಪ್ರಕ್ಷುಬ್ಧದ ಪ್ರವರ್ಧಮಾನ: ರಾಷ್ಟ್ರಗಳು ಹೇಗೆ ಸವಾಲು ಎದುರಿಸಬಹುದು' ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಏನನ್ನು ಚಿಂತಿಸಬೇಕು? ಎಂಬುದರ ಬದಲಿಗೆ ಹೇಗೆ ಚಿಂತಿಸಬೇಕು? ಎಂಬುದನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಡಬೇಕು. ಯುವಜನರನ್ನು ಕೌಶಲಪೂರ್ಣರನ್ನಾಗಿಸಿ, ಉದ್ಯೋಗ ಒದಗಿಸಬೇಕು ಎಂದು ಪ್ರತಿಪಾದಿಸಿದರು.


'ಕೃತಕ ಬುದ್ಧಿಮತ್ತೆ ಸೇರಿದಂತೆ ತಂತ್ರಜ್ಞಾನದ ಬಳಕೆಯಿಂದ ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಭಾರಿ ಬದಲಾವಣೆಯಾಗಲಿದೆ. ವಿದ್ಯಾರ್ಥಿಗಳು ಮತ್ತು ಯುವಜನರನ್ನು ಭವಿಷ್ಯದ ಬೇಡಿಕೆಗಳಿಗೆ ಅನುಗುಣವಾಗಿ ಸಜ್ಜುಗೊಳಿಸುವ ಅಗತ್ಯವಿದೆ. ಪ್ರಸ್ತುತ ಜಾಗತಿಕ ಉದ್ಯೋಗ ವಲಯದಲ್ಲಿರುವ ಶೇಕಡ 30ರಷ್ಟು ಉದ್ಯೋಗಗಳು ಇನ್ನು ಐದು ವರ್ಷಗಳಲ್ಲಿ ಕಣ್ಮರೆಯಾಗಲಿವೆ' ಎಂದು ಹೇಳಿದರು.

ಗ್ರೀಸ್ ಮಾಜಿ ಪ್ರಧಾನಿ ಜಾರ್ಜ್ ಪಪಾಂಡ್ರ್ಯೂ ಮಾತನಾಡಿ, 'ಉತ್ತಮ, ಆದರ್ಶ ಪ್ರಜಾಪ್ರಭುತ್ವ ವ್ಯವಸ್ಥೆಯು ತನ್ನ ನಾಗರಿಕರ ಮೇಲೆ ವಿಶ್ವಾಸ ಇಡಬೇಕು. ಶಿಕ್ಷಣ ಮತ್ತು ಪ್ರಜಾತಂತ್ರ ಜತೆ ಜತೆಯಾಗಿ ಮುನ್ನಡೆಯಬೇಕು' ಎಂದು ಅವರು ಹೇಳಿದರು.

'ಉತ್ತಮ ಪ್ರಜಾತಂತ್ರ ವ್ಯವಸ್ಥೆಗೆ ಪಾರದರ್ಶಕ ಆಡಳಿತ ಮತ್ತು ಉತ್ತರದಾಯಿತ್ವ ಮುಖ್ಯ. ಇವುಗಳ ಕೊರತೆಯಿಂದಾಗಿಯೇ ಗ್ರೀಸ್ ಆರ್ಥಿಕ ಸಂಕಷ್ಟ ಎದುರಿಸಬೇಕಾಯಿತು. ಗ್ರೀಸ್‌ನಲ್ಲಿ ಜನರ ಹಣ ಸಾರ್ವಜನಿಕ ಹಿತಾಸಕ್ತಿಗೆ ವಿನಿಯೋಗವಾಗಲಿಲ್ಲ. ರಾಜಕಾರಣಿಗಳ ಗಮನ ಅಧಿಕಾರ ಹಿಡಿಯುವುದರತ್ತಲೇ 'ಇತ್ತು' ಎಂದು ಹೇಳಿದರು.

'ಇಂಕ್ ಟಾಕ್ಸ್' ಸಂಸ್ಥೆ ಸಿಇಒ ಲಕ್ಷ್ಮೀ ಪ್ರತೂರಿ ಗೋಷ್ಠಿ ನಿರ್ವಹಿಸಿದರು.

'ವಿಶ್ವಸಂಸ್ಥೆಯಲ್ಲೂ ಅಸಮಾನತೆ'


ಶಶಿ ತರೂರ್

ನಾವು ಬದುಕುತ್ತಿರುವ ಜಗತ್ತಿನ ಕನ್ನಡಿಯಾಗಿ ವಿಶ್ವಸಂಸ್ಥೆ ಇದೆ. ವಿಶ್ವಸಂಸ್ಥೆ ಸಹ ಮೂಲ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿಲ್ಲ. ಅಸಮಾನತೆ, ತಾರತಮ್ಯಗಳು ಅಲ್ಲೂ ಇವೆ. ಅದನ್ನು ಅರ್ಥ ಮಾಡಿಕೊಂಡರಷ್ಟೇ ಪರ್ಯಾಯ ಜಾಗತಿಕ ವ್ಯವಸ್ಥೆಯ ಬಗ್ಗೆ ಚಿಂತಿಸಬಹುದು ಎಂದು ಸಂಸದ ಶಶಿ ತರೂರ್ ತಿಳಿಸಿದರು.

ಕೋವಿಡ್ ನಂತರದ ಜಾಗತಿಕ ನಾಯಕರು ಗಡಿಯಾಚಿನ ವಿಶ್ವದಲ್ಲಿ ಪ್ರಬಲರಾಗುವ ಬದಲಿಗೆ ತಮ್ಮ ಗಡಿರೇಖೆಯೊಳಗೆ ಅಂದರೆ ಆಂತರಿಕವಾಗಿ ಬಲಿಷ್ಠರಾಗಲು ಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಭಾರತ–ಶ್ರೀಲಂಕಾ ದ್ವಿಪಕ್ಷೀಯ ಸಂಬಂಧ ಪರಿಶೀಲನೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆರೆಯವರು ಮೊದಲು' ಎಂಬ ಭಾರತದ ನೀತಿ ಮತ್ತು 'ಭಾರತ ಮೊದಲು' ಎಂಬ ಶ್ರೀಲಂಕಾದ ನೀತಿ ಎರಡು ದೇಶಗಳು ಉತ್ತಮ ಸಂಬಂಧ ಹೊಂದಲು ಕಾರಣವಾಗಿದೆ. ದ್ವಿಪಕ್ಷೀಯ ಸಂಬಂಧ ಇನ್ನಷ್ಟು ವೃದ್ಧಿಗೊಳ್ಳಲು ಪರಿಶೀಲನೆ ನಡೆಯಬೇಕು' ಎಂದು ಮಾಜಿ ಹೈಕಮಿಷನರ್ ಮಿಲಿಂದ ಮೊರಗೊಂಡ ತಿಳಿಸಿದರು.

ರಾಷ್ಟ್ರೀಯ ಭದ್ರತಾ ಅಧ್ಯಯನ ಕೇಂದ್ರವು ಸಿಎನ್‌ಎಸ್‌ಎಸ್ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀಲಂಕಾದಿಂದ ಭಾರತಕ್ಕೆ ಹೈಕಮಿಷನರ್ ಆಗಿ ನಿಯೋಜನೆಗೊಂಡಿದ್ದ ಮಿಲಿಂದ ಮೊರಗೊಂಡ ಅವರು ಆಗಿನ ಅನುಭವವನ್ನು ಹಂಚಿಕೊಂಡರು. 'ನೇವಿಗೇಟಿಂಗ್ ದ ಟೆರೇನ್ ಆಫ್ ಪಾಲಿಸಿ ಮೇಕಿಂಗ್ ಇನ್ ದ ಏಜ್ ಆಫ್ ಡಿಸ್‌ರಪ್ಷನ್' ವಿಷಯದ ಕುರಿತು ವಿಚಾರ ಮಂಡಿಸಿದರು.

ಸಂಸ್ಥೆಯ ಕುಲಪತಿ ಎಂ.ಆರ್. ಜಯರಾಂ, ಸಿಎನ್‌ಎಸ್‌ಎಸ್‌ನ ಇಂಡಿಯಾ ಸ್ಟ್ರಾಟೆಜಿಕ್ ಸ್ಟಡೀಸ್ ಕಾರ್ಯಕ್ರಮ ಮುಖ್ಯಸ್ಥ ಬಾಲಸುಬ್ರಮಣಿಯನ್, ಸಿಎನ್‌ಎಸ್‌ಎಸ್ ಕೌನ್ಸಿಲ್ ಸದಸ್ಯ ಪಿ.ಎಂ. ಹೆಬ್ಲಿಕರ್ ಹಾಜರಿದ್ದರು.

ದಶಮಾನೋತ್ಸವ

ಬೆಂಗಳೂರು: ಅರಿವು ಭಾರತದ ವತಿಯಿಂದ ಫೆ. 15ರಂದು ಕೋಲಾರದಲ್ಲಿ ನಡೆಯುವ ಸಮಾಜ ಸುಧಾರಣೆಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ 'ಒಳ-ಹೊರಗು' ಪುಸ್ತಕ ಬಿಡುಗಡೆ ಆಗಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅರಿವು ಭಾರತದ ಶಿವಪ್ಪ ಅರಿವು, 'ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಉದ್ಘಾಟಿಸಲಿದ್ದಾರೆ. ಸಚಿವರಾದ ಸತೀಶ ಜಾರಕಿಹೊಳಿ ಅವರು ಒಳ-ಹೊರಗು ಪುಸ್ತಕ ಬಿಡುಗಡೆಗೊಳಿಸಿದರೆ. ಮಹದೇವಪ್ಪ ಅವರು ಛಾಯಾಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ' ಎಂದು ತಿಳಿಸಿದರು.

ಜಾತಿ, ಆದಾಯ ಪ್ರಮಾಣ ಪತ್ರಕ್ಕಾಗಿ ಸಹಾಯವಾಣಿ ಆರಂಭ: ಡಿ.ಸಿ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿಗಳ ಮುಷ್ಕರದಿಂದ ಜಾತಿ–ಆದಾಯ ಪ್ರಮಾಣ ಪತ್ರ ಪಡೆಯಲು ವಿಳಂಬವಾಗುತ್ತಿದೆ. ವಿದ್ಯಾರ್ಥಿ ಗಳಿಗೆ, ಅಭ್ಯರ್ಥಿಗಳಿಗೆ ಇದರಿಂದ ತೊಂದರೆಯಾಗದಂತೆ ಮಾಡಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿಯನ್ನು ಆರಂಭಿಸಲಾಗಿದೆ.

ನಗರ ಜಿಲ್ಲೆಯಲ್ಲಿ ಪರೀಕ್ಷೆ, ನೇಮಕಾತಿ ಇನ್ನಿತರ ಉದ್ದೇಶಗಳಿಗಾಗಿ ತ್ವರಿತವಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಅಗತ್ಯ ಇರುವವರು ಸಹಾಯವಾಣಿ ಸಂಖ್ಯೆ 9019913319 ಸಂಪರ್ಕಿಸಬಹುದು. ಕೂಡಲೇ ಸ್ಪಂದಿಸಿ ಪ್ರಮಾಣಪತ್ರ ಒದಗಿಸಲಾಗುವುದು. ವಿದ್ಯಾರ್ಥಿಗಳು, ಪೋಷಕರು ಆತಂಕ ಪಡುವ ಅಗತ್ಯ ಇಲ್ಲ ಎಂದು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ತಿಳಿಸಿದ್ದಾರೆ.

ಹೃದಯದ ಪಿಸುಮಾತಿಗೆ ಸಾಕ್ಷಿಯಾದ ಪ್ರೇಮಿಗಳ ದಿನ

ಪ್ರೇಮಿಗಳ ಹೃದಯ ನಿವೇದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೇಮಿಗಳು ಶುಕ್ರವಾರ ಗುಲಾಬಿ ಹೂವುಗಳನ್ನು ನೀಡಿ ಪ್ರೇಮ ನಿವೇದನೆ ಮಾಡಿ ಹೃದಯದ ಪಿಸು ಮಾತುಗಳನ್ನು ಹಂಚಿಕೊಂಡರು. ಬೆಚ್ಚನೆಯ ಅಪ್ಪುಗೆಯಲ್ಲಿ ಮೈಮರೆತರು. ಕಣ್ಣಲ್ಲೇ ಕಾಡುವ, ಹೃದಯ ವೀಣೆಯನ್ನು ಮೀಟುವ ಕ್ಷಣಗಳಿಗೆ ಪ್ರೇಮಿಗಳ ದಿನ ಸಾಕ್ಷಿಯಾಯಿತು.

ಕಬ್ಬನ್ ಉದ್ಯಾನ, ಲಾಲ್‌ಬಾಗ್, ಹಲಸೂರು ಕೆರೆ, ಸ್ಯಾಂಕಿ ಕೆರೆ, ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಇಂದಿರಾನಗರ, ಕೋರಮಂಗಲದ ಕಾಫಿ ಡೇ ಹಾಗೂ ಪಬ್‌ಗಳಲ್ಲಿ ಯುವಜೋಡಿಗಳು ಭಾರಿ ಸಂಖ್ಯೆಯಲ್ಲಿ ಕಾಣಿಸಿಕೊಂಡರು. ಸಂಗಾತಿಗಳಿಗೆ ಉಡುಗೊರೆ ನೀಡುವ ಮೂಲಕ ವಿಶಿಷ್ಟವಾಗಿ ಆಚರಿಸಿಕೊಂಡರು.

ವಿವಿಧ ಉದ್ಯಾನಗಳು, ರಸ್ತೆಗಳಲ್ಲಿ ಕೈ ಹಿಡಿದು ನಡೆಯುವ ಜೋಡಿಗಳು, ಅಲ್ಲಲ್ಲಿ ಆತುಕೊಂಡು ಕುಳಿತುಕೊಂಡ ಜೋಡಿಗಳು, ಅಪ್ಪುಗೆಯಲ್ಲಿ ಮೈಮರೆತ ಜೋಡಿಗಳು ಕಂಡರು.

ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಗಳಲ್ಲಿ ಒಂದು ಗುಲಾಬಿ ಹೂವಿಗೆ ₹10, ಕೆಲವು ಸಂದರ್ಭಗಳಲ್ಲಿ ಎರಡು ಗುಲಾಬಿ ಹೂಗಳು ₹10ಕ್ಕೆ ಮಾರಾಟವಾಗುತ್ತಿದ್ದವು. ಪ್ರೇಮಿಗಳ ದಿನದ ಅಂಗವಾಗಿ ಒಂದು ಗುಲಾಬಿಯ ದರ ₹30ಕ್ಕೆ ಏರಿತ್ತು.

ಕತ್ತೆಗಳಿಗೆ ಮದುವೆ: ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕತ್ತೆಗಳಿಗೆ ಮದುವೆ ಮಾಡುವ ಮೂಲಕ ಪ್ರೇಮಿಗಳ ದಿನವನ್ನು ವಿಶಿಷ್ಟವಾಗಿ ಆಚರಿಸಲಾಯಿತು.

ಕತ್ತೆಗಳನ್ನು ಮದುಮಕ್ಕಳಂತೆ ಸಿಂಗರಿಸಲಾಗಿತ್ತು. ಕತ್ತೆಯ ಕುತ್ತಿಗೆಗೆ ತಾಳಿ ಕಟ್ಟಿ ಮಂಗಳವಾದ್ಯ ನುಡಿಸಲಾಯಿತು. ಅಕ್ಷತೆ ಕಾಳು ಹಾಕಿ ಹರಸಲಾಯಿತು.

ಪ್ರೇಮಿಗಳ ದಿನ ಯಾರೂ ಪ್ರೇಮಿಗಳಿಗೆ ತೊಂದರೆ ಕೊಡದಂತೆ ಸರ್ಕಾರ ರಕ್ಷಣೆ ನೀಡಬೇಕು. ಫೆಬ್ರುವರಿ 14ರಂದು ರಜೆ ಘೋಷಣೆ ಮಾಡಬೇಕು. ಮದುವೆಯಾಗುವ ಪ್ರೇಮಿಗಳಿಗೆ ₹2 ಲಕ್ಷ ಪ್ರೋತ್ಸಾಹಧನ ನೀಡಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.



ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಶುಕ್ರವಾರ ಪ್ರೇಮಿಗಳು ಕೈ ಹಿಡಿದು ಸಾಗಿದ ಕ್ಷಣ —ಪ್ರಜಾವಾಣಿ ಚಿತ್ರ

‘88 ಲಕ್ಷ ಗುಲಾಬಿಗಳ ಮಾರಾಟ, ₹11 ಕೋಟಿ ಸಂಗ್ರಹ’

‘ಪ್ರೇಮಿಗಳ ದಿನ ಆಚರಣೆ ಪ್ರಯುಕ್ತ ಈ ವರ್ಷ ಗುಲಾಬಿ ಹೂವಿಗೆ ಹೆಚ್ಚಿನ ಬೇಡಿಕೆಯಿತ್ತು. ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದಲ್ಲಿ (ಐಎಫ್‌ಎಬಿ) ಫೆಬ್ರುವರಿ 1ರಿಂದ 14ರವರೆಗೆ ಒಟ್ಟು 88ಲಕ್ಷ ಗುಲಾಬಿ ಹೂಗಳ ಮಾರಾಟವಾಗಿದ್ದು, ಒಟ್ಟು ₹11 ಕೋಟಿ ವಹಿವಾಟು ನಡೆದಿದೆ’ ಎಂದು ಐಎಫ್‌ಎಬಿ ವ್ಯವಸ್ಥಾಪಕ ನಿರ್ದೇಶಕ ಎಂ. ವಿಶ್ವನಾಥ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಕುಟುಂಬವೆಂದರೆ ಸತಿ-ಪತಿ ಮಾತ್ರವೇ?



ಅಂಜಲಿ ರಾಮಣ್ಣ

ಎಲ್ & ಟಿ ಲಿಮಿಟೆಡ್ ಸಂಸ್ಥೆಯ ಮುಖ್ಯಸ್ಥ ಎಸ್. ಎನ್. ಸುಬ್ರಹ್ಮಣಿಯನ್ ಅವರು ಜಾಗತಿಕವಾಗಿ ಜಾಗೃತಗೊಂಡಿರುವ ಸ್ಪರ್ಧೆಯಲ್ಲಿ ಭಾರತವನ್ನು ಆರ್ಥಿಕವಾಗಿ ಮುನ್ನೆಲೆಗೆ ತರಬೇಕು ಎನ್ನುವ ಉದ್ದೇಶದಿಂದ ಕೆಲಸಗಾರರು ಭಾನುವಾರಗಳಂದೂ ರಜೆ ತೆಗೆದುಕೊಳ್ಳದೆ ವಾರಕ್ಕೆ 90 ಗಂಟೆಗಳ ಕಾಲ ಕೆಲಸ ಮಾಡಬೇಕು. ಅಷ್ಟೇ ಅಲ್ಲದೇ 'ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ದಿಟ್ಟಿಸುತ್ತಾ ಕೂರಬಾರದು' ಎನ್ನುವ ಬೀಸು ಹೇಳಿಕೆಯನ್ನು ನೀಡಿರುವುದು ಈಗ ಕಾರ್ಮಿಕ ವಲಯದಲ್ಲಿ ಚರ್ಚೆ ಕಾವೇರುವಂತೆ ಮಾಡಿದೆ. ಅಸಮಾನ ಸಂಬಳದಿಂದ ಹಿಡಿದು, ಮಹಿಳೆಯರಿಗೆ ಮಾಡಿದ ಅವಮಾನ ಎನ್ನುವವರೆಗೂ ಚರ್ಚೆ ನಡೆಯುತ್ತಿದೆ. ಆದರೆ, ಕುಟುಂಬ ಎಂದರೆ, ಸಂಬಂಧಗಳು ಎಂದರೆ ಕೇವಲ ಗಂಡ ಹೆಂಡತಿಯ ನಡುವಿನದ್ದು ಎನ್ನುವ ಭಾವವನ್ನು ಮನಸ್ಸಿನಲ್ಲಿ ಬಿತ್ತಿದಾಗ ಆಗುವ ಅಪಾಯಗಳ ಬಗ್ಗೆ ಯಾರ ಗಮನವು ಹೋಗಿಲ್ಲವಲ್ಲ!

ಹಾಸ್ಯ ಎನ್ನುವಂತೆ ಕೆಲವು ವರ್ಷಗಳ ಹಿಂದೆ ಕಥೆಯೊಂದು ಚಾಲ್ತಿಯಲ್ಲಿತ್ತು. ಮಹಿಳೆಯೊಬ್ಬಳು ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸಕ್ಕಾಗಿ ಸಂದರ್ಶನಕ್ಕೆ ಹೋದಾಗ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತನ್ನದು ಕೂಡು ಕುಟುಂಬ ಎನ್ನುತ್ತಾಳೆ. ಅದಕ್ಕೆ ಅಧಿಕಾರಿಯೊಬ್ಬರು ಹಾಗಾದರೆ ನಿಮ್ಮ ಕುಟುಂಬದಲ್ಲಿ ಯಾರೆಲ್ಲ ಇದ್ದೀರಾ? ಎಂದು ಕೇಳಿದಾಗ, ಆಕೆ , 'ತಾನು ತನ್ನ ಗಂಡ ಕೂಡಿಕೊಂಡು ಇದ್ದೀವಿ' ಎನ್ನುತ್ತಾಳೆ. ಈ ಕಥೆಗೂ ಸುಬ್ರಹ್ಮಣಿಯನ್ ಅವರ ಹೇಳಿಕೆಗೂ ಎಷ್ಟೊಂದು ಸಾಮ್ಯತೆ!

ಒಂದಷ್ಟು ವರ್ಷಗಳ ಹಿಂದೆ ದೊಡ್ಡ ಕೆಲಸಗಳಿಗೆ ಅಭ್ಯರ್ಥಿಯನ್ನು ತೆಗೆದುಕೊಳ್ಳುವಾಗ ಕೌಟುಂಬಿಕ ಹಿನ್ನೆಲೆಯನ್ನು ಹೇಳುವುದು ಕಡ್ಡಾಯವಾಗಿತ್ತು. ಕಾರಣ, ಕುಟುಂಬದ ಚಿತ್ರಣ ವ್ಯಕ್ತಿಯ ಮಾನಸಿಕ ಆರೋಗ್ಯಕ್ಕೆ ಮಾಪಕ. ಗಂಡ–ಹೆಂಡತಿಯಿಂದ ಮೊದಲಿಟ್ಟು ಅಪ್ಪ, ಅಮ್ಮ, ಮಕ್ಕಳು, ಅಜ್ಜಿ, ತಾತ, ಚಿಕ್ಕಪ್ಪ, ಅತ್ತೆ, ಭಾವ, ಅಳಿಯ ಹೀಗೆ ಬಾಂಧವ್ಯಗಳ ಒಡನಾಟ ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಯಾವುದೂ ಬೇಡ ಯಾರೂ ಬೇಡ ಎನ್ನುವವರು ದೇಶದ ಅರ್ಥಿಕತೆಗೂ ಪೆಟ್ಟು ನೀಡುತ್ತಾರೆ ಹೌದು. ಅವಿಭಕ್ತ ಕುಟುಂಬಗಳ ಕಣ್ಮರೆಯಿಂದ ಈಗಾಗಲೇ ಸಾಮಾಜಿಕ ಸಾಗುವಳಿಗೆ ಆಗಿರುವ ಹಾನಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ನಡೆದಿರುವ ಸಂಶೋಧನೆಗಳು ಕುಟುಂಬದವರೊಡನೆ ಒಡನಾಡಿ, ಕುಟುಂಬಕ್ಕೆ ಸಮಯ ಮೀಸಲಿಡಿ, ಕುಟುಂಬದ ಜತೆ ಗುಣಮಟ್ಟದ ಸಮಯ ಕಳೆಯಿರಿ ಎಂದೆಲ್ಲಾ ಹೇಳುತ್ತಿವೆ.

ಮನುಷ್ಯನೊಬ್ಬನ ಮಾನಸಿಕ ಸಮತೋಲನ ಸುಸ್ಥಿರವಾಗಿರಬೇಕು. ಆ ಮೂಲಕ ದೇಹಾರೋಗ್ಯ ನಳನಳಿಸಬೇಕು ಎಂದರೆ ಆತ ಕುಟುಂಬ ಎನ್ನುವ ಜಾಲದೊಳಗಿರಬೇಕು. ಕೇವಲ ಗಂಡ ಮತ್ತು ಹೆಂಡತಿ ಇಬ್ಬರೇ ಎಂದಿಗೂ ಕುಟುಂಬ ಎನಿಸಿಕೊಳ್ಳುವುದಿಲ್ಲ. ಲಕ್ಷಾಂತರ ರೂಪಾಯಿಗಳ ಸಂಪಾದನೆ ಇದ್ದ ಸಾಫ್ಟ್‌ವೇರ್ ತಂತ್ರಜ್ಞರು ಅನಾಥಪ್ರಜ್ಞೆಯಿಂದ ನರಳಿ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳೂ ನಮ್ಮ ಕಣ್ಮುಂದಿವೆ.

ಮನೆಯಿಂದ ಓಡಿಹೋಗುವ ಮಕ್ಕಳನ್ನೋ, ಕೌಟುಂಬಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಎದುರು ನಿಲ್ಲುವ ಮಕ್ಕಳನ್ನೋ ಒಮ್ಮೆ ಮಾತನಾಡಿಸಬೇಕು; ಕುಟುಂಬ ಎಂದರೆ ಏನು ಮತ್ತು ಅದರ ಮಹತ್ವ ಏನು ಎಂದು ತಿಳಿಯಲು. ತಂದೆಯೊಬ್ಬನಿಲ್ಲ ಎಂದು ಕೊರಗುವ ಮಗಳು, ಹೆಂಡತಿ, ಮಗಳನ್ನು ಕಳೆದುಕೊಂಡ ವೃದ್ಧ ವ್ಯಕ್ತಿಯೂ ಸಿಗುತ್ತಾನೆ ಇಲ್ಲಿ. ತುಂಬು ಜೀವನ ನಡೆಸಿ ಜೀವನಯಾತ್ರೆ ಮುಗಿಸಿದ ಅಜ್ಜಿಗೆ ದೇವಸ್ಥಾನ ಕಟ್ಟಿಸಿದ ಮೊಮ್ಮಕ್ಕಳು ಇರುವಂತೆಯೇ, ದೊಡ್ಡಪ್ಪನ ಸೇವೆಗಾಗಿ ಕೆಲಸ ಬಿಟ್ಟು ನಿಂತ ತಮ್ಮನ ಮಕ್ಕಳೂ ಇದ್ದಾರೆ. ಒಂಟಿಯಾದ ಸೋದರತ್ತೆಯನ್ನು ಸಾಕುವ ಅಣ್ಣನ ಮಕ್ಕಳು, ಚಿಕ್ಕಮ್ಮನ ಮನೆ ತೂಗಿಸುವ ಅಕ್ಕನ ಮಕ್ಕಳು ಎಲ್ಲರೂ ಸೇರಿಯೇ ಕುಟುಂಬ. ಇವರೆಲ್ಲರ ಇರುವಿಕೆಯೇ ಬದುಕು. ಈ ಸಂಬಂಧಗಳನ್ನು ದಿಟ್ಟಿಸಿ ನೋಡುತ್ತಾ ಕೂರಬೇಕಿಲ್ಲ, ಕರ್ತವ್ಯಪ್ರಜ್ಞೆಯಲ್ಲಿ ಗಟ್ಟಿಗೊಳಿಸಿಕೊಂಡರೆ ಸಾಕು.


ಕುಟುಂಬ ಎಂದರೆ ಗಂಡ ಹೆಂಡತಿ ಮಾತ್ರ ಎಂದು ಬಿಂಬಿಸುವುದು, ಮದುವೆಯೆಂದರೆ ಸ್ವಾತಂತ್ರ್ಯ ಹರಣ ಎಂದುಕೊಳ್ಳುವುದು, ಮಕ್ಕಳನ್ನು ಹೆರುವುದೆಂದರೆ ಹೊರೆ ಎನ್ನುವುದು, 'ಸೆಲ್ಫ್ ಲವ್' ಎನ್ನುವ ಹೆಸರಿನಲ್ಲಿ ಸ್ವಾರ್ಥವನ್ನೇ ತಲೆಗೆ ತುಂಬಿಸುವುದು, 'ವರ್ಕೋಹಾಲಿಕ್' ಎನ್ನುವುದು ಹೊಗಳಬೇಕಾದ ವಿಶೇಷತೆ ಎಂದು ಕಾಣುವುದು, ನೆಂಟರೆಂದರೆ ಗಂಟುಕಳ್ಳರು, ಇಷ್ಟರು ಎಂದರೆ ಅನಿಷ್ಟರು ಎನ್ನುವ ಭಾವನೆಯನ್ನು ವಿಷದಂತೆ ಉಣಿಸಲಾಗುತ್ತಿದೆ.

ಕುಟುಂಬ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಇಂತಹ ಬೋಧನೆಗಳನ್ನು ನಂಬಿಕೊಂಡು ಮುಂದಡಿಯಿಡುವ ತಲೆಮಾರುಗಳು ಭಾವನಾತ್ಮಕವಾಗಿ ದುರ್ಬಲರಾಗುತ್ತಾರೆ. ಸಬಲತೆ ಎಂದರೆ ಬರಿಯ ಹಣಕಾಸಿನ ಸ್ಥಿರತೆ ಅಲ್ಲ. ತನ್ನನ್ನು ತಾನು ನೋಡಿಕೊಳ್ಳಲಾಗದವ ದೇಶದ ಆರ್ಥಿಕ ಸ್ಥಿತಿಗೆ ಕೊಡುಗೆ ಕೊಡಲಾರ ಭಾರವಾಗುತ್ತಾನೆ. ವಿಶ್ವ ಆರೋಗ್ಯ ಸಂಸ್ಥೆಯೇ ನೀಡಿರುವ ವ್ಯಾಖ್ಯಾನದಂತೆ 'ಆರೋಗ್ಯ' ಎಂದರೆ ದೇಹಕ್ಕೆ ಅನಾರೋಗ್ಯ ಇಲ್ಲ ಎನ್ನುವುದಲ್ಲ. ಬದಲಿಗೆ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸುಸ್ಥಿರತೆ ಇರುವುದು'. ಇಂಥ ಭಾವಭದ್ರತೆ ನೀಡುವುದು ಕುಟುಂಬ ಮತ್ತು ಕುಟುಂಬದೊಡನೆ ವ್ಯಕ್ತಿಯೊಬ್ಬ ತೊಡಗಿಸಿಕೊಳ್ಳುವ ಪರಿಯೂ ಅಮೂಲ್ಯವಾದದ್ದು. ಅತಿಯಾದರೆ ಅಮೃತವೂ ವಿಷವೇ ಆಗುವಂತೆ ಕುಟುಂಬದಲ್ಲಿ ತನ್ನ ಪಾತ್ರಮಿತಿಯ ಅರಿವಿಲ್ಲದೆ ಇರುವುದೂ ಅಪಾಯ, ಅಂತೆಯೇ ಉದ್ಯೋಗದಲ್ಲಿನ ಅತಿ ಮಗ್ನತೆಯೂ ವಿನಾಶಕಾರಿ. ಎರಡರ ನಡುವಿನ ಸಮತೋಲನ ಕಾಪಾಡಿಕೊಳ್ಳಲು ಬೆಂಬಲವಾಗಿ ನಿಲ್ಲಬೇಕಾದ್ದು ಕುಟುಂಬದ ಸದಸ್ಯರ ಹೊಣೆಗಾರಿಕೆ ಮಾತ್ರವಲ್ಲ ಉದ್ಯೋಗದಾತರ ಕರ್ತವ್ಯವೂ ಹೌದು.

❖

ಋತುಬಂಧಕ್ಕೂ ಹೃದಯದ ಆರೋಗ್ಯಕ್ಕೂ ನಂಟು!

ಕಾಳಜಿ



ಡಾ. ನಿಶಾ ಬುಚಾಡೆ

ಋತುಬಂಧ ಹಂತ ತಲುಪುವುದು ಮಹಿಳೆಯರಲ್ಲಿ ಸಾಮಾನ್ಯ. ಈ ವೇಳೆ ಮಹಿಳೆಯರ ದೇಹದ ಹಾರ್ಮೋನುಗಳಲ್ಲಿ ಏರಿಳಿತ ಕಂಡುಬರುತ್ತದೆ. ಇದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಅದರಲ್ಲಿ ಹೃದ್ರೋಗ ಕಾಯಿಲೆಯೂ ಒಂದು.

ಋತುಬಂಧ ಎನ್ನುವುದು ಮಹಿಳೆಯರ ಮಾಸಿಕ ಋತುಚಕ್ರದ ಅಂತ್ಯ ಅಥವಾ ಮುಟ್ಟು ನಿಲ್ಲುವ ಸೂಚನೆ. ಸಾಮಾನ್ಯವಾಗಿ ಈ ಋತುಬಂಧವು 45 ರಿಂದ 55 ವರ್ಷ ವಯಸ್ಸಿನ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತದೆ. ದೇಹದಲ್ಲಿ ಈಸ್ಟ್ರೋಜೆನ್, ಪ್ರೊಜೆಸ್ಟರಾನ್ ಹಾರ್ಮೋನ್‌ಗಳ ಸ್ರವಿಸುವಿಕೆ ಮಟ್ಟವು ಕಡಿಮೆಯಾಗುವ ಸಾಧ್ಯತೆಯಿರುತ್ತದೆ.

ಈ ಸಂದರ್ಭದಲ್ಲಿ ಹೃದ್ರೋಗ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ರಕ್ತನಾಳಗಳಲ್ಲಿ ತಡೆ ಉಂಟಾಗುವ ಸಮಸ್ಯೆಗಳಿಂದಾಗಿ ಮಹಿಳೆಯರು ಸಾವಿಗೂ ತುತ್ತಾಗುವ ಸಾಧ್ಯತೆ ಇರುತ್ತದೆ. ಮಹಿಳೆಯರು ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಿಸುವ ಮೂಲಕ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಈಸ್ಟ್ರೋಜೆನ್ ಸ್ರವಿಸುವಿಕೆಯ ಮಟ್ಟ ಕುಸಿತಗೊಳ್ಳುವುದರಿಂದ ಹೃದಯಕ್ಕೆ ರಕ್ತ ಪೂರೈಸುವ ರಕ್ತನಾಳದ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ. ಇದರಿಂದ ಅಧಿಕ ರಕ್ತದೊತ್ತಡ, ಅನಾರೋಗ್ಯಕರ ಕೊಬ್ಬಿನ ಶೇಖರಣೆ ಹೆಚ್ಚುತ್ತದೆ. ಇವುಗಳಿಂದಾಗಿ ಹೃದ್ರೋಗದ ಸಾಧ್ಯತೆ ಹೆಚ್ಚು.

ಋತುಬಂಧದ ಹಂತದಲ್ಲಿ ಇನ್ಸುಲಿನ್ ಪ್ರತಿರೋಧ, ಜೀರ್ಣವ್ಯವಸ್ಥೆಯಲ್ಲಿ ಬದಲಾವಣೆಗಳು ಮತ್ತು ತೂಕ ಹೆಚ್ಚಳ ಉಂಟಾಗಬಹುದು. ಇದೂ ಹೃದ್ರೋಗಕ್ಕೆ ಕಾರಣವಾಗಬಹುದು. ಹಾಗಾಗಿ ಋತುಬಂಧ ಹಂತಕ್ಕೆ ಸಮೀಪ ಇರುವ ಮಹಿಳೆಯರು ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ.

ಈ ಸಂದರ್ಭದಲ್ಲಿ ಹಣ್ಣು, ತರಕಾರಿ, ಧಾನ್ಯಗಳು, ಕಡಿಮೆ ಕೊಬ್ಬಿನಾಂಶವಿರುವ ಪ್ರೋಟೀನ್ ಮತ್ತು ಆರೋಗ್ಯಕರ ಕೊಬ್ಬಿನಾಂಶ ಇರುವ ಆಹಾರವನ್ನು ಹೇರಳವಾಗಿ ಸೇವಿಸುವ ಮೂಲಕವೂ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಸಾಲ್ಮನ್, ಅಗಸೆಬೀಜ ಮತ್ತು ವಾಲ್ನಟ್‌ಗಳಂಥ ಒಮೆಗಾ-3 ಕೊಬ್ಬಿನಾಂಶ ಅಧಿಕವಾಗಿರುವ ಆಹಾರಗಳನ್ನು ಸೇವಿಸಬೇಕು. ಇದರಿಂದ ರಕ್ತದ ಹರಿವಿನ ಪ್ರಮಾಣ ಸುಸ್ಥಿತಿಯಲ್ಲಿರುತ್ತದೆ. ಆ ಮೂಲಕ ಹೃದಯವನ್ನು ಆರೋಗ್ಯಕರವಾಗಿ ಇರಿಸಬಹುದು.

ಸಂಸ್ಕರಿಸಿದ ಆಹಾರಗಳು, ಅತಿಯಾದ ಸಕ್ಕರೆ ಮತ್ತು ಅನಾರೋಗ್ಯಕರ ಕೊಬ್ಬಿನಾಂಶವಿರುವ ಆಹಾರವನ್ನು ಸೇವಿಸದಿರುವುದು ಒಳಿತು. ನಿಯಮಿತ ವ್ಯಾಯಾಮಕ್ಕೆ ಒತ್ತು ನೀಡಿ. ತೂಕ ನಿರ್ವಹಣೆ ಮಾಡಿ. ಇದರಿಂದ ರಕ್ತ ಪರಿಚಲನೆ ಸುಧಾರಿಸುತ್ತದೆ. ಒತ್ತಡ ಕಡಿಮೆಯಾಗುತ್ತದೆ. ಹೃದಯ ರಕ್ತನಾಳದ ಕಾರ್ಯ ಹೆಚ್ಚುತ್ತದೆ.

ವಯಸ್ಸಾದಂತೆ ಸ್ನಾಯುವಿನ ಬಲ ಮತ್ತು ಮೂಳೆ ಸಾಂದ್ರತೆ ಕಡಿಮೆಯಾಗುತ್ತದೆ. ಇದನ್ನು ಕಾಪಾಡಿಕೊಳ್ಳಲು ಶಕ್ತಿ ತರಬೇತಿ ವ್ಯಾಯಾಮಗಳು ಪ್ರಯೋಜನಕಾರಿ.

ಋತುಬಂಧದ ಸಮಯದಲ್ಲಿ ದೈಹಿಕವಾಗಿ ಸಕ್ರಿಯವಾಗಿರುವುದು ಮಾನಸಿಕ ಒತ್ತಡ ಮತ್ತು ಆತಂಕವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ದೈಹಿಕ ವ್ಯಾಯಾಮದ ಜೊತೆಗೆ ಮಹಿಳೆಯರು ಧ್ಯಾನ, ದೀರ್ಘ ಉಸಿರಾಟ, ಒತ್ತಡ ಕಡಿಮೆ ಮಾಡಿಕೊಳ್ಳುವ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಮಾನಸಿಕವಾಗಿ ಸದೃಢರಾಗಬಹುದು. ಉತ್ತಮ ನಿದ್ರೆ ಕೂಡ ಬಹಳ ಅವಶ್ಯಕ. ನಿಯಮಿತ ಆರೋಗ್ಯ ತಪಾಸಣೆಯ ಮೂಲಕ ರಕ್ತದೊತ್ತಡ, ಕೊಲೆಸ್ಟ್ರಾಲ್ ಮಟ್ಟ, ಮಧುಮೇಹದ ಬಗ್ಗೆ ಎಚ್ಚರ ವಹಿಸಬೇಕು. ನಿಯಮಿತ ತಪಾಸಣೆಯಿಂದ ಹೃದ್ರೋಗವನ್ನು ಮೊದಲೇ ಪತ್ತೆ ಹಚ್ಚಿದರೆ ಚಿಕಿತ್ಸೆ ಸುಲಭವಾಗುತ್ತದೆ.

❖

ಕೋಪಿಷ್ಠ ಗಂಡನನ್ನು ಸಂಭಾಳಿಸೋದು ಹೇಗೆ?

ಅಂತರಂಗ



ಅಕ್ಷರ ದಾಮ್ಲೆ

- **ಕೋಪಿಷ್ಠ, ಸಂವೇದನಾರಹಿತ ಮನಸ್ಥಿತಿಯ ಗಂಡನನ್ನು ಸಂಭಾಳಿಸೋದು ಹೇಗೆ? ದಯವಿಟ್ಟು ತಿಳಿಸಿ ಸರ್.**

ಕೆಲವೊಂದು ಬಾರಿ ಜೀವನದಲ್ಲಿ ಯಾಕೆ ಹೀಗೆ ಎನ್ನುವುದಕ್ಕೆ ಉತ್ತರಗಳು ಸಿಗುವುದಿಲ್ಲ. ನಾವೆಲ್ಲಾ ಒಳ್ಳೆಯದನ್ನೇ ಮಾಡಿದ್ದರೂ, ಯಾಕೆ ನಮಗೇ ಕಷ್ಟಗಳು ಬರುತ್ತವೆ? ನಾವು ಎಲ್ಲರನ್ನೂ ಅರ್ಥಮಾಡಿಕೊಳ್ಳುವವರಾದರೂ, ಯಾಕೆ ನಮ್ಮ ಜೊತೆ ಇರುವವರು ನಮ್ಮನ್ನು ಅರ್ಥ ಮಾಡಿಕೊಳ್ಳುವುದಿಲ್ಲ? ನಾವು ಎಷ್ಟೇ ಸಮಾಧಾನದಿಂದ ಇದ್ದರೂ, ಯಾಕೆ ನಮ್ಮ ಜೊತೆಗಿರುವವರು ಅದನ್ನೇ ನಮ್ಮ ದೌರ್ಬಲ್ಯ ಅಂತ ಅಂದುಕೊಂಡು ಮತ್ತೆ ಮತ್ತೆ ತಮ್ಮ ಕೋಪವನ್ನು ನಮ್ಮ ಮೇಲೆ ತೋರ್ಪಡಿಸುತ್ತಿರುತ್ತಾರೆ?

ಹೀಗೆ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ, ಒಂದರ ನಂತರ ಒಂದರಂತೆ ಮುಗಿಯದ ಸರಮಾಲೆಯಾಗುತ್ತದೆ. ಆದರೆ, ನಾವು ಜೀವನದಲ್ಲಿ ಒಂದು ಅರ್ಥಮಾಡಿಕೊಳ್ಳಬೇಕಾದದ್ದು ಏನೆಂದರೆ, ನಾವು ಸಮಸ್ಯೆಯ ಬಲಿಪಶುಗಳಾಗಬೇಕಾ? ಅಥವಾ ಸಮಸ್ಯೆಗಳನ್ನು ಮೀರಿ ನಿಂತು ಹಾರಾಡಬೇಕಾ?!

ಗಂಡ ಯಾವತ್ತೂ ಕೋಪಿಷ್ಠನಾದರೆ, ಅಥವಾ ಭಾವನಾತ್ಮಕವಾಗಿ ಅರ್ಥಮಾಡಿಕೊಳ್ಳದವನಾದರೆ, ಅದು ಒಂದು ರೀತಿಯಲ್ಲಿ ಉಸಿರುಗಟ್ಟಿಸುವ ಪರಿಸ್ಥಿತಿಯನ್ನು ಉಂಟುಮಾಡಬಹುದು. ಮಾತ್ರವಲ್ಲ ಅದರಿಂದಾಗಿ ಅಸಹಾಯಕತೆಯೂ ಉಂಟಾಗಬಹುದು. ಯಾಕೆಂದರೆ, ಜೀವನವನ್ನು ಹಂಚಿಕೊಂಡು ಬಾಳಿ ಬದುಕುವ ಉದ್ದೇಶದೊಂದಿಗೆ ಮದುವೆಯಾಗಿ, ಆಮೇಲೆ ಆ ಸಂಬಂಧದಿಂದ ಮೂಲಭೂತವಾಗಿ ಸಿಗಬೇಕಾದ ಮತ್ತು ಸಹಜವಾಗಿಯೇ ಬಯಸುವ ಬೆಸುಗೆ ಸಿಗದಿದ್ದಾಗ ಮೈಪರಚಿಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಆದರೆ ಪ್ರಶ್ನೆ ಇರುವುದು 'ಅಂಥ ಪರಿಸ್ಥಿತಿಗೆ ಬಲಿಪಶುಗಳಾಗಬೇಕೇ ಅಥವಾ ಅದನ್ನು ಮೆಟ್ಟಿ ನಿಲ್ಲಬೇಕೇ?'

ಬಲಿಪಶುಗಳಾಗಿ ಜೀವನದಲ್ಲಿ ದುಃಖವನ್ನೇ ಅನುಭವಿಸುವ ಬದಲು, ಮೆಟ್ಟಿ ನಿಲ್ಲುವುದು ಒಳ್ಳೆಯ ಮಾರ್ಗ. ಆದರೆ, ಅಷ್ಟೇ ಕಷ್ಟದ ಮಾರ್ಗ ಕೂಡಾ. ಯಾಕೆಂದರೆ, ಈ ಎರಡು ವಿಚಾರಗಳ ಕುರಿತು ನೀವು ಗಂಡನೊಡನೆ ಸಂಭಾಷಣೆಗೆ ತೊಡಗಿದರೂ, ಅದು ಸಂಭಾಷಣೆಯಾಗಿ ಉಳಿಯದೆ, ಜಗಳ ಅಥವಾ ವಾದ–ವಿವಾದಗಳಾಗುವ ಸಾಧ್ಯತೆಯೇ ಜಾಸ್ತಿ. ಆದರೆ, ಅದನ್ನು ಎದುರಿಸುವ ಧೈರ್ಯವನ್ನು ನೀವು ಮಾಡಿದರೆ, ಪರಿಸ್ಥಿತಿಯನ್ನು ಹತೋಟಿಗೆ ತರಬಹುದು. ಮಾತ್ರವಲ್ಲ, ಅದರಿಂದ, ನಿಮ್ಮ ಜೀವನ ಸುಂದರವಾಗಬಹುದು. ದೇಹದಲ್ಲಿ ಏನಾದರೂ ದೊಡ್ಡ ಸಮಸ್ಯೆಯಾದಾಗ, ಶಸ್ತ್ರಚಿಕಿತ್ಸೆಯ ಅಗತ್ಯ ಬಂದಲ್ಲಿ, ಒಂದು ಬಾರಿ ಶಸ್ತ್ರಚಿಕಿತ್ಸೆಯನ್ನು ಮಾಡುವುದು ಬಹಳ ನೋವಿನಿಂದ ಕೂಡಿರುತ್ತದೆ. ಆದರೆ, ಅದರಿಂದ ಸಮಸ್ಯೆ ಪರಿಹಾರವಾಗುತ್ತದೆ.

ಅದೇ ರೀತಿ ನಿಮ್ಮ ಸಂಬಂಧದಲ್ಲಿ ಇರುವಂತಹ ಸಮಸ್ಯೆಗೆ ಸರ್ಜರಿಯ ಅಗತ್ಯವಿದೆ. ಹೇಗೆ ಮಾಡಬಹುದು?

1.ಮೊದಲನೆಯದಾಗಿ ನಿಮ್ಮ ಗಂಡ ಕೋಪಗೊಂಡಂಥ ಸಂದರ್ಭದಲ್ಲಿ ಅದು ನಿಮಗೆ ಹೇಗೆ ಮಾನಸಿಕವಾಗಿ ತೊಂದರೆ ಕೊಡುತ್ತದೆ ಎಂಬುದನ್ನು ತಿಳಿಸಿ.

2. ಆಮೇಲೆ, ಕೋಪಗೊಳ್ಳುವುದರ ಬದಲು, ಅವರು ಅದೇ ವಿಚಾರಗಳನ್ನು ಹೇಗೆ ನಿಮಗೆ ತಿಳಿಸಬಹುದು ಎಂಬುವುದನ್ನು ವಿವರಿಸಿ.

3. ನಿಮ್ಮಲ್ಲಾಗುತ್ತಿರುವ ಭಾವನಾತ್ಮಕ ತುಮುಲಗಳನ್ನು ಅವರೊಡನೆ ಹಂಚಿಕೊಳ್ಳಿ.

4. ಕೆಲವೊಂದು ವಿಚಾರಗಳನ್ನು ನೀವು ನೇರವಾಗಿ ಮತ್ತು ಸ್ಪಷ್ಟವಾಗಿ ಹೇಳಬೇಕಾಗಬಹುದು. ಅವರೇ ಅರ್ಥಮಾಡಿಕೊಳ್ಳಲಿ ಎಂದು ಅಪೇಕ್ಷಿಸಬೇಡಿ. ಯಾಕೆಂದರೆ, ಬಹುಷಃ ಅವರಿಗೆ ನಿಮ್ಮ ಭಾವನಾತ್ಮಕ ಅಭಿವ್ಯಕ್ತಿಗಳು ಅರ್ಥವಾಗದೇ ಹೋಗಬಹುದು.

5. ಇನ್ನು ಏನಾದರೂ ಭಿನ್ನಾಭಿಪ್ರಾಯಗಳಿದ್ದರೆ, ಅವುಗಳನ್ನು ಸಮಾಲೋಚಿಸಿ ದೂರಮಾಡಿ ಅಥವಾ ಯಾವುದಾದರೂ ಒಂದು ಒಪ್ಪಂದಕ್ಕೆ ಬನ್ನಿ.

ಹೀಗೆ ಮಾಡಿದರೆ, ನಿಮ್ಮ ಜೀವನದಲ್ಲಿ ಉತ್ತಮವಾದಂಥ ಬೆಸುಗೆ ಉಂಟಾಗುವುದಕ್ಕೆ ಸಾಧ್ಯ. ಮಾತ್ರವಲ್ಲ, ಅದರಿಂದ ನೀವಿಬ್ಬರೂ ಸಂತೋಷವಾಗಿರಬಹುದು.

ಮಕ್ಕಳಿಗಾಗಿ ಆರೋಗ್ಯಕರ ಸ್ನ್ಯಾಕ್ಸ್

ರಸಾಸ್ವಾದ



ಮಕ್ಕಳಿಗೆ ಪರೀಕ್ಷೆಗಳು ಸಮೀಪಿಸುತ್ತಿದ್ದು, ಗಂಟೆಗಟ್ಟಲೆ ಒಂದೇ ಸ್ಥಳದಲ್ಲಿ ಕುಳಿತು ಓದುವುದರಿಂದ ಅವರಿಗೆ ಏನಾದರೂ ಸವಿಯಬೇಕು ಅನ್ನಿಸುವುದು ಸಹಜ. ಮಕ್ಕಳಿಗಾಗಿ ಅಂಗಡಿಯಲ್ಲಿ ಸಿಗುವ ಪ್ಯಾಕೇಟ್ ಸ್ನ್ಯಾಕ್ಸ್ ಕೊಳ್ಳುವ ಬದಲು ಇಲ್ಲಿರುವ ರೀತಿ ತಯಾರಿಸಿ ಕೊಟ್ಟರೆ ಆರೋಗ್ಯಕ್ಕೆ ಒಳ್ಳೆಯದು. ಇವುಗಳನ್ನು ಮಕ್ಕಳು ಕೂಡ ಸುಲಭವಾಗಿ ತಯಾರಿಸಬಹುದು. ಒಮ್ಮೆ ತಯಾರಿಸಿದರೆ ತಿಂಗಳವರೆಗೆ ಸವಿಯಬಹುದು. ಇವುಗಳ ರೆಸಿಪಿ ನೀಡಿದ್ದಾರೆ ವೇದಾವತಿ ಎಚ್.ಎಸ್.

ರವಾ ಕಾಯ್ನ್ ಮಸಾಲ ಪೂರಿ

ಬೇಕಾಗುವ ಸಾಮಗ್ರಿಗಳು: ಚಿರೋಟಿ ರವೆ 2 ಕಪ್, ಉಪ್ಪು 1/2 ಟೀ ಚಮಚ, ಜೀರಿಗೆ ಪುಡಿ 1/2 ಟೀ ಚಮಚ, ತುಪ್ಪ 1 ಟೀ ಚಮಚ, ನೀರು ಅಂದಾಜು 1/2 ಕಪ್, ಕರಿಯಲು ಎಣ್ಣೆ, ಚೀಸ್ ಪೌಡರ್, ಮಿಂಟ್ ಮಸಾಲ ಪೌಡರ್, ಚಟ್ ಪಟ್ ಮಸಾಲ ಪೌಡರ್.

ಮಿಂಟ್ ಮಸಾಲ ಪುಡಿ: ಜಲ್ ಜೀರಾ ಪೌಡರ್ ಅಥವಾ ಚಾಟ್ ಮಸಾಲ ಪೌಡರ್ 1 ಟೀ ಚಮಚ, ಪುದೀನಾ ಪೌಡರ್ 1 ಟೀ ಚಮಚ (ಪುದೀನಾ ಸೊಪ್ಪನ್ನು ಬಿಸಿಲಿನಲ್ಲಿ ಒಣಗಿಸಿ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ). ಇವುಗಳನ್ನು ಬಟ್ಟಲಿಗೆ ಹಾಕಿ ಮಿಶ್ರಣ ಮಾಡಿಟ್ಟುಕೊಳ್ಳಿ.

ಚಟ್ ಪಟ್ ಮಸಾಲ: ಅಚ್ಚಖಾರದ ಪುಡಿ 1/2 ಟೀ ಚಮಚ, ಉಪ್ಪು 1/2 ಟೀ ಚಮಚ ಪೆರಿ ಪೆರಿ ಮಸಾಲ ಅಥವಾ ಗರಂ ಮಸಾಲ 1/2 ಟೀ ಚಮಚ. ತಿಳಿಸಿರುವ ಸಾಮಗ್ರಿಗಳನ್ನು ಬಟ್ಟಲಿಗೆ ಹಾಕಿ ಮಿಶ್ರಣ ಮಾಡಿಟ್ಟುಕೊಳ್ಳಿ.

ತಯಾರಿಸುವ ವಿಧಾನ: ಚಿರೋಟಿ ರವೆ, ಉಪ್ಪು, ಜೀರಿಗೆ ಪುಡಿ ಇಷ್ಟನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ಪುಡಿಕೊಳ್ಳಿ. ಬಳಿಕ ಬಟ್ಟಲಿಗೆ ಹಾಕಿಕೊಳ್ಳಿ. 1 ಟೀ ಚಮಚ ತುಪ್ಪವನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ನಂತರ ನೀರನ್ನು ಸೇರಿಸಿ ಚೆನ್ನಾಗಿ ನಾದಿಕೊಂಡು ಮೃದುವಾದ ಹಿಟ್ಟನ್ನು ತಯಾರಿಸಿಕೊಳ್ಳಿ. ಕಾಲು ಗಂಟೆ ಮುಚ್ಚಿಡಿ. ಬಳಿಕ ಹಿಟ್ಟಿನಿಂದ ದೊಡ್ಡ ಉಂಡೆಯನ್ನು ತಯಾರಿಸಿಕೊಂಡು ಚಪಾತಿಯಂತೆ ತೆಳುವಾಗಿ ಲಟ್ಟಿಸಿಕೊಳ್ಳಿ. ಬಳಿಕ ಚಿಕ್ಕ ಚಿಕ್ಕ ರೌಂಡ್ ಶೇಪ್‌ನಲ್ಲಿ (ಚಿಕ್ಕ ಮುಚ್ಚಳದಿಂದ ಕತ್ತರಿಸಿಟ್ಟುಕೊಳ್ಳಿ) ಎಲ್ಲವನ್ನೂ ತಯಾರಿಸಿಟ್ಟುಕೊಳ್ಳಿ.

ಮಧ್ಯಮ ಉರಿಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಂಡು ತಯಾರಿಸಿದ ರವಾ ಕಾಯ್ನ್ ಹಾಕಿ. ಪೂರಿಯಂತೆ ಉಬ್ಬಲು ಪ್ರಾರಂಭವಾಗುತ್ತದೆ. ಎರಡೂ ಬದಿಯೂ ಗರಿಗರಿಯಾಗಿ ಕೆಂಬಣ್ಣಕ್ಕೆ ಬಂದ ಬಳಿಕ ಎಣ್ಣೆಯಿಂದ ತೆಗೆಯಿರಿ. ತಯಾರಿಸಿದ ಪೂರಿಗಳನ್ನು ಮೂರು ಭಾಗ ಮಾಡಿಟ್ಟುಕೊಳ್ಳಿ. ಮಸಾಲೆ ಪುಡಿಯನ್ನು ಒಂದೊಂದಾಗಿ ಮೂರು ಡಬ್ಬಿಗೆ ಹಾಕಿ. ಮೂರು ಭಾಗ ಮಾಡಿರುವ ರವಾ ಕಾಯ್ನ್ ಪೂರಿಯನ್ನು ಸೇರಿಸಿ ಮುಚ್ಚಳ ಮುಚ್ಚಿ. ಮಸಾಲೆ ಪೂರಿಗೆ ಅಂಟಿಕೊಳ್ಳುವಂತೆ ನಿಧಾನವಾಗಿ ಮೇಲೆ ಕೆಳಗೆ ಮಾಡಿ. ಇದನ್ನು ಒಂದು ಡಬ್ಬಿಗೆ ಹಾಕಿ ಗಾಳಿಯಾಡದಂತೆ ಮುಚ್ಚಳ ಮುಚ್ಚಿ. ರವಾ ಕಾಯ್ನ್ ಮಸಾಲ ಪೂರಿಯನ್ನು ಒಂದು ತಿಂಗಳವರೆಗೆ ಸವಿಯಬಹುದು.

ಮೆಕ್ಕೆಜೋಳದ ಚೀಸ್ ನ್ಯಾಚೊಸ್

ಬೇಕಾಗುವ ಸಾಮಗ್ರಿಗಳು: ಮೆಕ್ಕೆಜೋಳದ ಹಿಟ್ಟು ಒಂದೂ ಕಾಲು ಕಪ್, ಮೈದಾ ಹಿಟ್ಟು 1/4 ಕಪ್, ನೀರು 1 ಕಪ್, ಓರಿಗಾನೊ ಪೌಡರ್ 1 ಟೀ ಚಮಚ, ಚಿಟಿಕೆ ಅರಿಶಿನ, ಚೀಸ್ ಪೌಡರ್.

ತಯಾರಿಸುವ ವಿಧಾನ: ಬಾಣಲೆಗೆ ನೀರು, ಉಪ್ಪು ಮತ್ತು ಅರಿಶಿನ ಹಾಕಿ ಕುದಿಸಿಕೊಳ್ಳಿ. ಬಳಿಕ ಒಲೆಯನ್ನು ಆರಿಸಿ ಮೆಕ್ಕೆ ಜೋಳದ ಹಿಟ್ಟನ್ನು ಹಾಕಿ ಮಿಶ್ರಣ ಮಾಡಿ ಐದು ನಿಮಿಷ ಮುಚ್ಚಳ ಮುಚ್ಚಿಡಿ. ನಂತರ ಮೈದಾ ಹಿಟ್ಟು, ಓರಿಗಾನೊ ಪೌಡರ್ ಸೇರಿಸಿ ಮೃದುವಾಗಿ ಹಿಟ್ಟನ್ನು ಕಲಸಿಕೊಳ್ಳಿ. ಹಿಟ್ಟಿನಿಂದ ದೊಡ್ಡ ದೊಡ್ಡ ಉಂಡೆಗಳನ್ನು ತಯಾರಿಸಿಕೊಳ್ಳಿ. ಚಪಾತಿ ಮಣೆಗೆ ಯಾವುದಾದರೂ ಹಿಟ್ಟನ್ನು ಉದುರಿಸಿಕೊಂಡು ಲಟ್ಟಣಿಗೆಯಿಂದ ಚಪಾತಿಯಂತೆ ತೆಳುವಾಗಿ ಲಟ್ಟಿಸಿಕೊಳ್ಳಿ. ಬಳಿಕ ಒಂದು ಫೋರ್ಕ್ ತೆಗೆದುಕೊಂಡು ನಿಧಾನವಾಗಿ ಅದರ ಮೇಲೆ ಒತ್ತುತ್ತಾ ಹೋಗಿ. ಹೀಗೆ ಮಾಡುವುದರಿಂದ ಕರಿಯುವಾಗ ಉಬ್ಬುವುದಿಲ್ಲ. ನಂತರ ಚಾಕುವಿನಿಂದ ತ್ರಿಕೋನ ರೀತಿಯಲ್ಲಿ ಕತ್ತರಿಸಿಕೊಳ್ಳಿ. ಎಣ್ಣೆಯನ್ನು ಬಿಸಿ ಮಾಡಿಕೊಂಡು ತಯಾರಿಸಿದ ನ್ಯಾಚೊಸ್ ಹಾಕಿ. ಮಧ್ಯಮ ಉರಿಯಲ್ಲಿ ಎರಡೂ ಬದಿ ಕೆಂಬಣ್ಣ ಬರುವರೆಗೆ ಕರಿಯಿರಿ. ಒಂದು ಡಬ್ಬಿಗೆ ಸ್ವಲ್ಪ ಚೀಸ್ ಪೌಡರ್ ಹಾಕಿ. ಜೊತೆಗೆ ತಯಾರಿಸಿದ ನ್ಯಾಚೊಸ್ ಸೇರಿಸಿ ಮುಚ್ಚಳ ಮುಚ್ಚಿ. ನಿಧಾನವಾಗಿ ಮೇಲೆ ಕೆಳಗೆ ಮಾಡಿ. ಬಳಿಕ ಸವಿಯಿರಿ. ಈ ನ್ಯಾಚೊಸ್‌ಅನ್ನು ತಯಾರಿಸಿ ಗಾಳಿಯಾಡದ ಡಬ್ಬಿಯಲ್ಲಿ ಹಾಕಿಟ್ಟುಕೊಂಡರೆ ಬೇಕಾದಾಗ ನಿಮಗೆ ಇಷ್ಟವಾದ ಮಸಾಲೆಯೊಂದಿಗೆ ಸವಿಯಬಹುದು.



ಮಸಾಲೆ ರೈಸ್ ಕ್ರಾಕರ್

ಬೇಕಾಗುವ ಸಾಮಗ್ರಿಗಳು: ಹಸಿಮೆಣಸಿನಕಾಯಿ 4, ಶುಂಠಿ 2 ಇಂಚು, ಕರಿಬೇವು 15 ರಿಂದ 20 ಎಲೆಗಳು, ಜೀರಿಗೆ 1 ಟೀ ಚಮಚ, ಅಕ್ಕಿ ಹಿಟ್ಟು 2 ಕಪ್ (400 ಗ್ರಾಂ), ಇಂಗು 1/4 ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಎಳ್ಳು 1 ಟೇಬಲ್ ಚಮಚ, ಒಂದು ಗಂಟೆ ನೀರಿನಲ್ಲಿ ನೆನೆಸಿಟ್ಟ ಹೆಸರುಬೇಳೆ ಮತ್ತು ಕಡಲೆಬೇಳೆ ಎರಡೆರಡು ಟೇಬಲ್ ಚಮಚ, ಬೆಣ್ಣೆ 2 ಟೇಬಲ್ ಚಮಚ, ಅರಿಶಿನ 1/2 ಟೀ ಚಮಚ, ಬಿಸಿ ನೀರು ಅಂದಾಜು ಒಂದೂವರೆ ಕಪ್, ಎಣ್ಣೆ ಕರಿಯಲು.

ತಯಾರಿಸುವ ವಿಧಾನ: ಮಿಕ್ಸಿ ಜಾರಿಗೆ ಹಸಿಮೆಣಸಿನಕಾಯಿ, ಶುಂಠಿ, ಕರಿಬೇವಿನ ಎಲೆ, ಜೀರಿಗೆಯನ್ನು ಹಾಕಿ ತರಿ ತರಿಯಾಗಿ ಪುಡಿ ಮಾಡಿಕೊಳ್ಳಿ. ಬಟ್ಟಲಿಗೆ ಅಕ್ಕಿಹಿಟ್ಟು, ಪುಡಿಮಾಡಿದ ಪೇಸ್ಟ್, ಇಂಗು, ಉಪ್ಪು, ಎಳ್ಳು, ನೆನೆಸಿಟ್ಟ ಬೇಳೆ (ನೀರನ್ನು ತೆಗೆಯಿರಿ), ಬೆಣ್ಣೆ, ಅರಿಶಿನ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ನೀರನ್ನು ಸ್ವಲ್ಪ ಸ್ವಲ್ಪ ಹಾಕಿಕೊಂಡು ಹಿಟ್ಟನ್ನು ಮೃದುವಾಗಿ ಕಲಸಿಕೊಳ್ಳಿ. ತಯಾರಿಸಿದ ಹಿಟ್ಟಿನಿಂದ ಚಿಕ್ಕ ಚಿಕ್ಕ ಉಂಡೆಗಳನ್ನು ಮಾಡಿಕೊಂಡು ತೆಳುವಾಗಿ ತಟ್ಟಿಕೊಳ್ಳಿ. ಎಣ್ಣೆಯನ್ನು ಬಿಸಿ ಮಾಡಿಕೊಂಡು ಮಧ್ಯಮ ಉರಿಯಲ್ಲಿ ಎರಡೂ ಬದಿ ಗರಿ ಗರಿಯಾಗುವರೆಗೆ ಬೇಯಿಸಿ.





ಗರಿ ಗರಿಯಾದ ರೈಸ್ ಸ್ನ್ಯಾಕ್ಸ್

ಬೇಕಾಗುವ ಸಾಮಗ್ರಿಗಳು: ಅಕ್ಕಿ ಹಿಟ್ಟು 2 ಕಪ್ (250ಗ್ರಾಂ), ಕಡಲೆಹಿಟ್ಟು 1/2 ಕಪ್ (50 ಗ್ರಾಂ), ಉಪ್ಪು 1/2 ಟೀ ಚಮಚ, ತುಪ್ಪ 1 ಟೇಬಲ್ ಚಮಚ, ನೀರು 1 ಕಪ್, ಕರಿಯಲು ಎಣ್ಣೆ.

ಮ್ಯಾಜಿಕ್ ಮಸಾಲೆ: ಅಚ್ಚಖಾರದ ಪುಡಿ 1 ಟೀ ಚಮಚ, ಚಾಟ್ ಮಸಾಲೆ 1 ಟೀ ಚಮಚ, ಕಾಳುಮೆಣಸಿನ ಪುಡಿ 1 ಟೀ ಚಮಚ, ಮ್ಯಾಗಿ ಮಸಾಲೆ 1 ಟೀ ಚಮಚ. ತಿಳಿಸಿರುವ ಮಸಾಲೆಯನ್ನು ಬಟ್ಟಲಿಗೆ ಹಾಕಿ ಮಿಶ್ರಣ ಮಾಡಿಟ್ಟುಕೊಳ್ಳಿ.

ಟೊಮೆಟೊ ಮಸಾಲ ಪುಡಿ: ಟೊಮೆಟೊ ಮಸಾಲ ಪುಡಿ 1 ಟೇಬಲ್ ಚಮಚ (ಟೊಮೆಟೊ ಹಣ್ಣನ್ನು ಬಿಸಿಲಿನಲ್ಲಿ ಒಣಗಿಸಿ ಪುಡಿ ಮಾಡಿಕೊಳ್ಳಿ), ಅಚ್ಚಖಾರದಪುಡಿ 1 ಟೀ ಚಮಚ, ಚಾಟ್ ಮಸಾಲ 1 ಟೀ ಚಮಚ, ಉಪ್ಪು 1/2 ಟೀ ಚಮಚ. ತಿಳಿಸಿರುವ ಸಾಮಗ್ರಿಗಳನ್ನು ಬಟ್ಟಲಿಗೆ ಹಾಕಿ ಮಿಶ್ರಣ ಮಾಡಿಟ್ಟುಕೊಳ್ಳಿ.

ತಯಾರಿಸುವ ವಿಧಾನ: ಬಾಣಲೆಗೆ ನೀರನ್ನು ಹಾಕಿ ಉಪ್ಪು ಮತ್ತು ತುಪ್ಪವನ್ನು ಸೇರಿಸಿ ಕುದಿಸಿ. ಬಳಿಕ ಒಲೆಯನ್ನು ಆರಿಸಿ. ಜರಡಿ ಹಿಡಿದ ಅಕ್ಕಿಹಿಟ್ಟು ಮತ್ತು ಕಡಲೆಹಿಟ್ಟನ್ನು ಹಾಕಿ ಮಿಶ್ರಣ ಮಾಡಿ. ಐದು ನಿಮಿಷ ಮುಚ್ಚಳ ಮುಚ್ಚಿಡಿ. ಬಳಿಕ ಮಿಶ್ರಣ ಮಾಡಿ. ಹಿಟ್ಟನ್ನು ಚೆನ್ನಾಗಿ ನಾದಿಕೊಳ್ಳಿ. ನಂತರ ಹಿಟ್ಟಿನಿಂದ ಕಿತ್ತಲೆ ಗಾತ್ರದ ಉಂಡೆಗಳನ್ನು ತಯಾರಿಸಿಕೊಂಡು ಅದನ್ನು ಚಪ್ಪಟೆ ಮಾಡಿಕೊಳ್ಳಿ (ತುಂಬ ತೆಳುವಾಗಿ ಬೇಡ). ಬಳಿಕ ಒಂದು ಕತ್ತರಿಯಿಂದ ತೆಳುವಾಗಿ ಉದ್ದುದ್ದ ಕತ್ತರಿಸಿಟ್ಟುಕೊಳ್ಳಿ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಂಡು ಮಧ್ಯಮ ಉರಿಯಲ್ಲಿ ಕೆಂಬಣ್ಣ ಬರುವರೆಗೆ ಗರಿ ಗರಿಯಾಗಿ ಕರಿಯಿರಿ. ನಂತರ ತಿಳಿಸಾರು ಮಸಾಲೆಯನ್ನು ಬಟ್ಟಲಿಗೆ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಇಲ್ಲಿ ನಿಮಗೆ ಇಷ್ಟವಾದ ಮಸಾಲೆಯನ್ನು ಹಾಕಿಕೊಳ್ಳಬಹುದು. ರುಚಿಕರವಾದ ರೈಸ್ ಸ್ನ್ಯಾಕ್ಸ್ ಅನ್ನು ಕಾಫಿಯೊಂದಿಗೆ ಸವಿಯಿರಿ. ಇದನ್ನು ಒಮ್ಮೆ ತಯಾರಿಸಿದರೆ ತಿಂಗಳವರೆಗೆ ಸವಿಯಬಹುದು.

ಕೇರಳದಲ್ಲಿ ಮತ್ತೊಂದು ರ್‍ಯಾಗಿಂಗ್

ತಿರುವನಂತಪುರ: ನರ್ಸಿಂಗ್ ವಿದ್ಯಾರ್ಥಿಯನ್ನು ಕ್ರೂರವಾಗಿ ಹಿಂಸಿಸಿ ರ್‍ಯಾಗಿಂಗ್ ಮಾಡಿದ ಪ್ರಕರಣದ ಬೆನ್ನಲ್ಲೇ ಕೇರಳದಲ್ಲಿ ಮತ್ತೊಂದು ರ್‍ಯಾಗಿಂಗ್ ಪ್ರಕರಣ ದಾಖಲಾಗಿದೆ.

ಕೇರಳದ ಕಣ್ಣೂರು ಜಿಲ್ಲೆಯಲ್ಲಿ 11ನೇ ತರಗತಿ ವಿದ್ಯಾರ್ಥಿ ಮೇಲೆ 12ನೇ ತರಗತಿ ವಿದ್ಯಾರ್ಥಿಗಳು ರ್‍ಯಾಗಿಂಗ್ ಮಾಡಿದ್ದಾರೆ. ಇದರ ಪರಿಣಾಮ ವಿದ್ಯಾರ್ಥಿಯ ಕೈ ಮೂಳೆ ಮುರಿತವಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

'11ನೇ ತರಗತಿ ವಿದ್ಯಾರ್ಥಿ ನಿಹಾಲ್ ಹಿರಿಯ ವಿದ್ಯಾರ್ಥಿಗಳಿಗೆ ಗೌರವ ನೀಡುತ್ತಿಲ್ಲ ಮತ್ತು ಅವರ ಮಾತುಗಳನ್ನು ಕೇಳುತ್ತಿಲ್ಲ ಎಂದು ಆರೋಪಿಸಿ, ದೈಹಿಕ ಹಲ್ಲೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ 12ನೇ ತರಗತಿಯ ಐವರು ವಿದ್ಯಾರ್ಥಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ಆರಂಭಿಸಿದ್ದಾರೆ. ಇವರೆಲ್ಲರೂ 18ರ ವಯಸ್ಸಿನವರಾಗಿದ್ದಾರೆ. ಐವರ ಪೈಕಿ ಮೂವರನ್ನು ವಶಕ್ಕೆ ಪಡೆದಿರುವ ಪೊಲೀಸರು, ಇನ್ನಿಬ್ಬರಿಗಾಗಿ ಶೋಧ ನಡೆಸಿದ್ದಾರೆ.

ಮಹಾಕುಂಭ: ₹3 ಲಕ್ಷ ಕೋಟಿ ಕೊಡುಗೆ

ಲಖನೌ: ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ 'ಮಹಾಕುಂಭ' ಮೇಳದ ನಿರ್ವಹಣೆಯ ಅವ್ಯವಸ್ಥೆ ಕುರಿತು ಪ್ರತಿಪಕ್ಷಗಳ ಆರೋಪಕ್ಕೆ ತಿರುಗೇಟು ನೀಡಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, 'ಈ ಧಾರ್ಮಿಕ ಕಾರ್ಯಕ್ರಮದಿಂದ ಹಾಲಿ ರಾಜ್ಯದ ಆರ್ಥಿಕತೆಗೆ ₹3 ಲಕ್ಷ ಕೋಟಿ ಆದಾಯ ಹರಿದುಬರಲಿದೆ' ಎಂದು ತಿಳಿಸಿದರು.

'ತ್ರಿವೇಣಿ ಸಂಗಮದಲ್ಲಿ ಇದುವರೆಗೆ ಸುಮಾರು 50 ಕೋಟಿ ಮಂದಿ ಪುಣ್ಯಸ್ನಾನ ಮಾಡಿದ್ದಾರೆ' ಎಂದು ಯೋಗಿ ಹೇಳಿದರು.

ಆಸ್ಪತ್ರೆಗೆ ಪೋಪ್

ರೋಮ್ (ಎಪಿ): ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡಿದ್ದರಿಂದ ಹೆಚ್ಚಿನ ಪರೀಕ್ಷೆಗಾಗಿ ಪೋಪ್ ಫ್ರಾನ್ಸಿಸ್ ಅವರನ್ನು ರೋಮ್‌ನಲ್ಲಿರುವ ಪಾಲಿಕ್ಲಿನಿಕ್‌ಗೆ ಶುಕ್ರವಾರ ದಾಖಲಿಸಲಾಗಿದೆ. ಕಳೆದ ಗುರುವಾರದಿಂದಲೂ ಪೋಪ್ (88) ಅವರು ಸೋಂಕಿನಿಂದ ಬಳಲುತ್ತಿದ್ದಾರೆ.

ಕೋಟಾ: ನೀಟ್ ಆಕಾಂಕ್ಷಿ ಸಾವು

ಕೋಟ(ರಾಜಸ್ಥಾನ) (ಪಿಟಿಐ): ದಕನಿಯಾ ರೈಲು ನಿಲ್ದಾಣದ ಸಮೀಪ ರೈಲು ಹಳಿಗಳ ಮೇಲೆ 17 ವರ್ಷ ವಯಸ್ಸಿನ ನೀಟ್ ಆಕಾಂಕ್ಷಿ ಯುವಕನ ಶವ ವಿರೂಪಗೊಂಡ ಸ್ಥಿತಿಯಲ್ಲಿ ಪತ್ತೆ ಆಗಿದೆ. ಯುವಕ ಪ್ರೇಮ ಪ್ರಕರಣದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ದೆಹಲಿ–ಮುಂಬೈ ಮಾರ್ಗದ ರೈಲು ಹಳಿ ಮೇಲೆ ಬುಧವಾರ ತಡರಾತ್ರಿ ಶವ ಪತ್ತೆಯಾಗಿದೆ. ಗುರುತಿನ ಚೀಟಿ ಆಧರಿಸಿ, ಆತನನ್ನು ಬಿಹಾರದ ಬಕ್ಸರ್ ನಿವಾಸಿ ಹಿಮಾಂಶು ಸಿಂಗ್ ರಜಪೂತ್ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಜಪೂತ್ ನೀಟ್ ಆಕಾಂಕ್ಷಿ ಆಗಿದ್ದು, ಕೋಟದ ತರಬೇತಿ ಕೇಂದ್ರದಲ್ಲಿ ಪರೀಕ್ಷೆ ತರಬೇತಿ ಪಡೆಯುತ್ತಿದ್ದ. ರಜಪೂತ್ ಪ್ರೇಯಸಿ ಜಬಲ್‌ಪುರದಲ್ಲಿ ಓದುತ್ತಿದ್ದು, ಆತನ ಸ್ನೇಹಿತನಿಗೆ ಕರೆ ಮಾಡಿ ರಜಪೂತ್ ಜೀವಕ್ಕೆ ಅಪಾಯ ತಂದುಕೊಳ್ಳಬಹುದು ಎಂದು ಆತಂಕ ವ್ಯಕ್ತಪಡಿಸಿದ್ದರು. ಸ್ನೇಹಿತರು ರಜಪೂತ್ ಇರುವ ಮನೆ ಬಳಿಗೆ ಬರುವಷ್ಟರಲ್ಲಿ ಆತ ಅಲ್ಲಿಂದ ನಿರ್ಗಮಿಸಿದ್ದ ಎನ್ನುವ ಮಾಹಿತಿ ಲಭಿಸಿದೆ ಎಂದು ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಅಗತ್ಯಬಿದ್ದರೆ, ಪ್ರೇಮ ಪ್ರಕರಣದ ಆಯಾಮದಿಂದಲೂ ತನಿಖೆ ನಡೆಸಲಾಗುವುದು ಎಂದು ಡಿಎಸ್‌ಪಿ ಶಂಕರ್ ಲಾಲ್ ತಿಳಿಸಿದ್ದಾರೆ.

ಕೇರಳ ಬ್ಯಾಂಕ್‌ನಲ್ಲಿ ದರೋಡೆ

ತಿರುವನಂತಪುರ: ಕೇರಳದ ತ್ರಿಶ್ಯೂರ್‌ನ ಚಾಲಕ್ಕುಡಿ ಬಳಿಯ ಪೋಟಾದ ಫೆಡರಲ್ ಬ್ಯಾಂಕ್ ಶಾಖೆಯಲ್ಲಿ ಶುಕ್ರವಾರ ಮಧ್ಯಾಹ್ನ ದರೋಡೆ ನಡೆದಿದ್ದು, ₹15 ಲಕ್ಷ ದೋಚಲಾಗಿದೆ.

'ಮಾಸ್ಕ್ ಮತ್ತು ಹೆಲ್ಮೆಟ್ ಧರಿಸಿ ಬ್ಯಾಂಕ್ ಪ್ರವೇಶಿಸಿದ ವ್ಯಕ್ತಿಯೊಬ್ಬ ಕೈಯಲ್ಲಿ ಚಾಕು ಹಿಡಿದು ಸಿಬ್ಬಂದಿಯನ್ನು ಹೆದರಿಸಿದ್ದಾನೆ. ನಂತರ ಕೋಣೆಯೊಂದರಲ್ಲಿ ಅವರನ್ನು ಕೂಡಿ ಹಾಕಿ, ಕ್ಯಾಶ್ ಕೌಂಟರ್‌ನಲ್ಲಿದ್ದ ಹಣವನ್ನು ಲೂಟಿ ಮಾಡಿ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಬ್ಯಾಂಕಿನಲ್ಲಿ ಒಟ್ಟು ₹47 ಲಕ್ಷ ನಗದು ಇತ್ತು. ಈ ಪೈಕಿ ₹15 ಲಕ್ಷವನ್ನು ದರೋಡೆಕೋರ ದೋಚಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ದರೋಡೆಕೋರ ಹಿಂದಿ ಮಾತ ನಾಡುತ್ತಿದ್ದ. ಬ್ಯಾಂಕಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ದಕ್ಷಿಣ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಹಣ ದುಪ್ಪಟ್ಟು ಆಮಿಷ: ₹1.4 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡಲಾಗುವುದು ಎಂಬ ಆಮಿಷವೊಡ್ಡಿ 53 ವರ್ಷದ ವ್ಯಕ್ತಿಗೆ ಸೈಬರ್ ವಂಚಕರು ₹ 1 ಕೋಟಿ ವಂಚಿಸಿದ್ದಾರೆ.

ಜೆ.ಪಿ. ನಗರದ ಏಳನೇ ಹಂತದ ನಿವಾಸಿ ಎಂ.ಎಸ್.ದತ್ತರಾಮ್ ಎಂಬುವರು ನೀಡಿದ ದೂರಿನ ಮೇರೆಗೆ ದಕ್ಷಿಣ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ–2008 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

‘ದೂರುದಾರರು, ಫೇಸ್‌ಬುಕ್‌ನಲ್ಲಿದ್ದ ಜಾಹೀರಾತು ಗಮನಿಸಿ ಅದರ ಮೇಲೆ ಕ್ಲಿಕ್ ಮಾಡಿದ್ದರು. ಕ್ಲಿಕ್ ಮಾಡಿದ ಕೂಡಲೇ ‘ವಿಐಪಿ ಡಿ–519’ ಎಂಬ ಹೆಸರಿನ ವಾಟ್ಸ್‌ಆ್ಯಪ್ ಗುಂಪಿಗೆ ಸೇರಿದ್ದರು. ಮೊದಲ ದಿನ ವಾಟ್ಸ್‌ಆ್ಯಪ್ ಗುಂಪಿನಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಗಮನಿಸಿದ್ದರು. ಮರುದಿನ ಸೈಬರ್ ವಂಚಕನೊಬ್ಬ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ, ತಾವು ತಿಳಿಸಿದಂತೆ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯಲಿದೆ ಎಂಬುದಾಗಿ ಆಮಿಷವೊಡ್ಡಿದ್ದ’ ಎಂದು ಮೂಲಗಳು ತಿಳಿಸಿವೆ.



‘ಅದಾದ ಮೇಲೆ ಲಿಂಕ್‌ವೊಂದನ್ನು ಕಳುಹಿಸಿ ‘ಆರ್ಯನ್ ಫಿನ್’ ಎನ್ನುವ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದ್ದ. ಅಪ್ಲಿಕೇಷನ್ ಡೌನ್‌ಲೋಡ್ ಆದ ಮೇಲೆ ಹೂಡಿಕೆ ಮಾಡುವಂತೆ ಹೇಳಿದ್ದ. ವಂಚಕನ ಮಾತು ನಂಬಿದ್ದ ದೂರುದಾರರು, ತಮ್ಮ ವಿವಿಧ ಬ್ಯಾಂಕ್ ಖಾತೆಗಳಿಂದ ₹1.4 ಕೋಟಿ ಹೂಡಿಕೆ ಮಾಡಿದ್ದರು. ನಂತರ ಯಾವುದೇ ಲಾಭಾಂಶವಾಗಲಿ, ಅಸಲಾಗಲಿ ಕೊಡಲಿಲ್ಲ. ಇದರಿಂದ ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ವ್ಹೀಲಿ: 12 ಮಂದಿ ಬಂಧನ



ಬೆಂಗಳೂರು: ನಗರದ ಸಂಚಾರ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ವ್ಹೀಲಿ ಮಾಡುತ್ತಿದ್ದ 12 ಮಂದಿಯನ್ನು ಬಂಧಿಸಿದ್ದಾರೆ.

ವಿವಿಧ ಬಡಾವಣೆ, ಮೇಲ್ಸೇತುವೆಯಲ್ಲಿ ವ್ಹೀಲಿ ಮಾಡುತ್ತಿದ್ದವರಿಂದ 10 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದು ಕೊಳ್ಳಲಾಗಿದೆ. ಜತೆಗೆ, 10 ಪ್ರಕರಣಗಳನ್ನು ದಾಖಲಿಸಿ ಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲೂ ಇದೇ ರೀತಿಯ ಕಾರ್ಯಾಚರಣೆ ನಡೆಸಿ ವ್ಹೀಲಿ ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಬಾವನ ಕೊಲೆ: ‘ರೋಲ್ಡ್‌ಗೋಲ್ಡ್’ ಆಭರಣ ವ್ಯಾಪಾರಿ ಸೆರೆ

ಬೆಂಗಳೂರು: ಕೆಟ್ಟ ಮಾತುಗಳಿಂದ ನಿಂದನೆ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಚಾಕುವಿನಿಂದ ಇರಿದು ಬಾವನನ್ನೇ ಕೊಲೆ ಮಾಡಿದ್ದ ‘ರೋಲ್ಡ್ ಗೋಲ್ಡ್’ ಆಭರಣಗಳ ವ್ಯಾಪಾರಿಯನ್ನು ಬೆಂಗಳೂರು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.



ರಾಮು

ತಮಿಳುನಾಡಿನ ವೆಂಕಟೇಶ್ ಎಂಬುವರನ್ನು ಕೊಲೆ ಮಾಡಲಾಗಿತ್ತು. ಕೊಲೆಯಾದ ವ್ಯಕ್ತಿಯ ಬಾವ ರಾಮು(54) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ವೆಂಕಟೇಶ್ ಹಾಗೂ ರಾಮು ತಮಿಳುನಾಡಿನಿಂದ ‘ರೋಲ್ಡ್ ಗೋಲ್ಡ್’ ಆಭರಣಗಳನ್ನು ನಗರಕ್ಕೆ ತಂದು ಮೆಜೆಸ್ಟಿಕ್ ಸೇರಿದಂತೆ ಸುತ್ತಮುತ್ತಲ ರಸ್ತೆಗಳಲ್ಲಿ ವ್ಯಾಪಾರ ಮಾಡುತ್ತಿದ್ದರು. ವೆಂಕಟೇಶ್ ಇತ್ತೀಚೆಗೆ ಕೆಟ್ಟ ಮಾತುಗಳಿಂದ ರಾಮುಗೆ ಬೈಯ್ಯುತ್ತಿದ್ದ. ಜತೆಗೆ, ಸಾಲವಾಗಿ ಪಡೆದಿದ್ದ ₹500 ಅನ್ನು ರಾಮುಗೆ ವಾಪಸ್ ನೀಡಿರಲಿಲ್ಲ. ಇದೇ ವಿಚಾರಕ್ಕೆ ಫೆಬ್ರುವರಿ 9ರಂದು ಇಬ್ಬರ ನಡುವೆ ಶ್ರೀರಾಮಪುರದ ಬಾರ್ ಒಂದರ ಬಳಿ ಜಗಳ ನಡೆದಿತ್ತು. ನಂತರ, ಮೆಜೆಸ್ಟಿಕ್ ರೈಲು ನಿಲ್ದಾಣದ ಹಿಂದಿನ ಗೇಟ್‌ಗೆ ಬಂದಾಗ ಗಲಾಟೆ ವಿಕೋಪಕ್ಕೆ ಹೋಗಿ ವೆಂಕಟೇಶ್‌ಗೆ ರಾಮು ಚಾಕುವಿನಿಂದ ಇರಿದು ಪರಾರಿ ಆಗಿದ್ದ. ಗಂಭೀರವಾಗಿ ಗಾಯಗೊಂಡಿದ್ದ ವೆಂಕಟೇಶ್ ಫೆ.10ರಂದು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಮೃತ ವ್ಯಕ್ತಿಯ ಸಹೋದರ ರೈಲ್ವೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ಚಿಕ್ಕಪೇಟೆ ಬಳಿ ಆರೋಪಿಯನ್ನು ಬಂಧಿಸಿದ್ದಾರೆ.

‘ವೆಂಕಟೇಶ್ ಪದೇ ಪದೇ ಕೆಟ್ಟದಾಗಿ ಬೈಯುತ್ತಿದ್ದ. ಇದು ನನಗೆ ಬೇಸರ ತರಿಸಿತ್ತು. ಇದೇ ಕಾರಣಕ್ಕೆ ಕೊಲೆ ಮಾಡಿದ್ದೇನೆ ಎಂದು ಆರೋಪಿ ರಾಮು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಇಂದಿನಿಂದ ಅರಣ್ಯವಾಸಿಗಳ ಕಾನೂನು ಜಾಗೃತಿ ಜಾಥಾ

ಬೆಂಗಳೂರು: ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಆಶ್ರಯದಲ್ಲಿ ಇದೇ 15 ರಿಂದ ಆರಂಭವಾಗುವ ರಾಜ್ಯ ಮಟ್ಟದ ಅರಣ್ಯವಾಸಿಗಳ ಕಾನೂನು ಜಾಗೃತಿ ಜಾಥಾ–2025ರ ಲಾಂಛನವನ್ನು ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನ್ಯಾ. ನಾಗಮೋಹನದಾಸ್, ಅರಣ್ಯ ಭೂಮಿ ಹಕ್ಕಿಗಾಗಿ ಅರಣ್ಯವಾಸಿಗಳಿಗೆ ಕಾನೂನು ಜ್ಞಾನ ಅವಶ್ಯ. ಕಾನೂನಿನ ತಿಳಿವಳಿಕೆ ಇಲ್ಲದೇ ಭೂಮಿ ಹಕ್ಕಿನಿಂದ ವಂಚಿತರಾಗಬಾರದು. ಹೋರಾಟದ ಜೊತೆಯಲ್ಲಿ ಅರಣ್ಯವಾಸಿಗಳಿಗೆ ಕಾನೂನು ಜ್ಞಾನ ನೀಡುವುದು ಅಗತ್ಯ ಎಂದರು.

ನಿರ್ದಿಷ್ಟ ದಾಖಲಾತಿ ಅಗತ್ಯ ಇಲ್ಲದಿರುವುದು, ಕಾನೂನು ಬಾಹಿರ ಅರ್ಜಿ ತಿರಸ್ಕಾರಕ್ಕೆ ಕಡಿವಾಣ, ಅಸಮರ್ಪಕ ಜಿಪಿಎಸ್‌ಗೆ ಕಾನೂನು ಪರಿಹಾರ ಮತ್ತು ಅರಣ್ಯವಾಸಿಗಳಿಗೆ ಕಾನೂನಿನ ಪ್ರಕಾರ ಇರುವ ಬದುಕುವ ಹಕ್ಕಿನ ಕುರಿತು ಜಾಗೃತಿ ಮೂಡಿಸಲಾಗುವುದು. 16 ಜಿಲ್ಲೆಗಳ 500 ಸ್ಥಳಗಳಲ್ಲಿ ಅರಣ್ಯವಾಸಿಗಳಿಗಾಗಿ ಕಾನೂನು ಜಾಗೃತಿ ಕಾರ್ಯಕ್ರಮ ಜರುಗಲಿದೆ.

ಹೆಸರಘಟ್ಟ: ಜನಮಾನಸ ಸಮಾವೇಶ ನಾಳೆ



ಹೆಸರಘಟ್ಟ: ಹೆಸರಘಟ್ಟದಲ್ಲಿ ಫೆಬ್ರುವರಿ 16ರಂದು ನಡೆಯಲಿರುವ ಜನ ಮಾನಸ ಸಮಾವೇಶಕ್ಕೆ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಅದ್ದೆ ಮನವಿ ಮಾಡಿದರು

ಯಲಹಂಕ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಬಲಗೊಳಿಸುವ ನಿಟ್ಟಿನಲ್ಲಿ ಜನಮಾನಸ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನೀರಿಕ್ಷೆ ಇದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ವೆಂಕಟೇಶ್, ವೆಂಕಟಾಚಲಪ್ಪ, ಬಸವರಾಜು, ಚಂದ್ರಶೇಖರ್, ಚೇತನ್, ಲಕ್ಷ್ಮೀನಾರಾಯಣ್, ರುದ್ರೇಶ್, ಶ್ರೀನಿವಾಸ್, ಬಾಬು, ಮನು, ಹನುಮಂತರಾಜು ಇದ್ದರು.

ಚಿತ್ರಾವಳಿ



ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಜೋಯಾಲುಕ್ಕಾಸ್‌ನ ಶೋ ರೂಂ ಅನ್ನು ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ ಅವರು ಶುಕ್ರವಾರ ಉದ್ಘಾಟಿಸಿದರು. ಜೋಯಾಲುಕ್ಕಾಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ, ಮುಖ್ಯ ಕಾರ್ಯಾಚರಣೆ ಅಧಿಕಾರಿ ಹೆನ್ರಿ ಜಾರ್ಜ್, ಆಭರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಪಿ.ಡಿ. ಜೋಸ್, ಉಪ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕೃಷ್ಣನ್ ಉಪಸ್ಥಿತರಿದ್ದರು



ಇನ್ಫೊಸಿಸ್ ತನ್ನ ಮೈಸೂರು ಕ್ಯಾಂಪಸ್‌ನಲ್ಲಿ ನೂರಾರು ಉದ್ಯೋಗಿಗಳನ್ನು ವಜಾಗೊಳಿಸಿದೆ. ಕಾರ್ಮಿಕ ನಿಯಮಗಳನ್ನು ಉಲ್ಲಂಘಿಸಿದ ಮತ್ತು ಕಾರ್ಮಿಕರಿಗೆ ಅನ್ಯಾಯ ಮಾಡಿರುವ ಇನ್ಫೊಸಿಸ್ ಲಿಮಿಟೆಡ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ಉದ್ಯೋಗಿಗಳ ಒಕ್ಕೂಟದ (ಕೆಐಟಿಯು) ಪ್ರಧಾನ ಕಾರ್ಯದರ್ಶಿ ಸುಹಾಸ್ ಅಡಿಗ ನೇತೃತ್ವದ ನಿಯೋಗವು ಕಾರ್ಮಿಕ ಆಯುಕ್ತ ಎಚ್‌.ಎನ್‌. ಗೋಪಾಲಕೃಷ್ಣ ಅವರಿಗೆ ಮನವಿ ಸಲ್ಲಿಸಿತು

ಕೆ.ವಿ. ಪ್ರಭಾಕರ್‌ಗೆ ಬಿಜಿಎಸ್–ಕುವೆಂಪು ಪ್ರಶಸ್ತಿ ಪ್ರದಾನ

ಕನ್ನಡ ನೆಲದಲ್ಲಿ ಕುವೆಂಪು ಪ್ರಜ್ಞೆ ನಿರಂತರ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ‘ಐದು ತಲೆಮಾರುಗಳಿಂದ ಕುವೆಂಪು ಅವರ ಜಾತ್ಯತೀತ ಮೌಲ್ಯಗಳು ಸಮಾಜ ತಿದ್ದುತ್ತಾ, ಪ್ರಭಾವಿಸುತ್ತಲೇ ಇವೆ’ ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಪಟ್ಟಣದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ವತಿಯಿಂದ ಆಯೋಜಿಸಿದ್ದ 125ನೇ ಶತೋತ್ತರ ಹುಣ್ಣಿಮೆ ಕಾರ್ಯಕ್ರಮದಲ್ಲಿ ಸಂಸ್ಥಾನ ಕೊಡಮಾಡುವ ಬಿಜಿಎಸ್–ಕುವೆಂಪು ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ವಿಶ್ವಮಾನವ ಸಂದೇಶ ಮತ್ತು ಜಾತ್ಯತೀತ ಮೌಲ್ಯಗಳಿಂದ ಐದು ತಲೆಮಾರುಗಳನ್ನು ಪ್ರಭಾವಿಸಿದ ರಾಷ್ಟ್ರಕವಿ ಕುವೆಂಪು ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು ಹೆಮ್ಮೆಯ ಸಂಗತಿ.



ಸಕಲೇಶಪುರದಲ್ಲಿ ಶುಕ್ರವಾರ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಗೆ ನಿರ್ಮಲಾನಂದನಾಥ ಸ್ವಾಮೀಜಿಯವರು ಬಿಜಿಎಸ್–ಕುವೆಂಪು ಪ್ರಶಸ್ತಿ ಪ್ರದಾನ ಮಾಡಿದರು. ಮಾಜಿ ಶಾಸಕ ಎಚ್‌.ಎಂ. ವಿಶ್ವನಾಥ್, ಮದನಗೌಡ, ಶಂಭುನಾಥ ಸ್ವಾಮೀಜಿ ಇದ್ದರು.

ಆದಿಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದನಾಥ ಶ್ರೀಗಳ ಕೈಗಳಿಂದ ಪ್ರಶಸ್ತಿ ಸ್ವೀಕರಿಸುವ ಧನ್ಯತೆ ನನ್ನದು’ ಎಂದರು.

‘ವಿಶ್ವವಿದ್ಯಾಲಯಗಳು ಹೇಗೆ ಇರಬೇಕು? ಜ್ಞಾನ ಪ್ರಸಾರ ಹೇಗಿರಬೇಕು ಎನ್ನುವ ಮಾದರಿಯನ್ನು ನಾಡಿಗೆ ಹಾಕಿಕೊಟ್ಟವರಲ್ಲಿ ಕುವೆಂಪು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಸಮುದಾಯ ವಿಮರ್ಶೆ ಮೂಲಕ ಮಡಿವಂತ ಸಮಾಜವನ್ನು ತಿದ್ದಿದವರು ಕುವೆಂಪು’ ಎಂದು ಬಣ್ಣಿಸಿದರು.

ಆದಿ ಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು.

ಹಾಸನ ಶಾಖಾಮಠದ ಶಂಭುನಾಥ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಮದನ್ ಗೌಡ, ತೆಂಗು ನಾರು ಅಭಿವೃದ್ಧಿ ಮಂಡಳಿ ಅಧ್ಯಕ್ಷ ನಟರಾಜ್, ಬಾಲ ಭವನ ಅಧ್ಯಕ್ಷ ಬಿ.ಆರ್.ನಾಯ್ಡು, ಮಾಜಿ ಶಾಸಕ ಎಚ್.ಎಂ. ವಿಶ್ವನಾಥ ಅವರು ಉಪಸ್ಥಿತರಿದ್ದರು.

ಪ್ರಶಸ್ತಿಗೆ ಜಯರಾಮ ರಾಯಪುರ, ಬಿ.ಸುರೇಶ್ ಆಯ್ಕೆ

ಮಂಡ್ಯ: ಕರ್ನಾಟಕ ಸಂಘದ ವತಿಯಿಂದ ಪ್ರಥಮ ವರ್ಷದ ಪ್ರೊ.ಜಯಪ್ರಕಾಶಗೌಡ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಫೆ.15ರ ಸಂಜೆ 4 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಸಲಹೆಗಾರ ಎಸ್.ಬಿ.ಶಂಕರೇಗೌಡ ತಿಳಿಸಿದರು.

ಪ್ರೊ.ಜಯಪ್ರಕಾಶಗೌಡರ ಹಿತೈಷಿ ಬಳಗದಿಂದ ಸುಮಾರು ₹15 ಲಕ್ಷದ ದತ್ತಿ ನಿಧಿಯನ್ನು ಸ್ಥಾಪಿಸಿದ್ದು, ಅವರ ಹೆಸರಿನಲ್ಲಿ ನೀಡಲಾಗುವ ಪ್ರಥಮ ಪ್ರಶಸ್ತಿಗೆ ಐಆರ್‌ಎಸ್ ಅಧಿಕಾರಿ ಜಯರಾಮ್ ರಾಯಪುರ ಹಾಗೂ ಚಲನಚಿತ್ರ ನಿರ್ದೇಶಕ ಬಿ.ಸುರೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ಪುರಸ್ಕೃತರಿಗೆ ₹50 ಸಾವಿರ ನಗದು, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ವಿಶ್ವಮಾನವ ಕ್ಷೇತ್ರದ ಪುರುಷೋತ್ತಮಾನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಲಿದೆ. ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಸಂಘದ ಪ್ರಧಾನ ಪೋಷಕ ಬಿ.ರಾಮಕೃಷ್ಣ ಅಧ್ಯಕ್ಷತೆ ವಹಿಸುವರು, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಮಾರೇನಹಳ್ಳಿ-ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಮಾರೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಚನ್ನಲಕ್ಷ್ಮಮ್ಮ ಹಾಗೂ ಉಪಾಧ್ಯಕ್ಷರಾಗಿ ಪಿ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 11 ಸದಸ್ಯಬಲ ಹೊಂದಿರುವ ಸಂಘದಲ್ಲಿ ಇಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು. ತಾಲ್ಲೂಕು ಭೂನ್ಯಾಯಮಂಡಳಿ ಸದಸ್ಯ ನಾಗರಾಜ್, ಪಿ.ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ಕೆ.ನಾರಾಯಣಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ರಾಹುಲ್, ಮಾಜಿ ಅಧ್ಯಕ್ಷರಾದ ವಿ.ನಂಜೇಗೌಡ, ಡಿ.ಎಂ.ಚೌಡಪ್ಪ ಅವರು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಬಂಡಿಕೊಡಿಗೇಹಳ್ಳಿ-ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ: ಬಂಡಿಕೊಡಿಗೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 12 ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಸಾಲಗಾರರ ಕ್ಷೇತ್ರದಿಂದ- ಉದಯ್‌ಕುಮಾರ್.ಎಚ್, ಉಮೇಶ್. ಕೆ.ಎಂ, ಮುರಳೀಧರ, ಜನಾರ್ದನ್. ಪಿ, ಅಮರನಾರಾಯಣ(ಸಾಮಾನ್ಯ), ಎಂ.ಜಿ.ರಾಜಕುಮಾರ್(ಬಿಸಿಎಂ-ಬಿ), ಕೃಷ್ಣಪ್ಪ.ಪಿ(ಬಿಸಿಎಂ-ಎ), ರತ್ನಮ್ಮ, ಸಂದರ್ಶಿನಿ(ಮಹಿಳಾ ಮೀಸಲು), ವೆಂಕಟೇಶ್(ಎಸ್‌ಸಿ), ಮಂಜುನಾಥ್.ಪಿ.ಕೆ (ಎಸ್‌ಟಿ), ಬಿ.ವಿ.ಮಧುಸೂದನ್ (ಸಾಲಗಾರರಲ್ಲದ ಕ್ಷೇತ್ರ)ಜಯಗಳಿಸಿದರು.

ನಗರದ ವಿವಿಧೆಡೆ ಮೂರು ಪ್ರತ್ಯೇಕ ಅಪಘಾತ

ಇಬ್ಬರ ಸಾವು, ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂರು ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಪಾದಚಾರಿ, ಆಟೊ ಚಾಲಕ ಮೃತಪಟ್ಟಿದ್ದಾರೆ. ನಾಲ್ವರು ಬೈಕ್ ಸವಾರರು ಗಾಯಗೊಂಡಿದ್ದಾರೆ.

ಜ್ಞಾನ ಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉಪಕಾರ ಲೇಔಟ್ ಬಳಿ ಸಂಭವಿಸಿದ ಅಪಘಾತದಲ್ಲಿ 35 ವರ್ಷದ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

ಉಪಕಾರ ಲೇಔಟ್ ಸೋಡಾ ಫ್ಯಾಕ್ಟರಿ ರೆಸ್ಟೋರೆಂಟ್ ಬಳಿ ವ್ಯಕ್ತಿಯೊಬ್ಬರು ರಸ್ತೆ ದಾಟುತ್ತಿದ್ದರು. ವೇಗವಾಗಿ ಬಂದ ಟ್ಯಾಂಕರ್‌ವೊಂದು ಅವರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಗಾಯಾಳುವನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯ ವಿಳಾಸ ಪತ್ತೆಯಾಗಿಲ್ಲ. ಅಪಘಾತಕ್ಕೆ ಕಾರಣವಾದ ಟ್ಯಾಂಕರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಆಟೊ ಚಾಲಕ ಸಾವು: ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೈಸೂರು ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಸಂಭವಿಸಿದ ಅಪಘಾತದಲ್ಲಿ ಆಟೊ ಚಾಲಕ ಮೃತಪಟ್ಟಿದ್ದಾರೆ.

ಕಸ್ತೂರ ಬಾ ನಗರದ ನಿವಾಸಿ ಸುರೇಶ್ ಮೃತ ಚಾಲಕ.

ಸುರೇಶ್ ಅವರು ಗುರುವಾರ ಬೆಳಿಗ್ಗೆ 5.45ರ ಸುಮಾರಿಗೆ ಅತಿ ವೇಗದಲ್ಲಿ ಆಟೊವನ್ನು ಚಾಲನೆ ಮಾಡಿಕೊಂಡು ತೆರಳುತ್ತಿದ್ದರು. ನಿಯಂತ್ರಣ ತಪ್ಪಿದ್ದರಿಂದ ಆಟೊ ಮಗುಚಿ ಬಿದ್ದಿತ್ತು. ಚಾಲಕ ಆಟೊದ ಕೆಳಕ್ಕೆ ಸಿಲುಕಿಕೊಂಡಿದ್ದರು. ಕೆಳಕ್ಕೆ ಬಿದ್ದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳದಲ್ಲಿದ್ದವರು ಚಾಲಕನನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.



ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲ್ಸೇತುವೆಯಲ್ಲಿ ಅಪಘಾತ: ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲ್ಸೇತುವೆಯಲ್ಲಿ ಶುಕ್ರವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ನಾಲ್ವರು ಬೈಕ್ ಸವಾರರು ಗಾಯಗೊಂಡಿದ್ದಾರೆ.

ಗುಡ್ಡದಹಳ್ಳಿ ಹಾಗೂ ಗಂಗೊಂಡನಹಳ್ಳಿ ನಿವಾಸಿಗಳಾದ ಜಾಕೀರ್, ರೋಷನ್ ಪಾಷಾ, ನಿಜಾಮ್ ಹಾಗೂ ಸಾಹಿಲ್ ಗಾಯಗೊಂಡವರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮೈಸೂರು ರಸ್ತೆಯ ಮೇಲ್ಸೇತುವೆಯಲ್ಲಿ ಬಿಎಂಟಿಸಿ ಹಾಗೂ ತಮಿಳುನಾಡಿನ ಖಾಸಗಿ ಬಸ್‌ಗಳು ತೆರಳುತ್ತಿದ್ದವು. ಬೆಳಿಗ್ಗೆ 5ರ ಸುಮಾರಿಗೆ ಎರಡು ಬೈಕ್‌ಗಳಲ್ಲಿ ನಾಲ್ವರು, ಮೈಸೂರು ವೃತ್ತದ ಕಡೆಯಿಂದ ಬರುತ್ತಿದ್ದರು. ಮುಂದೆ ಸಾಗುತ್ತಿದ್ದ ಬಸ್‌ಗಳ ಮಧ್ಯೆ ಸ್ವಲ್ಪ ಜಾಗವಿತ್ತು. ಎರಡು ಬೈಕ್ ಸವಾರರು, ಬಸ್ ಅನ್ನು ಹಿಂದಿಕ್ಕಲು ವೇಗವಾಗಿ ಬೈಕ್‌ಗಳನ್ನು ಚಲಾಯಿಸಿದರು. ನಿಯಂತ್ರಣ ತಪ್ಪಿದ ಬೈಕ್‌ನಲ್ಲಿದ್ದ ನಾಲ್ವರು ಕೆಳಕ್ಕೆ ಬಿದ್ದಿದ್ದರು. ಉರುಳಿ ಬಿದ್ದ ರಭಸಕ್ಕೆ ಇಬ್ಬರು ಬಿಎಂಟಿಸಿ ಬಸ್‌ನ ತಳಭಾಗದಲ್ಲಿ ಸಿಲುಕಿಕೊಂಡಿದ್ದರು ಎಂದು ಸಂಚಾರ ಪೊಲೀಸರು ಹೇಳಿದರು.

ಬಿಎಂಟಿಸಿ ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ತಮಿಳುನಾಡು ನೋಂದಣಿ ಸಂಖ್ಯೆಯ ಬಸ್ ಅನ್ನು ಚಾಲಕ ನಿಲ್ಲಿಸದೇ ತೆರಳಿದ್ದಾನೆ. ಚಾಲಕನನ್ನು ಪತ್ತೆ ಮಾಡಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಅಪಘಾತದ ಕಾರಣಕ್ಕೆ ಮೇಲ್ಸೇತುವೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಒಂದು ತಾಸಿನ ನಂತರ ಬಿಎಂಟಿಸಿ ಬಸ್ ಹಾಗೂ ಬೈಕ್ ತೆರವು ಮಾಡಿ ವಾಹನಗಳ ಸಂಚಾರಕ್ಕೆ ಪೊಲೀಸರು ಅನುವು ಮಾಡಿಕೊಟ್ಟರು.

‘ಕ್ರೀಡೆ, ಸಾಹಿತ್ಯ ಉತ್ತಮ ಬುನಾದಿಗೆ ನಾಂದಿ’

ಆನೇಕಲ್: ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಅಲಯನ್ಸ್ ಸಾಹಿತ್ಯ’ ಉತ್ಸವದಲ್ಲಿ ಶುಕ್ರವಾರ ಕ್ರೀಡಾಪಟುಗಳಾದ ಅನಿಲ್ ಕುಂಬ್ಳೆ ಮತ್ತು ಅಂಜು ಬಾಬಿ ಜಾರ್ಜ್ ಪಾಲ್ಗೊಂಡು ಕ್ರೀಡಾ ಸ್ಫೂರ್ತಿ ಬಗ್ಗೆ ಮಾತನಾಡಿದರು.

‘ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಧೈರ್ಯ ಮತ್ತು ದೃಢ ನಿಶ್ಚಯದೊಂದಿಗೆ ಹೆಜ್ಜೆ ಹಾಕಿದಾಗ ಯಶಸ್ಸು ಸಿಗುತ್ತದೆ. ಯುವ ಸಮುದಾಯ ಕ್ರೀಡೆಯಲ್ಲಿ ಉತ್ಸಾಹ ಮತ್ತು ಪರಿಶ್ರಮದಿಂದ ಮುಂದುವರಿಯುವ ಅವಶ್ಯಕತೆ ಇದೆ. ವೈಫಲ್ಯ ಪ್ರಯಾಣದ ಒಂದು ಭಾಗವಾಗಿದೆ. ವೈಫಲ್ಯದಿಂದ ಏನು ಕಲಿತಿದ್ದೇವೆ ಎಂಬುದು ಅತ್ಯಂತ ಮುಖ್ಯವಾಗಿದೆ. ನಂತರ ತಯಾರಿಗೆ ಸಜ್ಜಾಗಬೇಕಾಗಿದೆ. ಮೈದಾನ ಮತ್ತು ಜೀವನದಲ್ಲಿ ಸವಾಲು ಜಯಿಸುವ ಗುಣ ಬೆಳೆಸಿಕೊಳ್ಳಬೇಕು. ಉತ್ತಮವಾಗಿ ಅಧ್ಯಯನ ನಡೆಸಿದರೆ ಉತ್ತಮವಾದ ಅಂಕ ಸಿಗುತ್ತದೆ. ಹಾಗೆಯೇ ಉತ್ತಮ ಅಭ್ಯಾಸ ಮಾಡಿದರೆ ಉತ್ತಮ ಕ್ರೀಡಾಪಟುವಾಗಬಹುದು. ಸವಾಲು ಮತ್ತು ಒತ್ತಡವನ್ನು ಸಮತೋಲನವಾಗಿ ಸ್ವೀಕರಿಸಬೇಕು’ ಎಂದು ಕ್ರಿಕೆಟಿಗ ಅನಿಲ್ ಕುಂಬ್ಳೆ ಅಭಿಪ್ರಾಯ ಹಂಚಿಕೊಂಡರು.

ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಮಾತನಾಡಿ, ಕ್ರೀಡೆ ಮತ್ತು ಸಾಹಿತ್ಯ ಉತ್ತಮ ಸಮಾಜವನ್ನು ರೂಪಿಸುತ್ತದೆ. ಈ ದಾರಿಯಲ್ಲಿರುವ ಅಡೆತಡೆ ಲೆಕ್ಕಿಸದೆ ಸಾಧನೆಯತ್ತ ಗಮನ ಹರಿಸಬೇಕು’ ಎಂದು ಹೇಳಿದರು.

ಬೆಂಗಳೂರು ರೇಸ್

ಮೇಯ್ನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆ

ಗಾರ್ಡನ್ ಸಿಟಿ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಮೇಯ್ನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನೆಪೋಲಿಯನ್ 1, ಗ್ರೌಸ್ ಮೌಂಟೇನ್ 3, ಟ್ರಿಪಲ್ ವಿ
2ನೇ ರೇಸ್: ಮಿಹ್ರಾ 5, ರಾಯಲ್ ಡೆಕ್ಕನ್ 3, ಡೊಮಿನ 4
3ನೇ ರೇಸ್: ಗ್ಲೋರಿಯಸ್ ಸ್ಟ್ರೈಡ್ಸ್ 3, ಅಲಂಗಿರ್ 1, ಐನಾಡಿ 2
4ನೇ ರೇಸ್: ಫಿನಾಮಿನನ್ 3, ಟೆಸೆರಿನೊ 5, ಕನೆಕ್ಟಿಂಗ್ ಡಾಟ್ಸ್ 4
5ನೇ ರೇಸ್: ಮೇಯ್ನ್ ಮ್ಯಾಜಿಕ್ 4, ಆಸ್ಪೀಸಿಯಸ್ ಕ್ವೀನ್ 1, ಭರತ್ 2
6ನೇ ರೇಸ್: ಎಬೋಟ್ಸೆ 3, ಮಾಂಟೇರಿಯೊ 5, ಇನ್ವಿನ್ಸಿಬಲ್ 1
7ನೇ ರೇಸ್: ಮೆಟ್‌ಜಿಂಗರ್ 4, ಬ್ಲೂ ಗಾಡ್ 1, ನಾಟಿ ಪ್ಯಾಟನ್ 6

ಉತ್ತಮ ಬೆಟ್: ಫಿನಾಮಿನನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ಬ್ರಿಡ್ಜಿಂಗ್ ದಿ ಗ್ಯಾಪ್-ವೃತ್ತಿ ಕಾರ್ಯಾಗಾರದ ಉದ್ಘಾಟನೆ: ಲಿಂಗರಾಜ ಗಾಂಧಿ, ಉಪಸ್ಥಿತಿ: ಜವರೇಗೌಡ ಟಿ., ವಿಜಯಲಕ್ಷ್ಮಿ ಎಂ.ವಿ., ಜ್ಯೋತಿ ವೆಂಕಟೇಶ್, ಅಧ್ಯಕ್ಷತೆ: ರಿತಿಕಾ ಸಿನ್ಹಾ, ಆಯೋಜನೆ: ಸಮಾಜ ಕಾರ್ಯ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಉದ್ಯೋಗ ಮೇಳ: ಅತಿಥಿಗಳು: ಯು.ಟಿ. ಖಾದರ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಜಮೀರ್ ಅಹಮದ್ ಖಾನ್, ಆಯೋಜನೆ: ಪ್ರಸಿಡೆನ್ಸಿ ಫೌಂಡೇಶನ್, ಸ್ಥಳ: ಖುದ್ದೂಸ್ ಸಾಹೇಬ್ ಈದ್ಗಾ ಮೈದಾನ, ಮಿಲ್ಲರ್ಸ್ ರಸ್ತೆ, ಬೆನ್‌ಸನ್ ಟೌನ್, ಬೆಳಿಗ್ಗೆ 10ರಿಂದ

60 ಕಲಾವಿದರಿಗೆ ಸನ್ಮಾನ: ಅತಿಥಿ: ಎಲ್.ಎಸ್. ಶ್ಯಾಮಸುಂದರ್ ಶರ್ಮಾ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಭೂಮಿಕಾ ಹಾಲ್, ಮೆವ್ಸ್ ಕಟ್ಟಡ, 17ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

‘ಪರಿಸರ ಕಾಯ್ದೆಗಳಿಗೆ ಸಂಬಂಧಿಸಿದ ಸಾಂವಿಧಾನಿಕ ಅಂಶಗಳು’ ಕುರಿತ ಸಮ್ಮೇಳನ: ಅತಿಥಿಗಳು: ಪ್ರಸನ್ನ ಬಿ. ವರಾಳೆ, ಕೆ. ನಟರಾಜನ್, ಬಿಸ್ವಂತ ರಥ್, ಇ.ಎಸ್. ಇಂದಿರೇಶ್, ಆನಂದ್ ಸಂಜಯ್ ಎಂ. ನುಲಿ, ಅಧ್ಯಕ್ಷತೆ: ವಿ. ಗೋಪಾಲಗೌಡ, ಆಯೋಜನೆ: ಇಂಡಿಯನ್ ಕಾನ್ಫರೆನ್ಸ್ ಆಫ್ ಇಂಟಲೆಕ್ಚುಯಲ್, ಸ್ಥಳ: ದಿ ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

ಘಟಿಕೋತ್ಸವ ದಿನ–2025: ಅತಿಥಿ: ಡಿ.ವಿ. ಪರಮಶಿವಮೂರ್ತಿ, ಅಧ್ಯಕ್ಷತೆ: ವಿಷ್ಣುಭರತ ಅಲಂಪಲ್ಲಿ, ಉಪಸ್ಥಿತಿ: ಎ. ಪ್ರಕಾಶ, ಐ.ಎಸ್. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದ ಆಯ್ದ ಭಾಗದ ಗಮಕ ವಾಚನ ಮತ್ತು ವ್ಯಾಖ್ಯಾನ: ಎ.ವಿ. ಪ್ರಸನ್ನ, ವಾಚನ: ನಿರ್ಮಲಾ ಪ್ರಸನ್ನ, ಅಧ್ಯಕ್ಷತೆ: ಚಂದ್ರಶೇಖರ್ ನಾದೂರು, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ರಂಗದೋಕುಳಿ ಉತ್ಸವ: ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಬ್ಲೂ ಬೆಲ್ ಪಬ್ಲಿಕ್ ಶಾಲೆ, ಕೆಂಪೇಗೌಡನಗರ, ಮಧ್ಯಾಹ್ನ 3



ಡಾ. ವಿಷ್ಣುವರ್ಧನ್ ಅಭಿನಯದ ಕನ್ನಡ ಚಲನಚಿತ್ರಗಳ ಗೀತ ಗಾಯನ ಮತ್ತು ನುಡಿ ನಮನ: ಅತಿಥಿಗಳು: ಕೆ.ಎನ್. ಶೈಲಜಾ, ಕೆ.ಎನ್. ನರೇಂದ್ರ, ಮಂಗಳಾ ಎನ್., ಆಯೋಜನೆ: ಶೃತಿ ಲಯ ಸಂಗೀತ ಕಲ್ಚರಲ್ ಅಕಾಡೆಮಿ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಮಧ್ಯಾಹ್ನ 3.30

ವೇದಶ್ರೀ ಪಿ. ರವಿಶಂಕರ್ ಅವರು ಬರೆದಿರುವ ‘ಮಿಷನ್ ಹಿಂದೂಸ್ತಾನ್’ ಪುಸ್ತಕ ಬಿಡುಗಡೆ: ಶ್ರೀನಿವಾಸರಾಜು, ಉಪಸ್ಥಿತಿ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ಚಿ.ನಾ. ರಾಮು, ಮೋಹನ್ ಗೌಡ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ಸಾಹಿತ್ಯ ಸೌರಭ–3 ‘ನುಡಿ ಸುಗ್ಗಿ’: ಮಾನನಾಡುವವರು: ಎಸ್. ಷಡಕ್ಷರಿ, ನಂದಿನಿ, ಅಧ್ಯಕ್ಷತೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಆಯೋಜನೆ: ಋತುಸೌರಭ ಫೌಂಡೇಶನ್, ಸ್ಥಳ: ಹಿರಿಯ ನಾಗರಿಕರ ಕೇಂದ್ರ, ಒಂದನೇ ಮಹಡಿ, ಐದನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೊನಿ, ಬಸವೇಶ್ವರನಗರ, ಸಂಜೆ 4.30

ಸಂತ ಸೇವಾಲಾಲ್ ಜಯಂತಿ ಉದ್ಘಾಟನೆ: ಸಿದ್ದರಾಮಯ್ಯ, ಸಾನಿಧ್ಯ: ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

ಸಾಹಿತ್ಯ ಸಂಜೆ: ‘ಸಿನಿಮಾ ಹೀಗೂ ಮಾಡಬಹುದೆ’ ಉಪನ್ಯಾಸ: ಅಭಯಸಿಂಹ, ಆಯೋಜನೆ ಮತ್ತು ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಸಂಜೆ 6

ತಿಂಗಳ ವಿಶೇಷ ಕಾರ್ಯಕ್ರಮ: ಅತಿಥಿಗಳು: ಸುಂದರ್ ರಾಜ್ ಕೆ., ಕವಿತಾ ಶರ್ಮಾ ಸಿ., ಅಧ್ಯಕ್ಷತೆ: ನರಸಿಂಹ ನಾಯ್ಕ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಸ್ವರ–ಶೃಂಗಾರ: ಗಾಯನ: ಸುರೇಖಾ ಹೆಗಡೆ ಮತ್ತು ತಂಡ, ಗಾಯನ: ಕಿರಣ್ ಚನ್ನಗಿರಿ, ಕೊಳಲು: ಶಿವಲಿಂಗ ರಾಜಾಪುರ, ರಾಘವೇಂದ್ರ ರಂಗಧೋಳ, ಕೀ–ಬೋರ್ಡ್: ಬಸವರಾಜ, ತಬಲಾ: ವಿಠ್ಠಲ ರಂಗಧೋಳ, ಆಯೋಜನೆ: ಸಪ್ತಕ, ಸ್ಥಳ: ನ್ಯೂ ಕಾನ್ಫರೆನ್ಸ್ ಹಾಲ್, ಎಂ.ಇ.ಎಸ್. ಕಾಲೇಜು, ಮಲ್ಲೇಶ್ವರ, ಸಂಜೆ 5.30

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಗಾಯನ: ಬೆಂಗಳೂರು ಸಹೋದರರು, ಪಿಟೀಲು: ಎಂ. ಶಿವತೇಜಾ, ಮೃದಂಗ: ಎನ್. ವಾಸುದೇವ್, ಘಟ: ಎಸ್. ಶ್ರೀಶೈಲನ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ

‘ಗೀತ್ ತರಂಗ್’ ಉದ್ಘಾಟನೆ: ಕೆ.ಎಸ್. ಮುದಗಲ್, ಆರ್. ದೇವ್‌ದಾಸ್, ಅತಿಥಿಗಳು: ಶ್ರೀನಾಥ್, ಕೆ. ಕಲ್ಯಾಣ್, ಟಿ.ಎಸ್. ಮಹಾಂತೇಶ್, ವೀರ್ ಸಮರ್ಥ್, ಗಾಯನ: ಅಜಯ್ ವಾರಿಯರ್, ಶ್ರೀನಿವಾಸ್ ಮೂರ್ತಿ ಎಸ್., ರೋಹನ್ ಜೆ. ಬೇಗೂರ್, ಕೆ.ಎಸ್. ಸುರೇಖಾ, ದ್ವಿರಾಘವನ್, ಸೀಮಾ ರಾಯ್ಕರ್, ಆಯೋಜನೆ: ತರಂಗ್ ಕ್ರಿಯೇಟರ್ಸ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5.30

ಗೌರವಿಸಿರುವುದು ಮಾದರಿ ಕಾರ್ಯ: ಶಿವರುದ್ರ ಸ್ವಾಮೀಜಿ

ಪಕ್ಕ ವಾದ್ಯಗಾರರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಪ್ರದಾಯ ಬಿಟ್ಟು ವಚನಕಾರರ ಪಥದಂತೆ ಪಕ್ಕ ವಾದ್ಯಗಾರರನ್ನು ಗುರುತಿಸಿ, ಗೌರವಿಸಿರುವುದು ಮಾದರಿ ಕಾರ್ಯ’ ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಹೇಳಿದರು.

ವಚನಜ್ಯೋತಿ ಬಳಗ ಶುಕ್ರವಾರ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಕೀ–ಬೋರ್ಡ್ ವಾದಕ ಪುಣ್ಯೇಶ್ ಕುಮಾರ್, ತಬಲಾ ವಾದಕ ಗುರುರಾಜ ಆಚಾರ್ಯ, ರಿದಂ ಪ್ಯಾಡ್ ವಾದಕ ಮಹೇಂದ್ರ ಅವರಿಗೆ ‘ಶಿವಲಿಂಗ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ವಚನಜ್ಯೋತಿ ಬಳಗದ ಸಂಸ್ಥಾಪಕರಾದ ಪಂಡಿತ ಕೆ.ಪಿ. ಶಿವಲಿಂಗಯ್ಯ ಅವರು 60ರ ದಶಕದಲ್ಲಿ ನನಗೆ ಹಳಗನ್ನಡ ಕಾವ್ಯಗಳನ್ನು ಪರಿಚಯ ಮಾಡಿಕೊಟ್ಟಿದ್ದರು. ಶಿವಲಿಂಗಯ್ಯ ಅವರು ನಾಡಿನಾದ್ಯಂತ ಪ್ರವಚನಗಳನ್ನು ಮಾಡಿ ವ್ಯಾಖ್ಯಾನ ವಿಭೂಷಣರಾದರು’ ಎಂದು ಸ್ಮರಿಸಿದರು.



ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗ ಮಂದಿರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ವಿ. ಪುಣ್ಯೇಶ್ ಕುಮಾರ್, ಗುರುರಾಜ ಆಚಾರ್ಯ ದಂಪತಿ ಮತ್ತು ಎ. ಮಹೇಂದ್ರ ದಂಪತಿಗೆ ಶಿವಲಿಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಜ ಗುರುಪ್ರಸಾದ್, ಮಹೇಶ್ ಬೆಲ್ಲದ್, ವೀರಕಪುತ್ರ ಶ್ರೀನಿವಾಸ್, ಎಸ್. ಪಿನಾಕಪಾಣಿ, ಶಿವರುದ್ರ ಸ್ವಾಮೀಜಿ, ಬಲವಂತರಾವ್ ಪಾಟೀಲ್, ಪ್ರಭು ಇಸುವನಳ್ಳಿ, ಗುಂಡಿಗೆರೆ ವಿಶ್ವನಾಥ್, ಮಧು ಶಿವಕುಮಾರ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಗಾಯಕಿಯರಾದ ಮೀನಾಕ್ಷಿ ಮೇಟಿ, ಜಾನಕಿ, ಸರಸ್ವತಿ ಹೆಗಡೆ, ಪೂರ್ಣಿಕಾ ಆರಾಧ್ಯ, ಗಾಯಕರಾದ ದೇವೇಂದ್ರಕುಮಾರ ಪತ್ತಾರ್, ಸಿದ್ದರಾಮ ಕೇಸಾಪುರ ಅವರು ವಚನ ಸಂಗೀತ ಪ್ರಸ್ತುತಪಡಿಸಿದರು.

ವಚನ ಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಲೋಕ ಪುಸ್ತಕದ ವೀರಕಪುತ್ರ ಶ್ರೀನಿವಾಸ್, ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ವಚನಜ್ಯೋತಿ ಬಳಗದ ಗೌರವಾಧ್ಯಕ್ಷ ಮಹೇಶ್ ಬೆಲ್ಲದ್, ಪದಾಧಿಕಾರಿಗಳಾದ ಪ್ರಭು, ರಾಜಾ ಗುರುಪ್ರಸಾದ್, ಮುನಿರಾಜಪ್ಪ, ರು.ಫ. ದೇಸಾಯಿ, ಗುಂಡೀಗೆರೆ ವಿಶ್ವನಾಥ್, ಗಂಗಾಧರ್, ಎಂ. ನಂಜಪ್ಪ, ಮಧು, ರತ್ನಾ ದೇಸಾಯಿ, ರೂಪಾ, ಕಾತ್ಯಾಯಿನಿ ಉಪಸ್ಥಿತರಿದ್ದರು.



ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ನಡೆದ ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ ಕೊನೆಯ ದಿನವಾದ ಶುಕ್ರವಾರ ಜನಸಾಗರವೇ ಹರಿದು ಬಂದಿತ್ತು ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್



ಆಗಸದಲ್ಲಿ ವಿಮಾನಗಳ ಕಸರತ್ತು ವೀಕ್ಷಿಸಿದ ಪ್ರೇಕ್ಷಕರು

ಪ್ರದರ್ಶನಕ್ಕೆ 'ಸೂರ್ಯಕಿರಣ್' ತೆರೆ



ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ ಕೊನೆಯ ದಿನವಾದ ಶುಕ್ರವಾರ ಸೂರ್ಯಕಿರಣ ವಿಮಾನಗಳ ಕಸರತ್ತು

• ಕೆ.ಎಸ್.ಸುನಿಲ್

ಮುಖ್ಯಾಂಶಗಳು

- ಆರು ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಣೆ
- ಏರ್ ಶೋನಲ್ಲಿ 27 ದೇಶಗಳು ಭಾಗಿ
- ಮುಂದಿನ ಶೋ 2027ಕ್ಕೆ

ಬೆಂಗಳೂರು: ಯಲಹಂಕದ ವಾಯುನೆಲೆಯ ಆಗಸದಲ್ಲಿ ಶುಕ್ರವಾರ ಸಂಜೆ ಸೂರ್ಯ ಕಿರಣ್ ವಿಮಾನಗಳು ಪ್ರೀತಿಯ ಸಂಕೇತವಾದ ಹೃದಯದ ಚಿತ್ರಮೂಡಿಸಿ ಮರೆಯಾಗುತ್ತಿದ್ದಂತೆ 'ಏರೊ ಇಂಡಿಯಾ 2025' ವೈಮಾನಿಕ ಪ್ರದರ್ಶನಕ್ಕೆ ತೆರೆ ಬಿತ್ತು.

ಐದು ದಿನಗಳು ದೇಶ, ವಿದೇಶಗಳ ವಿಮಾನ ತಂಡಗಳು ನಡೆಸಿಕೊಟ್ಟ ಸಾಹಸ ಪ್ರದರ್ಶನ, ವೈಮಾನಿಕ ಪ್ರದರ್ಶನಕ್ಕೆ ವಿಶೇಷ ಮೆರುಗು ತಂದುಕೊಟ್ಟಿತ್ತು. ಕೊನೆಯ ದಿನ ಒಂದೂವರೆ ಲಕ್ಷ ಮಂದಿ ಪ್ರದರ್ಶನವನ್ನು ಕಣ್ತುಂಬಿಕೊಂಡರು. ಐದು ದಿನಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನರು ಪ್ರದರ್ಶನವನ್ನು ವೀಕ್ಷಿಸಿದ್ದಾರೆ.

ಯಲಹಂಕದ ಬಾನಿನಲ್ಲಿ ಲೋಹದ ಹಕ್ಕಿಗಳ ಕಲರವ ನೋಡಲು 2027ರವರೆಗೂ ಕಾಯಬೇಕು. ಈ ಮೂಲಕ ವರ್ಷದ ಬಹುದೊಡ್ಡ ವೈಮಾನಿಕ ಜಾತ್ರೆ ಏರೊ ಇಂಡಿಯಾ ಪ್ರದರ್ಶನ ಮುಕ್ತಾಯಗೊಂಡಿತು.

ವೈಮಾನಿಕ ಪ್ರದರ್ಶನದ 15ನೇ ಆವೃತ್ತಿಗೆ ಫೆಬ್ರುವರಿ 10ರಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದ್ದರು.

ಮೊದಲ ಮೂರು ದಿನ ವಿವಿಧ ದೇಶಗಳ ರಕ್ಷಣಾ ಸಚಿವರು ಮತ್ತು ಅಧಿಕಾರಿಗಳ ಸಭೆ, ಉದ್ಯಮಿಗಳ ಜೊತೆ ಮಾತುಕತೆ, ವಿಚಾರ ಸಂಕಿರಣ ಹಾಗೂ ರಕ್ಷಣಾ ಕ್ಷೇತ್ರಕ್ಕೆ ಹೂಡಿಕೆ ಆಕರ್ಷಿಸುವುದಕ್ಕೆ ಪೂರಕವಾದ ಸಭೆಗಳಿಗೆ ಸೀಮಿತವಾಗಿತ್ತು.

ವಿಮಾನಯಾನ ಹಾಗೂ ರಕ್ಷಣಾ ಕ್ಷೇತ್ರದ ದಿಗ್ಗಜರಾದ ಅಮೆರಿಕ, ರಷ್ಯಾ, ಫ್ರಾನ್ಸ್, ಇಸ್ರೇಲ್ ಸೇರಿದಂತೆ 27 ದೇಶಗಳು ಪಾಲ್ಗೊಂಡಿದ್ದವು. 98 ದೇಶಗಳ ಪ್ರತಿನಿಧಿಗಳು 700 ಮಳಿಗೆಗಳನ್ನು ತೆರೆದಿದ್ದರು.

ಸುಡು ಬಿಸಿಲು ಲೆಕ್ಕಿಸದೆ ನಿರೀಕ್ಷೆಗೂ ಮೀರಿ ಜನರು ಬಂದಿದ್ದರಿಂದ ವೀಕ್ಷಣಾ ಆವರಣ ಸಂಪೂರ್ಣ ಭರ್ತಿಯಾಗಿತ್ತು. ಮಕ್ಕಳು, ಯುವಜನರು, ಮಹಿಳೆಯರು ಸೇರಿದಂತೆ ಎಲ್ಲ ವಯೋಮಾನದವರು ಪ್ರದರ್ಶನಕ್ಕೆ ಬಂದಿದ್ದರು. ಬೆಳಿಗ್ಗೆ ಪ್ರದರ್ಶನ ವೀಕ್ಷಿಸಿದವರ ಪೈಕಿ ಬಹಳಷ್ಟು ಮಂದಿ ವಾಪಸ್ ಮನೆಗಳಿಗೆ ಹೋಗಲಿಲ್ಲ. ವಸ್ತುಪ್ರದರ್ಶನ ಮಳಿಗೆಗಳಿಗೆ ಭೇಟಿ ನೀಡಿ ಮತ್ತೆ ವಿಮಾನ ಹಾರಾಟ ನೋಡಲು ಜಮಾಯಿಸಿದ್ದರು. ಮಧ್ಯಾಹ್ನದ ಪ್ರದರ್ಶನ ವೀಕ್ಷಿಸಲು ಮತ್ತಷ್ಟು ಜನರು ಬಂದರು. ಸುಖೋಯ್–30 ಎಂಕೆ1, ತೇಜಸ್, ಎಫ್ –16, ಎಸ್‌ಯು–57 ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ವಿಮಾನಗಳು ನಡೆಸಿದ ಕಸರತ್ತು ನೋಡುಗರನ್ನು ನಿಬ್ಬೆರಗಾಗುವಂತೆ ಮಾಡಿದವು. ಜನರ ಆಕರ್ಷಣೆಯ ಕೇಂದ್ರ ಬಿಂದು ಸೂರ್ಯ ಕಿರಣ್ ತಂಡದ ಒಂಬತ್ತು ವಿಮಾನಗಳು ಹಾರಿ ಬಂದು ಬಾನಂಗಳದಲ್ಲಿ ಬಿಡಿಸಿದ ಚಿತ್ತಾರಗಳು ನೆರೆದಿದ್ದವರ ಮನಸೂರೆಗೊಳಿಸಿದವು.

ಇನ್ನೇನು ನೆಲಕ್ಕೆ ಅಪ್ಪಳಿಸಿತು ಎನ್ನುವಷ್ಟರಲ್ಲಿ ಆಕಾಶದತ್ತ ಜಿಗಿದು ಹೊರಟ ಯುದ್ಧ ವಿಮಾನ, ಕಣ್ಮುಚ್ಚಿ ಬಿಡುವಷ್ಟರಲ್ಲಿ ಮತ್ತೆ ಅದೇ ವೇಗದಲ್ಲಿ ಬಂದು ಆಕಾಶದಲ್ಲಿ ಪಲ್ಟಿ ಹೊಡೆಯುತ್ತಿತ್ತು. ವಿರುದ್ಧ ದಿಕ್ಕಿನಲ್ಲಿ ಬಂದ ಯುದ್ಧ ವಿಮಾನಗಳು ಇನ್ನೇನು ಡಿಕ್ಕಿ ಹೊಡೆದುಕೊಂಡವು ಎನ್ನುವಷ್ಟರಲ್ಲಿ ಬಾಗಿ ತಪ್ಪಿಸಿಕೊಂಡು ಮುಂದೆ ಸಾಗಿದವು.

ಈ ವಿಮಾನಗಳ ಕಸರತ್ತು ಕಂಡು ಮಕ್ಕಳು, ಹಿರಿಯರು ಕುಣಿದು ಕುಪ್ಪಳಿಸಿದರು. ಲೋಹದ ಹಕ್ಕಿಗಳ ಕಲರವ ಮೆಲುಕು ಹಾಕುತ್ತ ಮನೆಯತ್ತ ಹೊರಟರು.

ಹರಿಪ್ರಸಾದ್, ನಾಸಿರ್‌ಗೆ ಉಸ್ತುವಾರಿ

ನವದೆಹಲಿ: ರಾಜ್ಯಸಭಾ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರನ್ನು ಜಮ್ಮು ಮತ್ತು ಕಾಶ್ಮೀರದ ಪ್ರಧಾನ ಕಾರ್ಯದರ್ಶಿಯಾಗಿ ಎಐಸಿಸಿ ಶನಿವಾರ ನೇಮಿಸಿದೆ. ಹರಿಯಾಣ ರಾಜ್ಯದ ಪಕ್ಷದ ಉಸ್ತುವಾರಿಯಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ನೇಮಿಸಲಾಗಿದೆ.

ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪಕ್ಷದ ಸಂಘಟನೆಯ ಪುನರ್‌ರಚನೆ ಪ್ರಕ್ರಿಯೆಗೆ ಪಕ್ಷ ಚಾಲನೆ ನೀಡಿದೆ. ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೂ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ಹರಿಪ್ರಸಾದ್ ಅವರು ದಶಕಗಳ ಕಾಲ ರಾಷ್ಟ್ರ ರಾಜಕಾರಣದಲ್ಲಿದ್ದು ಹಲವು ರಾಜ್ಯಗಳ ಉಸ್ತುವಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಮೂರು ವರ್ಷಗಳ ಹಿಂದೆ ರಾಜ್ಯ ರಾಜಕಾರಣಕ್ಕೆ ಬಂದಿದ್ದರು. ರಾಷ್ಟ್ರ ರಾಜಕಾರಣದಲ್ಲಿ ಅವರ ಅನುಭವವನ್ನು ಮತ್ತೆ ಬಳಸಿಕೊಳ್ಳಲು ಪಕ್ಷ ತೀರ್ಮಾನಿಸಿದೆ.

ಭವಿಷ್ಯದಲ್ಲಿ ನಗರ ಸರಕು ಸಾಗಣೆಗೆ ವಾಯುಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ 5ರಿಂದ 10 ವರ್ಷಗಳಲ್ಲಿ ನಗರ ಪ್ರದೇಶಗಳ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗುವುದರಿಂದ, ಡ್ರೋನ್ ಮೂಲಕ ಆಗಸ ಮಾರ್ಗದಲ್ಲಿ ಸರಕು ಸಾಗಣೆ ವ್ಯವಸ್ಥೆ ಸಾಮಾನ್ಯವಾಗಲಿದೆ' ಎಂದು ಬೆಂಗಳೂರಿನ ಸ್ಕ್ಯಾನ್ ಡ್ರೋನ್ ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ಅರ್ಜುನ್ ನಾಯ್ಕ್ ತಿಳಿಸಿದರು.

ಏರೊ ಇಂಡಿಯಾದ 15ನೇ ಆವೃತ್ತಿಯಲ್ಲಿ ಸ್ಕ್ಯಾನ್ ಡ್ರೋನ್ ಕಂಪನಿ ಅಭಿವೃದ್ಧಿಪಡಿಸಿದ 5 ಕೆ.ಜಿ.ಯಿಂದ 200 ಕೆ.ಜಿ. ಭಾರದ ವಸ್ತುಗಳನ್ನು ಹೊತ್ತೊಯ್ಯಬಲ್ಲ ಕಾರ್ಗೊಮ್ಯಾಕ್ಸ್ ಡ್ರೋನ್‌ಗಳು ಪ್ರದರ್ಶನಗೊಂಡಿವೆ.

'ನಗರ ಪ್ರದೇಶಗಳು ವಾಹನಗಳಿಂದ ತುಂಬಿ ತುಳುಕುತ್ತಿವೆ. ನಿಗದಿತ ಸಮಯದಲ್ಲಿ ವಸ್ತುಗಳನ್ನು ರಸ್ತೆ ಮಾರ್ಗದಲ್ಲಿ ತಲುಪಿಸುವುದು ಅಸಾಧ್ಯವಾಗಿದೆ. ಈಗಿರುವ ವಾಹನಗಳ ಮಾರಾಟ ಪ್ರಗತಿಯನ್ನು ಗಮನಿಸಿದರೆ, ವಾಹನ ದಟ್ಟಣೆ ಇನ್ನಷ್ಟು ಹೆಚ್ಚುವುದು ನಿಚ್ಚಳ. ಹೀಗಾಗಿ ಇನ್ನೂ ಅನ್ವೇಷಿಸದ ನಗರ ಪ್ರದೇಶಗಳ ವಾಯುಮಾರ್ಗದ ಕುರಿತು ಕಂಪನಿಗಳು ಮಾತ್ರವಲ್ಲ, ಸರ್ಕಾರದ ಕಡೆಯಿಂದಲೂ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ವಿವರಿಸಿದರು.

'ಇಂಥ ಡ್ರೋನ್ ಹಾರಿಸಲು ಪೈಲಟ್ ಅಗತ್ಯವಿಲ್ಲ. ತಲುಪಬೇಕಾದ ವಿಳಾಸ ನಮೂದಿಸಿದರೆ ಸಾಕು ಡ್ರೋನ್ ನಿಗದಿತ ಸ್ಥಳ ತಲುಪಲಿದೆ. ರಸ್ತೆ ಮೂಲಕ ವಸ್ತುಗಳನ್ನು ಸಾಗಿಸಲು ನೀಡುವ ಹಣಕ್ಕಿಂತ ಇದು ಶೇ 15ರಷ್ಟು ಮಾತ್ರ ಹೆಚ್ಚಾಗಿರಲಿದೆ. ಭವಿಷ್ಯದಲ್ಲಿ ಇದರ ಬಳಕೆ ವ್ಯಾಪಕವಾದಲ್ಲಿ ಶುಲ್ಕ ಇನ್ನಷ್ಟು ತಗ್ಗುವ ಸಾಧ್ಯತೆಯೂ ಹೆಚ್ಚು. ಬೆಂಗಳೂರು, ದೆಹಲಿ, ಗುರುಗ್ರಾಮ, ನೊಯಿಡಾ, ಮುಂಬೈ, ಹೈದರಾಬಾದ್‌ನಂತ ಮಹಾನಗರಗಳು ಇನ್ನು ಕೆಲವೇ ವರ್ಷಗಳಲ್ಲಿ ಇಂಥ ಏರ್ ಕಾರ್ಗೊ ವ್ಯವಸ್ಥೆ ಹೊಂದಲಿವೆ' ಎಂದು ತಿಳಿಸಿದರು.



ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಆಯೋಜನೆಗೊಂಡಿರುವ ಏರೊ ಇಂಡಿಯಾ 15ನೇ ಆವೃತ್ತಿಯಲ್ಲಿ ಸ್ಕ್ಯಾನ್‌ಡ್ರೋನ್ ಕಂಪನಿ ಅಭಿವೃದ್ಧಿಪಡಿಸಿದ ಕಾರ್ಗೊಮ್ಯಾಕ್ಸ್ ಸಾಧನದೊಂದಿಗೆ ಸಂಸ್ಥಾಪಕ ಅರ್ಜುನ್ ನಾಯ್ಕ್ ಚಿತ್ರ: ಎಂ.ಎಸ್.ಮಂಜುನಾಥ್

'200 ಕೆ.ಜಿ. ತೂಕ ಹೊತ್ತ ಡ್ರೋನ್ 15 ಕಿ.ಮೀ. ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ. ಇಷ್ಟು ದೂರ ಸಾಗಲು ಇದು ತೆಗೆದುಕೊಳ್ಳುವ ಸಮಯ 17 ನಿಮಿಷ ಮಾತ್ರ. ಇದರಲ್ಲಿ 150 ಕೆ.ಜಿ. ತೂಕದ ಬ್ಯಾಟರಿಯನ್ನೂ ಅಳವಡಿಸಲಾಗಿದೆ. ನಾಗರಿಕ ವಿಮಾನಯಾನ ನಿರ್ದೇಶನಾಲಯವೂ ಇಂಥ ಡ್ರೋನ್‌ಗಳಿಗೆ ಅನುಮತಿ ನೀಡುವ ಚಿಂತನೆ ನಡೆಸಿರುವುದು ಸ್ವಾಗತಾರ್ಹ. ಈ ನೂತನ ಸಾರಿಗೆಗಾಗಿ ಏಕೀಕೃತ ಸಂಚಾರ ನಿರ್ವಹಣಾ ವ್ಯವಸ್ಥೆ ಜಾರಿಗೆ ಬರಬೇಕಿದೆ' ಎಂದು ಅರ್ಜುನ್ ನಾಯ್ಕ್ ತಿಳಿಸಿದರು.

'ಸ್ಕ್ಯಾನ್‌ಡ್ರೋನ್ ಕಂಪನಿಯು ಸದ್ಯ ಭಾರತೀಯ ಸೇನೆಗೆ ಇಂಥ ಸರಕು ಸಾಗಣೆ ಡ್ರೋನ್‌ಗಳನ್ನು ಪೂರೈಸುವ ಗುತ್ತಿಗೆ ಪಡೆದಿದೆ. ಬೆಂಗಳೂರು ಮತ್ತು ಲೇಹ್ ಲಡಾಖ್‌ನಲ್ಲಿ ತಯಾರಿಕಾ ಘಟಕಗಳನ್ನು ಹೊಂದಿದೆ. ವಾರ್ಷಿಕ ₹60 ಕೋಟಿಯಷ್ಟು ಸಂಶೋಧನೆ ಮತ್ತು ಅಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ. ವಾಣಿಜ್ಯ ಬಳಕೆಯ ಡ್ರೋನ್ ತಯಾರಿಕೆಯತ್ತಲೂ ಗಮನ ಹರಿಸಿದ್ದು, ಬ್ಯಾಟರಿ ಒಳಗೊಂಡಂತೆ ಇತರ ಬಿಡಿ ಭಾಗಗಳನ್ನು ಕಂಪನಿಯೇ ಅಭಿವೃದ್ಧಿಪಡಿಸಿದೆ' ಎಂದರು.

ಸಾರ್ವಜನಿಕ ಅಭಿಪ್ರಾಯ



ಮೊದಲ ಬಾರಿಗೆ ಏರ್ ಶೋ ನೋಡಲು ಬಂದಿದ್ದೆವು. ಯುದ್ಧ ವಿಮಾನಗಳ ಕಸರತ್ತುಗಳನ್ನು ಹತ್ತಿರದಿಂದ ನೋಡಿ ಸಂತಸವಾಯಿತು. ವಸ್ತು ಪ್ರದರ್ಶನದ ಮಳಿಗೆಗಳಲ್ಲಿ ವಿಮಾನದ ಮಾದರಿ, ಡ್ರೋನ್‌ಗಳು ಆಕರ್ಷಕವಾಗಿದ್ದವು. ಕುಟುಂಬದೊಂದಿಗೆ ಬಂದಿದ್ದು ಸಂತಸ ಹೆಚ್ಚಿಸಿತ್ತು. ಬಿಸಿಲಿನ ಬೇಗೆ ಹೆಚ್ಚಿದ್ದ ಕಾರಣ ಸ್ವಲ್ಪ ತೊಂದರೆಯಾಯಿತು.

ರಮೇಶ್, ಬೆಂಗಳೂರು



ಏರ್ ಶೋ ತುಂಬಾ ಸೊಗಸಾಗಿತ್ತು. ಆದರೆ ವಾಯುನೆಲೆಗೆ ಬರುಷ್ಟರಲ್ಲಿ ಸಾಕಾಯಿತು. ಎರಡು ಗಂಟೆಗೂ ಹೆಚ್ಚು ವಾಹನ ದಟ್ಟಣೆ ಉಂಟಾಯಿತು. ಇಲ್ಲಿಗೆ ಬಂದ ಮೇಲೂ ಪಾರ್ಕಿಂಗ್ ಸಮಸ್ಯೆ ಎದುರಾಯಿತು. ವಾಹನವನ್ನು ಎಲ್ಲಿ ನಿಲುಗಡೆ ಮಾಡಬೇಕು ಎಂದು ಯಾರೂ ಸರಿಯಾಗಿ ಹೇಳಲಿಲ್ಲ. ಕಷ್ಟಪಟ್ಟು ಬಂದು ವಿಮಾನಗಳ ಪ್ರದರ್ಶನ ನೋಡಿದ್ದು ಸಾರ್ಥಕ ಎನಿಸಿತು. ನನ್ನ ಪುಟ್ಟ ಮಗನೂ ಶೋ ನೋಡಿ ಖುಷಿಯಾಗಿದ್ದಾನೆ.

ರೂಪಲ್, ಜೈಪುರ



ವಿಮಾನಗಳ ಪ್ರದರ್ಶನ ಅದ್ಭುತವಾಗಿತ್ತು. ಕಳೆದ ಬಾರಿ ಏರ್ ಶೋ ನೋಡಲು ಸಾಧ್ಯವಾಗಿರಲಿಲ್ಲ. ಪಾಸ್ ಪಡೆದುಕೊಂಡು ಕೊನೆಯ ದಿನ ಕುಟುಂಬ ಸದಸ್ಯರೊಂದಿಗೆ ಬಂದು ಸಂಭ್ರಮಿಸಿದೆವು. ಬಿಸಿಲಿನ ಧಗೆಯನ್ನೂ ಮರೆಸುವಂತೆ ಮಾಡಿದ್ದು ಸೂರ್ಯ ಕಿರಣ್ ತಂಡದ ಪ್ರದರ್ಶನ. ಮೊದಲ ಬಾರಿಯ ಏರ್ ಶೋ ಅನುಭವ ಖುಷಿ ನೀಡಿದೆ.

ಪ್ರಸಾದ್, ಬೆಂಗಳೂರು



ಚಿಕ್ಕಂದಿನಿಂದಲೂ ಟಿ.ವಿಗಳಲ್ಲಿ ನೋಡುತ್ತಿದ್ದ ಯುದ್ಧ ವಿಮಾನಗಳನ್ನು ಮೊದಲ ಬಾರಿ ಹತ್ತಿರದಿಂದ ನೋಡಿದೆ. ಇದು ಹೊಸ ಅನುಭವ ಉಂಟು ಮಾಡಿತು. ಸುಖೋಯ್, ಎಫ್ 16, ಸೂರ್ಯ ಕಿರಣ್ ವಿಮಾನಗಳನ್ನು ಇಷ್ಟು ಹತ್ತಿರದಿಂದ ನೋಡಲು ಬೇರೆಡೆ ಅವಕಾಶ ಸಿಗುವುದಿಲ್ಲ. ಸೂರ್ಯ ಕಿರಣ್ ತಂಡದ ವಿಮಾನಗಳ ಕಸರತ್ತಿಗೆ ಮರುಳಾಗಿಬಿಟ್ಟೆವು. ವಿವಿಧ ಬಗೆಯ ಡ್ರೋನ್‌ಗಳು ಗಮನ ಸೆಳೆದವು.

ಪ್ರಕಾಶ್ ಬಿ.ಆರ್, ಶಿವಮೊಗ್ಗ

ಕಾಳ್ಗಿಚ್ಚು ನಿಯಂತ್ರಣ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿ ಕಾಳ್ಗಿಚ್ಚು ನಿಯಂತ್ರಣಕ್ಕೆ ಪೂರ್ಣ ಪ್ರಮಾಣದಲ್ಲಿ ಸನ್ನದ್ಧರಾಗಿರಬೇಕು. ಬೆಂಕಿಯಿಂದ ಕಾಡು ನಾಶವಾಗುವುದನ್ನು ತಡೆಯಲು ಅಗತ್ಯವಿರುವ ಎಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಅರಣ್ಯಾಧಿಕಾರಿಗಳಿಗೆ ಸೂಚಿಸಿದರು.

ಕಾಳ್ಗಿಚ್ಚು ನಿಯಂತ್ರಣ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಜತೆ ವಿಡಿಯೊ ಸಂವಾದದ ಮೂಲಕ ಅವರು ಶುಕ್ರವಾರ ಸಭೆ ನಡೆಸಿದರು. 'ಈ ಬಾರಿ ಉತ್ತಮ ಮಳೆಯಾಗಿದ್ದರೂ, ಬಿಸಿಲು ಭಾರಿ ಪ್ರಮಾಣದಲ್ಲಿ ಇದೆ. ಕಾಡು ಒಣಗಿದ್ದು, ಬೆಂಕಿಯ ಅಪಾಯ ತೀವ್ರವಾಗಿದೆ. ಆದರೆ ಯಾವುದೇ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ನಿರ್ದೇಶನ ನೀಡಿದರು.

'ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಆಯಾ ವಿಭಾಗದ ಪಂಚಾಯಿತಿ ಅಧಿಕಾರಿಗಳೊಂದಿಗೆ ಸಭೆ ನಡೆಸಬೇಕು. ಅವರ ಸಹಯೋಗದೊಂದಿಗೆ ಕಾರ್ಯಯೋಜನೆ ಸಿದ್ಧಪಡಿಸಬೇಕು. ಕಾಳ್ಗಿಚ್ಚಿನ ಅಪಾಯಗಳು ಮತ್ತು ತಡೆ ಸಂಬಂಧ ಗ್ರಾಮ ಹಾಗೂ ಸಮುದಾಯ ಸಭೆಗಳನ್ನು ನಡೆಸಿ, ಜನರಲ್ಲಿ ಜಾಗೃತಿ ಮೂಡಿಸಬೇಕು' ಎಂದರು.

'ಉಪಗ್ರಹ ಆಧಾರಿತ ಕಾಳ್ಗಿಚ್ಚು ಮುನ್ನೆಚ್ಚರಿಕೆ ವ್ಯವಸ್ಥೆಯ ಸೂಚನೆಗಳಿಗೆ ಕ್ಷಿಪ್ರವಾಗಿ ಸ್ಪಂದಿಸಬೇಕು. ಪದೇ–ಪದೇ ಬೆಂಕಿ ಕಾಣಿಸಿಕೊಂಡ ಪ್ರದೇಶಗಳಲ್ಲಿ ಬೆಂಕಿರೇಖೆ ರಚಿಸಬೇಕು. ಪ್ರತಿದಿನವೂ ಗಸ್ತು ನಡೆಸಬೇಕು. ಕಾಡ್ಗಿಚ್ಚು ನಿಯಂತ್ರಣ ಕಾರ್ಯಯೋಜನೆ ಸಿದ್ಧಪಡಿಸಬೇಕು. ಈ ಸಂಬಂಧ ಕ್ಷೇತ್ರಮಟ್ಟದ ಸಿಬ್ಬಂದಿಗೆ ಸ್ಪಷ್ಟಸೂಚನೆ ನೀಡಿರಬೇಕು' ಎಂದು ಹೇಳಿದರು.

'ಉದ್ದೇಶಪೂರ್ವಕವಾಗಿ ಕಾಡಿಗೆ ಬೆಂಕಿ ಹಾಕುವ ಕಿಡಿಗೇಡಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಸೂಚಿಸಿದರು.

ಜಾಗತಿಕವಾಗಿ ಕರ್ನಾಟಕ ಸ್ಪರ್ಧೆ

ಜಾಗತಿಕ ಹೂಡಿಕೆದಾರರ ಸಮಾವೇಶದ ಸಮಾರೋಪದಲ್ಲಿ ಡಿಸಿಎಂ ಡಿ.ಕೆ.ಶಿ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಂಡವಾಳ ಹೂಡಿಕೆ ಆಕರ್ಷಣೆ ವಿಚಾರದಲ್ಲಿ ಕರ್ನಾಟಕವು ದೇಶದ ಇತರ ರಾಜ್ಯಗಳ ಜತೆ ಸ್ಪರ್ಧೆ ಮಾಡುತ್ತಿಲ್ಲ. ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ್ಣಿಸಿದರು.

'ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ'ದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿಮಾತನಾಡಿದರು.

'ಹೂಡಿಕೆ ಮಾಡಲು ಒಪ್ಪಂದ ಮಾಡಿಕೊಂಡವರು ರಾಜ್ಯದಲ್ಲಿ ಸೋಲುವ ಮಾತಿಲ್ಲ. ನಮ್ಮ ರಾಜ್ಯಕ್ಕೆ ಬಂದವರು ಬರಿಗೈಯಲ್ಲಿ ಹೋಗುವುದಿಲ್ಲ. ಭಾರತವನ್ನು ವಿಶ್ವವು ಬೆಂಗಳೂರು ಮತ್ತು ಕರ್ನಾಟಕದ ಮೂಲಕ ನೋಡುತ್ತಿದೆ. ಅದಕ್ಕಾಗಿಯೇ ರಾಜ್ಯದ ವಿವಿಧ ನಗರಗಳಲ್ಲಿ ಪ್ರಗತಿ ಸಾಧಿಸಲು ಯೋಜನೆ ರೂಪಿಸಲಾಗಿದೆ' ಎಂದು ಹೇಳಿದರು.

ಸಂಸದ ಶಶಿ ತರೂರ್ ಮಾತನಾಡಿ, '21ನೇ ಶತಮಾನದಲ್ಲಿ ದೇಶ ಮುನ್ನಡೆಯಬೇಕಿರುವ ದಾರಿ ಯಾವುದು ಎಂಬುದನ್ನು ಕರ್ನಾಟಕವು ತೋರಿಸಿದೆ. ದೇಶದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡುತ್ತಿರುವ ಕರ್ನಾಟಕದಿಂದ ವಿವಿಧ ರಾಜ್ಯಗಳು ಕಲಿಯುವುದು ಬಹಳಷ್ಟಿವೆ' ಎಂದರು.

ಗ್ರೀಸ್ ಮಾಜಿ ಪ್ರಧಾನಿ ಜಾರ್ಜ್ ಪಪಾಂಡ್ರ್ಯೂ ಮಾತನಾಡಿ, 'ಯೂರೋಪ್ ದೇಶಗಳು ದೊಡ್ಡ ಮಟ್ಟದ ಬಿಕ್ಕಟ್ಟು ಎದುರಿಸುತ್ತಿವೆ. ಅಲ್ಲಿ ಬೆಳವಣಿಗೆ ದೊಡ್ಡ ಸವಾಲಾಗಿದೆ. ಭಾರತ ಅದರಲ್ಲೂ ನಿರ್ದಿಷ್ಟವಾಗಿ ಕರ್ನಾಟಕ ಈ ಸವಾಲನ್ನು ಮೆಟ್ಟಿ ನಿಂತಿದೆ. ಕರ್ನಾಟಕದ ಕೈಗಾರಿಕಾ ಮತ್ತು ಇತರ ನೀತಿಗಳು ಹೂಡಿಕೆಗೆ ಮೇಲ್ಪಂಕ್ತಿಯಾಗಿವೆ' ಎಂದು ಶ್ಲಾಘಿಸಿದರು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ರಾಜ್ಯದ ಸಚಿವರಾದ ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಮಂಕಾಳ ವೈದ್ಯ, ಆರ್.ಬಿ. ತಿಮ್ಮಾಪುರ, ಈಶ್ವರ ಖಂಡ್ರೆ, ಡಾ.ಎಂ.ಸಿ. ಸುಧಾಕರ್, ಶಿವರಾಜ ತಂಗಡಗಿ, ರಹೀಂ ಖಾನ್, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರು ಉಪಸ್ಥಿತರಿದ್ದರು.



ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾರೋಪ ಸಮಾರಂಭದಲ್ಲಿ ಕಾನೂನು ಸಚಿವ ಎಚ್.ಕೆ. ಪಾಟೀಲ, ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ, ಗ್ರೀಸ್‌ನ ಮಾಜಿ ಪ್ರಧಾನಿ ಜಾರ್ಜ್ ಪಪಾಂಡ್ರ್ಯೂ, ಡಿಸಿಎಂ ಡಿ.ಕೆ. ಶಿವಕುಮಾರ್, ಸಂಸದ ಶಶಿ ತರೂರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಸಚಿವ ಕೆ.ಜೆ.ಜಾರ್ಜ್ ಸಂಭ್ರಮಿಸಿದ ಕ್ಷಣ ಪ್ರಜಾವಾಣಿ ಚಿತ್ರಗಳು

ಪರಿಸರ ಸ್ನೇಹಿ ಸಾರಿಗೆ ನೀತಿ ಬಿಡುಗಡೆ

ಮುಂದಿನ ಐದು ವರ್ಷಗಳ 'ಪರಿಸರಸ್ನೇಹಿ ಸಾರಿಗೆ ನೀತಿ'ಯನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಬಿಡುಗಡೆ ಮಾಡಿದರು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಈ ಬಗ್ಗೆ ಮಾತನಾಡಿ, 'ವಿದ್ಯುತ್ ಮತ್ತು ಹೈಡ್ರೋಜನ್ ಚಾಲಿತ ವಾಹನ ತಯಾರಿಕೆ ವಲಯಕ್ಕೆ ಮುಂದಿನ 5 ವರ್ಷಗಳಲ್ಲಿ ₹50 ಸಾವಿರ ಕೋಟಿ ಬಂಡವಾಳ ಆಕರ್ಷಿಸಿ, 1 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಈ ನೀತಿ ಹೊಂದಿದೆ. ಇದಕ್ಕಾಗಿ ಗೌರಿಬಿದನೂರು, ಧಾರವಾಡ ಮತ್ತು ಹಾರೋಹಳ್ಳಿಯಲ್ಲಿ ಪರಿಸರಸ್ನೇಹಿ ಇಂಧನ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

ಕ್ಯಾನ್ಸರ್ ನಿರೋಧಕ ಔಷಧಕ್ಕೆ ಬಳಸುವ ಕಚ್ಚಾವಸ್ತು

'ಕ್ಯಾಂಪ್ಟೋಥೆಸಿನ್'ಗೆ ಕುತೂಹಲಿಗಳ ಕಣ್ಣು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಕ್ಯಾನ್ಸರ್ ನಿರೋಧಕ ಔಷಧಕ್ಕೆ ಬಳಸುವ 'ಕ್ಯಾಂಪ್ಟೋಥೆಸಿನ್' ಪ್ರದರ್ಶನವನ್ನು ಉದ್ಯಮಿಗಳು ಕುತೂಹಲದಿಂದ ವೀಕ್ಷಿಸಿದರು. ಕೆಲವರು ಒಂದು ಪ್ಯಾಕೆಟ್ ಖರೀದಿಸಲು ಮುಂದಾದರೂ ಇದು ಮಾರಾಟಕ್ಕಿಲ್ಲ. ಔಷಧ ತಯಾರಿಕಾ ಕಂಪನಿಗಳಿಗೆ ಒದಗಿಸುವ ಕಚ್ಚಾ ವಸ್ತು ಎಂದು ಮಳಿಗೆಯವರು ವಿವರ ನೀಡಿ ಕಳುಹಿಸುತ್ತಿದ್ದರು.

ಧಾರವಾಡದ ಎಂವೈಕೆ ಬಯೋ ಆ್ಯಕ್ಟೀವ್ಸ್ ಇಂಟರ್ ನ್ಯಾಷನಲ್ ಕಂಪನಿಯ ಮಳಿಗೆಯೇ ವಿಶಿಷ್ಟ ಆಕರ್ಷಣೆಗೆ ಒಳಗಾದ ಮಳಿಗೆ.

ಮಾಫಿಯ ಫೊಯೆಟಿಡಾ (ಕನ್ನಡದಲ್ಲಿ ದುರ್ವಾಸನೆ ಗಿಡ, ಪುಗ ಕಲ್‌ಗುಜ ಎಂದು ಕರೆಯಲಾಗುತ್ತದೆ) ಗಿಡದಲ್ಲಿ ಇರುವ ಔಷಧೀಯ ಅಂಶವನ್ನು ಬೇರ್ಪಡಿಸಿ, ಸಂಸ್ಕರಿಸಿ ನೀಡುವ ಕೆಲಸವನ್ನು ಈ ಕಂಪನಿ ಮಾಡುತ್ತಿದೆ.

'ಹೈದರಾಬಾದ್‌ನ ಡಾ. ರೆಡ್ಡಿ ಕಂಪನಿ, ಅರಬಿಂದೋ ಫಾರ್ಮಾದವರಿಗೆ ಪೂರೈಕೆ ಮಾಡುತ್ತಿದ್ದೇವೆ. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ನಾವು ಮಳಿಗೆ ಹಾಕಿದ್ದರಿಂದ ದೊಡ್ಡ ಮಟ್ಟದ ಪ್ರಚಾರ ಸಿಕ್ಕಿದೆ. ಅಮೆರಿಕ, ಇಂಗ್ಲೆಂಡ್ ಮತ್ತು ಚೀನಾದ ವೈದ್ಯಕೀಯ ಉದ್ಯಮಿಗಳು ಬಂದು ನೋಡಿ ಸಂಭ್ರಮಪಟ್ಟರು. 'ಕ್ಯಾಂಪ್ಟೋಥೆಸಿನ್' ಸಂಗ್ರಹಿಸುವುದೇ ಸವಾಲಾಗಿದ್ದು, ಪೂರೈಕೆ ಮಾಡುವುದಿದ್ದರೆ ನಮ್ಮನ್ನು ಸಂಪರ್ಕಿಸಿ. ಈ ಬಗ್ಗೆ ಒಪ್ಪಂದ ಮಾಡಿಕೊಳ್ಳೋಣ ಎಂದು ಸಂಪರ್ಕ ಸಂಖ್ಯೆ, ಮೇಲ್ ಐಡಿ ನೀಡಿ ಹೋಗಿದ್ದಾರೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ರೋಹಿಣಿ ಎಂ. ಕರಿದುರ್ಗನವರ್ ಮಾಹಿತಿ ನೀಡಿದರು.

'ಸದ್ಯ ನಾವು 'ಕ್ಯಾಂಪ್ಟೋಥೆಸಿನ್' ಪೂರೈಕೆ ಮಾಡುವ ಕೆಲಸ ಮಾಡುತ್ತಿದ್ದೇವೆ. ಮುಂದೆ ನಾಲ್ಕೈದು ವರ್ಷಗಳ ನಂತರ ಸರ್ಕಾರದಿಂದ ಅನುಮತಿ ಪಡೆದು ನಾವೇ ಔಷಧ ತಯಾರಿಸಬೇಕು ಎಂಬ ಯೋಜನೆ ಇದೆ' ಎಂದು ಭವಿಷ್ಯದ ಬಗ್ಗೆ ಕನಸುಗಳನ್ನು ಬಿಚ್ಚಿಟ್ಟರು.

'ಚೀನಾದಿಂದ ಬಂದ ಗಿಡ ಇದಾಗಿದ್ದು, ಕರ್ನಾಟಕದ ವಿವಿಧ ಭಾಗಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುತ್ತದೆ. ಇದಕ್ಕೆ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವ ಇದೆ' ಎಂದು ಕಂಪನಿಯ ನಿರ್ದೇಶಕ ಸಂದೀಪ್ ಎಂ. ಕರಿದುರ್ಗನವರ್ ತಿಳಿಸಿದರು.



'ಕ್ಯಾಂಪ್ಟೋಥೆಸಿನ್' ಬಗ್ಗೆಎಂವೈಕೆ ಬಯೋ ಆ್ಯಕ್ಟೀವ್ಸ್ ಇಂಟರ್ ನ್ಯಾಷನಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ರೋಹಿಣಿ ಎಂ. ಕರಿದುರ್ಗನವರ್, ನಿರ್ದೇಶಕ ಸಂದೀಪ್ ಎಂ. ಕರಿದುರ್ಗನವರ್ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಪ್ರದರ್ಶನಕ್ಕಷ್ಟೇ ಇಟ್ಟದ್ದು ಮಾರಾಟಕ್ಕಲ್ಲ
- ಔಷಧ ತಯಾರಿ ಕಂಪನಿಗಳಿಗೆ ಉಪಯೋಗ
- ಮಾಹಿತಿ ಪಡೆದ ನೂರಾರು ಜನರು

INVEST KARNATAKA

ಅಕ್ಷರ ದಾಸೋಹ ಕಾರ್ಮಿಕರ ಪ್ರತಿಭಟನೆ

ಪ್ರತಿ ತಿಂಗಳ 5 ರ ಒಳಗಾಗಿ ವೇತನ ಬಿಡುಗಡೆ • ವಿಮೆ ಯೋಜನೆ ಜಾರಿಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠವೇತನಜಾರಿಮಾಡುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ಸದಸ್ಯರು (ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ – ಎಐಯುಟಿಯುಸಿ) ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಬಿಸಿಯೂಟ ಕಾರ್ಮಿಕರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ರಾಜ್ಯ ಸರ್ಕಾರ ಈ ಹಿಂದೆ ನೀಡಿದ್ದ ಭರವಸೆಯಂತೆ ಗೌರವಧನವನ್ನು ಹೆಚ್ಚಿಸಬೇಕು ಎಂದೂ ಆಗ್ರಹಿಸಿದರು.

ಆಯಾ ತಿಂಗಳ ವೇತನವನ್ನು ಪ್ರತಿತಿಂಗಳ 5ರ ಒಳಗಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು. ತಿಂಗಳ ವೇತನ ಚೀಟಿಯನ್ನು ನೀಡಬೇಕು ಎಂದು ಒತ್ತಾಯಿಸಿದರು.

ಎಲ್ಲಾ ಕಾರ್ಮಿಕರಿಗೂ ಜೀವ ವಿಮೆ ಯೋಜನೆಯನ್ನು ಜಾರಿಗೆ ತರಬೇಕು. ಸರ್ಕಾರವೇ ಅದರ ಕಂತಿನ ಮೊತ್ತವನ್ನು ಪಾವತಿಸಬೇಕು. ಬಿಸಿಯೂಟ ಕಾರ್ಮಿಕರಿಗೆ ನಿವೃತ್ತಿ ವೇತನ ಅನುಷ್ಠಾನಕ್ಕೆ ತರಬೇಕು. 10 ತಿಂಗಳ ಬದಲಿಗೆ 12 ತಿಂಗಳ ಗೌರವಧನ ಪಾವತಿಸಬೇಕು ಎಂದು ಆಗ್ರಹಿಸಿದರು.

ಬಿಸಿಯೂಟ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಿ, ಸೇವಾ ಭದ್ರತೆ ಒದಗಿಸಬೇಕು. ಬರಗಾಲದ ಕಾರಣ ನೀಡಿ ಕಳೆದ ವರ್ಷದ ಏಪ್ರಿಲ್ ಹಾಗೂ ಮೇ ತಿಂಗಳ ಗೌರವಧನವನ್ನು ಬಿಡುಗಡೆ ಮಾಡಿಲ್ಲ. ತಕ್ಷಣವೇ ಆ ಹಣವನ್ನು ಬಿಸಿಯೂಟ ಕಾರ್ಮಿಕರ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು ಎಂದು ಬೇಡಿಕೆ ಮಂಡಿಸಿದರು.

ರಾಜ್ಯದ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಡುಗೆ ಸಿಬ್ಬಂದಿಗೆ ಕನಿಷ್ಠ ವೇತನ ನೀಡಲಾಗುತ್ತಿದೆ. ಅದರಂತೆ ಮಕ್ಕಳ ಶೈಕ್ಷಣಿಕ ಬದುಕಿಗೆ ನೆರವಾಗುತ್ತಿರುವ ಅಕ್ಷರ ದಾಸೋಹ ಸಿಬ್ಬಂದಿಗೂ ಕನಿಷ್ಠ ವೇತನ ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸಮಿತಿ ಅಧ್ಯಕ್ಷೆ ಎ.ಶಾಂತಾ, ರಾಜ್ಯ ಕಾರ್ಯದರ್ಶಿ ಪಿ.ಎಸ್.ಸಂಧ್ಯಾ ಮತ್ತು ಇತರ ಮುಖಂಡರು ಪ್ರತಿಭಟನೆ ನೇತೃತ್ವವನ್ನು ವಹಿಸಿದ್ದರು.



ಅಕ್ಷರ ದಾಸೋಹ ಕಾರ್ಮಿಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

₹10.27 ಲಕ್ಷ ಕೋಟಿ ಹೂಡಿಕೆಗೆ ಒಡಂಬಡಿಕೆ

ಒಂದನೇ ಪುಟದಿಂದ...

ಕರ್ನಾಟಕದ ಕೈಗಾರಿಕಾ ಇತಿಹಾಸ, ಪರಿಸರ ಸ್ನೇಹಿ ವಾತಾವರಣ, ಸ್ಥಳೀಯ ಪ್ರತಿಭೆ, ಮೂಲಸೌಕರ್ಯ, ಸರ್ಕಾರದ ನೀತಿಗಳು ಹೂಡಿಕೆದಾರರಿಗೆ ಉತ್ತೇಜನ ನೀಡಿವೆ. ಹೊಸ ಕೈಗಾರಿಕಾ ನೀತಿ ಉದ್ಯಮ ಕ್ಷೇತ್ರದ ಹಿತರಕ್ಷಣೆಯ ಭರವಸೆ ಮೂಡಿಸಿದೆ. ಏಕಗವಾಕ್ಷಿ ಯೋಜನೆ ಅನುಷ್ಠಾನದಲ್ಲಿನ ವಿಳಂಬ ತೊಡೆದು ಹಾಕಲು ಸಹಕಾರಿಯಾಗಿದೆ. ಈ ಎಲ್ಲ ಅಂಶಗಳಿಂದಾಗಿ ಈ ಬಾರಿ ನಿರೀಕ್ಷೆಗೂ ಮೀರಿ ಸ್ಪಂದನೆ ದೊರೆತಿದೆ ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ಬೆಂಗಳೂರಿನ ಜನಸಂಖ್ಯೆ 1.40 ಕೋಟಿ ತಲುಪಿದೆ. 1.10 ಕೋಟಿ ವಾಹನಗಳಿವೆ. ಜನಸಂಖ್ಯೆ ಒತ್ತಡ ಕಡಿಮೆ ಮಾಡಲು 'ಬಿಯಾಂಡ್ ಬೆಂಗಳೂರು' ಯೋಜನೆ ರೂಪಿಸಲಾಗಿದೆ. ಬೇರೆ ರಾಜ್ಯಗಳಿಗಿಂತ ಕರ್ನಾಟಕದ ಭೂಮಿಯ ಬೇಡಿಕೆ ಹೆಚ್ಚಿದೆ. ಹಾಗಾಗಿ, ಬೆಂಗಳೂರಿನ ಹೊರಗೆ ಉದ್ಯಮ ಆರಂಭಿಸಲು ಬಹುತೇಕ ಉದ್ಯಮಿಗಳು, ತಂತ್ರಜ್ಞರು ಒಪ್ಪಿದ್ದಾರೆ ಎಂದು ಹೇಳಿದರು.

ನಂಜುಂಡಪ್ಪ ವರದಿ ಆಧಾರದ ಮೇಲೆ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ಧನ, ಕಾರ್ಯಕ್ಷಮತೆ ಆಧಾರದಲ್ಲಿ ಆರ್ಥಿಕ ನೆರವು ನೀಡಲು ಮುಂದಾಗಿದ್ದೇವೆ. ಮಹಿಳಾ ಉದ್ಯಮಿಗಳಿಗೆ, ಹಸಿರು ಇಂಧನಕ್ಕೆ ಶೇ 5ರಷ್ಟು ಪ್ರೋತ್ಸಾಹ ಧನ, ಸಂಶೋಧನೆ ಹಾಗೂ ಅಭಿವೃದ್ಧಿಗೆ ಶೇ 10ರಷ್ಟು ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಹೇಳಿದರು.

'ವೆಂಚುರೈಸ್' ಪ್ರಶಸ್ತಿ ಪುರಸ್ಕೃತರು

ಏರೋಸ್ಪೇಸ್ ಆ್ಯಂಡ್ ಡಿಫೆನ್ಸ್: ನಾಟಿಕಲ್ ವಿಂಗ್ಸ್ ಏರೋಸ್ಪೇಸ್ (ಪ್ರಥಮ), ಸಿರಿನೋರ್ ಟೆಕ್ನಾಲಜೀಸ್ ಇಂಡಿಯಾ (ದ್ವಿತೀಯ), ನಭದ್ರಿಷ್ಟಿ ಏರೋಸ್ಪೇಸ್ (ತೃತೀಯ)

ಎಲೆಕ್ಟ್ರಾನಿಕ್ಸ್ ಸಿಸ್ಟಮ್ಸ್ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್: ಜೆಪ್ಕೊ ಟೆಕ್ನಾಲಜೀಸ್ (ಪ್ರಥಮ), ಮೆಡ್‌ಬ್ಲ್ಯೂ ಇನ್ನೋವೇಷನ್ಸ್ (ದ್ವಿತೀಯ), ವ್ಯೂಹಾ ಮೆಡ್ ಡೇಟಾ (ತೃತೀಯ)

ವಿದ್ಯುತ್‌ಚಾಲಿತ ವಾಹನ ಮತ್ತು ಕ್ಲೀನ್ ಮೊಬಿಲಿಟಿ: ಇನ್ಫಿನಿಟಿಎಕ್ಸ್ ಇನ್ನೋವೇಷನ್ಸ್ (ಪ್ರಥಮ), ಲಿ- ಸರ್ಕಲ್ (ದ್ವಿತೀಯ), ಇ2ಎಸ್‌ವಿಡಿ (ತೃತೀಯ)

ಆ್ಯಪಲ್ ಮೊಬೈಲ್ ತಯಾರಿಕಾ ಕಂಪನಿ 'ಫಾಕ್ಸ್‌ಕಾನ್' ದೊಡ್ಡಬಳ್ಳಾಪುರದ ಬಳಿ ಉತ್ಪಾದನೆ ಆರಂಭಿಸುತ್ತಿದ್ದು, 40 ಸಾವಿರ ಜನರಿಗೆ ಉದ್ಯೋಗ ನೀಡುವ ಭರವಸೆ ನೀಡಿದೆ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಎಂಎಸ್‌ಎಂಇಗಳಿಗಾಗಿ ಆರಂಭಿಸಿರುವ ಹೊಸ ಪೋರ್ಟಲ್ ಉತ್ಪಾದಕರು, ಗ್ರಾಹಕರ ನೇರ ವೇದಿಕೆಯಾಗಿ ಕೆಲಸ ಮಾಡುತ್ತದೆ. ಇಂತಹ ವ್ಯವಸ್ಥೆ ರೂಪಿಸಿದ ಮೊದಲ ರಾಜ್ಯ ಕರ್ನಾಟಕ

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ರಘುನಾಥ ಚ.ಹ., ರೂಪ ಹಾಸನಗೆ ಪ್ರಶಸ್ತಿ

ಬೆಂಗಳೂರು: ಈ ಸಾಲಿನ 'ಪ್ರೊ.ಎಚ್. ಜಿ.ಸಣ್ಣಗುಡ್ಡಯ್ಯ ಪ್ರಶಸ್ತಿಗೆ' ಸುಧಾ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಕವಯತ್ರಿ ರೂಪ ಹಾಸನ ಆಯ್ಕೆಯಾಗಿದ್ದಾರೆ.

'ಲಲಿತ ಪ್ರಬಂಧ ಮತ್ತು ಗದ್ಯ ಸಾಹಿತ್ಯದಲ್ಲಿನ ಕಾರ್ಯವನ್ನು ಗುರುತಿಸಿ ರಘುನಾಥ, ಮತ್ತು ಕಾವ್ಯಕ್ಷೇತ್ರ ಹಾಗೂ ಸಾಮಾಜಿಕ ಕಾರ್ಯದಲ್ಲಿ ತೊಡಗಿರುವ ರೂಪ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಪ್ರೊ.ಎಚ್. ಜಿ.ಸಣ್ಣಗುಡ್ಡಯ್ಯ ಪ್ರತಿಷ್ಠಾನದ ಹೇಳಿಕೆ ತಿಳಿಸಿದೆ.

'ಪ್ರಶಸ್ತಿ ₹10,000 ನಗದು, ಫಲಕ, ಪ್ರಶಸ್ತಿ ಪತ್ರ ಒಳಗೊಂಡಿದೆ. 21ರಂದು ತುಮಕೂರಿನಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ' ಎಂದು ಹೇಳಿಕೆ ತಿಳಿಸಿದೆ.


ರಘುನಾಥ ಚ.ಹ.


ರೂಪ ಹಾಸನ


'ಶೂದ್ರ– ನೆಲದಮಾತು' ಪ್ರಶಸ್ತಿ ಪ್ರಕಟ

ಬೆಂಗಳೂರು: ಶೂದ್ರ ಶ್ರೀನಿವಾಸ್ ನೆಲದ ಮಾತು ಪ್ರತಿಷ್ಠಾನ ನೀಡುವ 'ಕಿ.ರಂ. ನಾಗರಾಜ ಮತ್ತು ಡಾ. ಸಿದ್ಧಲಿಂಗಯ್ಯ ಸಮಗ್ರ ಸಾಹಿತ್ಯ' ಪ್ರಶಸ್ತಿಗೆ ವಿಮರ್ಶಕ ಎಚ್.ಎಸ್. ರಾಘವೇಂದ್ರರಾವ್, 'ಡಾ. ಕೆ. ಮರುಳಸಿದ್ಧಪ್ಪ ರಂಗಭೂಮಿ' ಪ್ರಶಸ್ತಿಗೆ ರಂಗಕರ್ಮಿ ಬಿ. ಜಯಶ್ರೀ ಹಾಗೂ 'ಕೋಟೆ ನಂಜಪ್ಪರೆಡ್ಡಿ ಪ್ರಗತಿ ಪರ ರೈತ' ಪ್ರಶಸ್ತಿಗೆ ಕೋಲಾರ ಜಿಲ್ಲೆಯ ದೊಡ್ಡಅಸಾಳ ಗ್ರಾಮದ ನಾರಾಯಣಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. 'ಡಾ.ಜಿ.ಎಸ್. ಶಿವರುದ್ರಪ್ಪ ಕಾವ್ಯ' ಪ್ರಶಸ್ತಿಗೆ ಚಿದಾನಂದ ಸಾಲಿ ಅವರ 'ಕನ್ನಡಿಯಲ್ಲಿ ಮನುಷ್ಯ ಮಾತ್ರ' (2023) ಕವನ ಸಂಕಲನ ಆಯ್ಕೆಯಾಗಿದ್ದು, ಪ್ರಶಸ್ತಿ ₹15 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಮಾರ್ಚ್ 2ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಎಚ್. ದಂಡಪ್ಪ ತಿಳಿಸಿದ್ದಾರೆ.


ರಾಘವೇಂದ್ರರಾವ್


ಚಿದಾನಂದ ಸಾಲಿ


ಬಿ.ಜಯಶ್ರೀ


ನಾರಾಯಣಪ್ಪ

ಕೋವಿಡ್ ಅಕ್ರಮ: ಸಿಐಡಿಗೆ ತನಿಖೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ವೇಳೆ ಎನ್–95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರೆ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿ ಆದೇಶಿಸಿದೆ.

ಕೋವಿಡ್ ಅಕ್ರಮಕ್ಕೆ ಸಂಬಂಧಿಸಿದಂತೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಡಿಸೆಂಬರ್ 13ರಂದು ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸರ್ಕಾರವು ಈಗ ಸಿಐಡಿಗೆ ವರ್ಗಾವಣೆ ಮಾಡಿದ್ದು, ಸಿಐಡಿ ಎಸ್‌ಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ.

ಎಸ್‌ಪಿ ರಾಘವೇಂದ್ರ ಹೆಗಡೆ ನೇತೃತ್ವದಲ್ಲಿ ಮೂವರು ಡಿವೈಎಸ್‌ಪಿಗಳನ್ನು ಒಳಗೊಂಡ ತನಿಖಾ ತಂಡವನ್ನು ಸಿಐಡಿಯ ಡಿಜಿಪಿ ಎಂ.ಎ.ಸಲೀಂ ರಚಿಸಿದ್ದಾರೆ.

'ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ₹167 ಕೋಟಿ ಅಕ್ರಮ ನಡೆದಿದೆ' ಎಂದು ಆರೋಪಿಸಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ (ಡಿಎಂಇ) ಮುಖ್ಯ ಲೆಕ್ಕಾಧಿಕಾರಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರ ಎಂ.ವಿಷ್ಣು ಪ್ರಸಾದ್ ಅವರು ದೂರು ನೀಡಿದ್ದರು. ದೂರು ಆಧರಿಸಿ, ಡಿಎಂಇಯ ಅಂದಿನ ನಿರ್ದೇಶಕ ಪಿ.ಜಿ.ಗಿರೀಶ್, ಲೆಕ್ಕಪತ್ರ ಇಲಾಖೆ ಜಂಟಿ ನಿಯಂತ್ರಕ ಜಿ.ಪಿ. ರಘು, ಆರೋಗ್ಯ ಸಲಕರಣಾಧಿಕಾರಿ ಮುನಿರಾಜು, ಲಾಜ್ ಎಕ್ಸ್‌ಪೋರ್ಟ್, ಎಂಎಸ್ ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್, ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ವಿಧಾನಸೌಧ ಠಾಣೆಯ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದರು. ಇದುವರೆಗೂ ನಡೆದ ತನಿಖೆಯ ದಾಖಲೆಗಳನ್ನು ಅವರಿಂದ ಪಡೆದುಕೊಂಡು ತನಿಖೆ ಮುಂದುವರೆಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಐಪಿಎಸ್ ಅಧಿಕಾರಿಗಳ ಹಿಂದೇಟು?: ಕೋವಿಡ್ ಅಕ್ರಮದ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ದಳ(ಎಸ್‌ಐಟಿ) ರಚಿಸಲು ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಅದಾದ ಬೆನ್ನಲ್ಲೇ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದಲ್ಲಿ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳ ಹೆಸರು ಪ್ರಸ್ತಾಪವಾಗಿದ್ದ ಕಾರಣಕ್ಕೆ ಎಸ್‌ಐಟಿಯ ಮುಖ್ಯಸ್ಥರಾಗಲು ಹಿರಿಯ ಐಪಿಎಸ್ ಅಧಿಕಾರಿಗಳು ಹಿಂದೇಟು ಹಾಕಿದ್ದರು ಎನ್ನಲಾಗಿದೆ. ಹೀಗಾಗಿ ಎಫ್‌ಐಆರ್ ದಾಖಲಾಗಿ ಎರಡು ತಿಂಗಳ ಬಳಿಕ ಸರ್ಕಾರ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಿದೆ. ಸಿಐಡಿಯಲ್ಲಿ ಪ್ರಸ್ತುತ ಕೆಲಸ ಮಾಡುತ್ತಿರುವ ಅಧಿಕಾರಿಗಳೇ ತನಿಖೆ ಆರಂಭಿಸಿದ್ದಾರೆ ಎಂದು ಗೊತ್ತಾಗಿದೆ.

'₹5 ಕೋಟಿಗಿಂತ ಹೆಚ್ಚಿನ ಮೊತ್ತದ ಅಕ್ರಮ ನಡೆದಿದ್ದರೆ ಅದರ ತನಿಖೆಯನ್ನು ಸಿಐಡಿ ನಡೆಸುತ್ತದೆ. ಅದೇ ಮಾದರಿಯಲ್ಲಿ ಈ ಪ್ರಕರಣದ ತನಿಖೆಯನ್ನೂ ನಡೆಸಲಾಗುವುದು. ಕೆಲವು ಅಧಿಕಾರಿಗಳ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.' ಎಂದು ಮೂಲಗಳು ಹೇಳಿವೆ.

ಡಿಕೆಶಿ ವಿರುದ್ಧ ತಂತ್ರ

ಒಂದನೇ ಪುಟದಿಂದ...

ಪಕ್ಷದ ವೇದಿಕೆಯಲ್ಲೇ ಸಮಾವೇಶ ನಡೆಸುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಹಣಿಯಲು ತಂತ್ರ ಹೆಣೆದಿದ್ದಾರೆ.

ಮುಂದಿನ ವಾರ ನವದೆಹಲಿಗೆ ಬರಲಿರುವ ದಲಿತ ಸಚಿವರ ಕೂಟದ 'ಸಂಚಾಲಕ'ರೂ ಆಗಿರುವ ಗೃಹ ಸಚಿವ ಜಿ.ಪರಮೇಶ್ವರ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.

'ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಒಂದು ವೇಳೆ ಅವರು ಅಧಿಕಾರ ಹಸ್ತಾಂತರಿಸುವ ಪ್ರಮೇಯ ಎದುರಾದರೆ ಅವರ ಸ್ಥಾನಕ್ಕೆ ದಲಿತ ನಾಯಕರನ್ನು ಪರಿಗಣಿಸಬೇಕು' ಎಂದು ಸಚಿವರು ಹೈಕಮಾಂಡ್ ಮುಂದೆ ವಾದಿಸಿದ್ದಾರೆ.

ಲೋಕಸಭೆ ಚುನಾವಣೆಯವರೆಗೆ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಪಕ್ಷದ ವರಿಷ್ಠರು ಹೇಳಿದ್ದರು. ಅದನ್ನು ಹೈಕಮಾಂಡ್‌ನ ಗಮನಕ್ಕೆ ತಂದಿರುವ ಸಚಿವರು, 'ಹಲವು ರಾಜ್ಯಗಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಪ್ರಕ್ರಿಯೆ ಆರಂಭವಾಗಿದೆ. ಅದೇ ಸಂದರ್ಭದಲ್ಲಿ, ಕೆಪಿಸಿಸಿ ಅಧ್ಯಕ್ಷರನ್ನೂ ಬದಲಿಸಬೇಕು. ಆ ಸ್ಥಾನವನ್ನು ದಲಿತ ನಾಯಕರಿಗೆ ನೀಡಬೇಕು' ಎಂದು ಪಟ್ಟು ಹಾಕಿದ್ದಾರೆ. ಜಿಲ್ಲಾ–ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿ ಚುನಾವಣೆ ತನಕ ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಬೇಕು ಎಂಬುದು ಡಿ.ಕೆ. ಶಿವಕುಮಾರ್ ಅವರ ಅಭಿಲಾಷೆ. ಈ ಚುನಾವಣೆಗಳಲ್ಲಿ ಪಕ್ಷಕ್ಕೆ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಂಡು ಬಂದು ಸಹೋದರ ಡಿ.ಕೆ. ಸುರೇಶ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬುದು ಅವರ ಆಲೋಚನೆ.

ಇದರ ಸುಳಿವು ಪಡೆದಿರುವ ಸಿದ್ದರಾಮಯ್ಯ ಬೆಂಬಲಿಗ ಸಚಿವರು, ಶಿವಕುಮಾರ್ ಅವರನ್ನು ಈಗಲೇ ಕೆಳಗಿಸಲು ತೀವ್ರ ಪ್ರಯತ್ನ ಆರಂಭಿಸಿದ್ದಾರೆ.ಸಚಿವ ಸತೀಶ ಜಾರಕಿಹೊಳಿ ಅಥವಾ ಕೆ.ಎನ್.ರಾಜಣ್ಣ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಬೇಡಿಕೆ ಮುಂದಿಟ್ಟಿದ್ದಾರೆ. ಸಚಿವ ಸ್ಥಾನ ತ್ಯಜಿಸಿದರೆ ಬೆಳಗಾವಿ ಹಿಡಿತ ಕೈತಪ್ಪಲಿದೆ ಹಾಗೂ 2028ರಲ್ಲಿ ಮುಖ್ಯಮಂತ್ರಿಯಾಗುವ ಕನಸು ಕಮರಲಿದೆ ಎಂಬ ಆತಂಕದಲ್ಲಿರವ ಸತೀಶ ಅವರು, ಸಚಿವ ಸ್ಥಾನದ ಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಸಿದ್ಧರಾಗಿದ್ದಾರೆ. 'ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ ಸಚಿವ ಸ್ಥಾನ ತ್ಯಜಿಸುತ್ತೇನೆ' ಎಂದು ರಾಜಣ್ಣ ಈಗಾಗಲೇ ಹೇಳಿಕೆ ನೀಡಿದ್ದಾರೆ.

ಹೊಸ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಕುಸಿತ: ಡಿಕೆಶಿ

ಬೆಂಗಳೂರು: 'ಮಂಡ್ಯ, ಚಾಮರಾಜನಗರ ಭಾಗದ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾಲಯಕ್ಕೆ ಆದ್ಯತೆ ನೀಡುತ್ತಿರುವ ಕಾರಣ ಹೊಸ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿ ಕುಸಿತವಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ತೀರ್ಮಾನ ಕುರಿತು ಸುದ್ದಿಗಾರರು ಪ್ರಶ್ನಿಸಿದಾಗ, ರಾಜ್ಯ, ವಿಶ್ವವಿದ್ಯಾಲಯ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

'ಪ್ರಾಧ್ಯಾಪಕರು ಮಂಡ್ಯ, ಚಾಮರಾಜನಗರಕ್ಕೆ ಹೋಗಲು ತಯಾರಿಲ್ಲ. ಅವರು ಹಿರಿತನ ಹಾಗೂ ಪಿಂಚಣಿ ವ್ಯವಸ್ಥೆ ಗಮನದಲ್ಲಿಟ್ಟುಕೊಂಡು ಹಿಂಜರಿಯುತ್ತಿದ್ದಾರೆ. ಈ ವಿಚಾರವಾಗಿ ಬಂದಿರುವ ಸಲಹೆಗಳನ್ನು ಮುಂದಿನ ಸಭೆಗಳಲ್ಲಿ ಚರ್ಚಿಸುತ್ತೇವೆ' ಎಂದರು.

ಹಿಂದೆ ಕಾನೂನಿನಲ್ಲಿ ಪ್ರತಿ ವಿಶ್ವವಿದ್ಯಾಲಯಕ್ಕೆ ಕೇವಲ ₹2 ಕೋಟಿ ಮೀಸಲಿಟ್ಟಿದ್ದರು. ಆದರೆ, ಯಾವುದೇ ಜಮೀನು ನೀಡಿರಲಿಲ್ಲ ಎಂದು ತಿಳಿಸಿದರು.

ಅಗತ್ಯಬಿದ್ದರೆ ವಿಶ್ವವಿದ್ಯಾಲಯಗಳನ್ನು ಮುಚ್ಚಿಸುತ್ತೀರಾ ಎಂಬ ಪ್ರಶ್ನೆಗೆ 'ನಿಮ್ಮ ಮಾತಿಗೆ ಕುಣಿಯಲು ಆಗುವುದಿಲ್ಲ. ನಿಮ್ಮ ಪ್ರಯತ್ನದಿಂದ ನನ್ನ ಬಾಯಲ್ಲಿ ಕೆಲವು ವಿಚಾರ ಬರುವುದಿಲ್ಲ. ಬೇರೆಯವರನ್ನು ನಿಭಾಯಿಸುವಂತೆ ನನ್ನನ್ನು ನಿಭಾಯಿಸಲು ಪ್ರಯತ್ನಿಸಬೇಡಿ' ಎಂದು ಪ್ರತಿಕ್ರಿಯಿಸಿದರು.

ವಿಶ್ವವಿದ್ಯಾನಿಲಯಗಳ ಕಾರ್ಯವೈಖರಿ ಹಾಗೂ ಆರ್ಥಿಕ ಸ್ಥಿತಿಗಳ ಅಧ್ಯಯನ ಕುರಿತ ಡಿ.ಸಿಎಂ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿಯ ಮೊದಲ ಸಭೆ ಗುರುವಾರ ನಡೆಯಿತು.

ಸೇವಾಲಾಲ್ ಎನ್ನುವ ಸಂತನ ನೆನಪಲ್ಲಿ...

• ಪ್ರೊ.ಶಿರಗಾನಹಳ್ಳಿ ಶಾಂತನಾಯ್ಕ್

ಒಂದು ಸಂಘರ್ಷದ ಕಾಲಘಟ್ಟದಲ್ಲಿ ಹುಟ್ಟಿದ ಸೇವಾಲಾಲ್ ಶಿರಸಿಯ ಮಾರಿಕಾಂಬ ದೇವಿಯ ಕೃಪಾಕಟಾಕ್ಷಕ್ಕೆ ಒಳಗಾಗಿ ಸಂತನಾದ. ಆತ ಹುಟ್ಟಿದ್ದು ರಾಮವತ್ ಎನ್ನುವ ಬುಕ್ಯಾ ಬೆಡಗದಲ್ಲಿ. ಬಾಲ್ಯದಿಂದಲೂ ಸಂತ ಪರಂಪರೆಯ ಕಡೆಗೆ ಒಲವನ್ನು ಹೊಂದಿದ ಸೇವಾ, ತನ್ನ ಪವಾಡಗಳಿಂದ ಸೇವಾ ಭಾಯ (ಅಣ್ಣ) ನಾದ. ಹೆಂಗಸರು, ಗಂಡಸರು ಭಾಯ ಎನ್ನುವುದರಿಂದಾಗಿ ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿದು ಬಿಟ್ಟ. ಅವರು 1739ರ ಫೆಬ್ರುವರಿ 15ರಂದು ಸುರಗೊಂಡನ ಕೊಪ್ಪದಲ್ಲಿ ಜನಿಸಿದರು ಎಂದು ಹೇಳಲಾಗುತ್ತಿದೆ. ಆದರೆ ಇದಕ್ಕೆ ಐತಿಹಾಸಿಕವಾಗಿ ಬಂಜಾರ ಚಿಂತಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಹೀಗೆ ಒಂದು ಜನ ಸಮುದಾಯದ ಸಾಂಸ್ಕೃತಿಕ ನಾಯಕ ಇಂದಿನ ತಂತ್ರಜ್ಞಾನದ ಯುಗದಲ್ಲಿಯೂ ಕೂಡ ಎಷ್ಟೊಂದು ಪ್ರಸ್ತುತರಾಗಿದ್ದಾರೆ ಎಂಬುದು ಮುಖ್ಯವಾಗುತ್ತದೆ.

ಅಲೆಮಾರಿ ಜನ ಸಮುದಾಯ ಬಂಜಾರ, ಲಂಬಾಣಿ, ಲಮಾಣಿ, ಸುಗಾಲಿ, ಸುಕಾಲಿ ಗೋರ್, ಢಾಡಿ, ಢಾಲ್ಯ, ಸೋನಾರ್, ಲೋಹಾರ್, ಕಾಂಗ್ಸಿಬಜಾರ, ಬಾಜೀಗರ್ ಬಂಜಾರ ಮುಂತಾದ ಅನೇಕ ಉಪನಾಮಗಳಿಂದ ಗುರುತಿಸಲ್ಪಡುವ ಬಂಜಾರರು ಮೂಲತಃ ದಿನಸಿ ಮತ್ತು ಲವಣದ ವ್ಯಾಪಾರಿಗಳಾಗಿದ್ದರು. ಆಂಗ್ಲರು ಇವರು ಲದೇಣಿಯದ (ಎತ್ತುಗಳ ಮೇಲೆ ಹೇರು) ಮೂಲಕ ವ್ಯಾಪಾರ ಮಾಡುತ್ತಿದ್ದ ಕಾರಣ ಇವರನ್ನು 'ಕ್ಯಾರವನ್ಸ್' ಅಂದರೆ ಸಾಗಿಸುವ ಸಮುದಾಯ ಎಂದರು. ರಾಜನ ಸೈನ್ಯಕ್ಕೆ ಬೇಕಾದ ನೆರವು ನೀಡಲು ಎತ್ತುಗಳ ಮೇಲೆ ಸಾಮಗ್ರಿಗಳನ್ನು ಹೇರಿಕೊಂಡು ಎಂಥ ದುರ್ಗಮ ಹಾದಿಯೇ ಇದ್ದರೂ ಪಾರಾಗಿ ಬರುವ ಚಾಣಾಕ್ಷರು ಆಸೀಫ್ ಅಲಿ ಖಾನ್‌ನ ಹಿಂದೆ ಬಂದ ಜಂಗಿ - ಬಂಗಿ ಸಹೋದರರ ಬಳಿ, ಲಕ್ಷ ಎತ್ತುಗಳಿದ್ದವು ಎಂದು ದಾಖಲಾಗಿದೆ.

ಪ್ರತಿ ಎರಡು ಮೂರು ವರ್ಷಗಳಿಗೆ ಒಮ್ಮೆ ಗೋಧಿ ಸಸಿಯನ್ನು ಬೆಳೆದು ತೀಜ್ ಹಬ್ಬವೆಂದೆ ಪ್ರಸ್ತುತಗೊಂಡಿರುವ (ಮನೆಮನೆ ಪೂಜೆ) ಘರೆ ಫರೇರ್ ಹಬ್ಬ ಆಚರಿಸಿದಾಗ ಕನಿಷ್ಠ ಒಂದೆರಡು ಕುರಿಗಳನ್ನು ಪ್ರತಿಯೊಬ್ಬ ಬಂಜಾರ ಕುಟುಂಬ ಮರಿಯಮ್ಮಗೆ ಬಲಿಕೊಟ್ಟು ಬೀಗರಿಗೆ ಉಣಿಸುವುದು ವಾಡಿಕೆ. ಈ ಹಬ್ಬ ಬಂತೆಂದರೆ ಸುತ್ತಲ ಹಳ್ಳಿಗಳ ಪ್ರಬಲ ವರ್ಗದವರಿಗೆ ಭಲೇ ಖುಷಿ. ಕಾರಣ 'ಲಮಾಣಿಗರು ದುಡಿಯುವುದು ಹೆಂಡಕ್ಕ ಕಂಡಕ್ಕೆ' ಅಂತ ನಾಣ್ಣುಡಿಯೇ ಇದೆ. ಹೀಗಾಗಿ ಸಾಲ ಕೊಡುವ ನೆಪದಲ್ಲಿ ಮಾಂಸದ ರುಚಿಯನ್ನು ಕಂಡುಬಿಡುತ್ತಾರೆ. ಆದರೆ ಸೇವಾಭಾಯ ಇಂತ ಮೂಢ ಕಂದಾಚಾರಣೆಗಳನ್ನು ಮಾಡಬಾರದು ಎಂದು ಹೇಳಿದ್ದಾನೆ. ಆದರೂ ಹೇಗೆ ಈ ರೀತಿಯ ಬದುಕಿಗೆ ಬಲಿಯಾಗಿದ್ದಾರೊ ಗೊತ್ತಿಲ್ಲ.

ಇವತ್ತು ಕೂಡ ನಗಾರಿ (ವಾಜು) ಕಂಚಿನ ತಟ್ಟೆ ಇದ್ದರೆ ಮುಗಿಯಿತು ಸೇವಾಭಾಯನ ಪ್ರಾರ್ಥನೆಗೆ. ಇವತ್ತಿಗೂ ಕರ್ನಾಟಕ, ಆಂಧ್ರ ಪದೇಶ, ತಮಿಳುನಾಡಿನ ಕೆಲವು ಹಾಗೂ ಮಹಾರಾಷ್ಟ್ರದ ಪ್ರತಿ ತಾಂಡದಲ್ಲಿ ಸೇವಾಭಾಯನ ನೆನೆಯದ ದಿನಗಳಿಲ್ಲ. ಆತನ ಹೆಸರಿಲ್ಲದ ಪ್ರಾರ್ಥನೆಗಳಿಲ್ಲ. ಪ್ರತಿತಾಂಡಗಳಲ್ಲಿ ಸೇವಾಭಾಯನ ನೆನೆಯದ ದಿನಗಳಲ್ಲಿ ಆತನಿಲ್ಲದ ಪ್ರಾರ್ಥನೆಗಳಲ್ಲಿ ಆತನ ವಾಣಿಯನ್ನ ಚಾಚುತಪ್ಪದೆ ಪಾಲಿಸಿದವರು ಒಳ್ಳೆಯ ಬದುಕನ್ನು ಬದುಕಿದ್ದಾರೆ.

ಮನುಷ್ಯನಾಗಿ ಜನಿಸಿ, ಒಂದು ಜನಾಂಗದ ಏಳಿಗೆಗೆ ಶ್ರಮಿಸಿದ ಮಹಾನ್ ವ್ಯಕ್ತಿ, ಯಾವಾಗ ಒಬ್ಬ ವ್ಯಕ್ತಿಯನ್ನು ದೇವರು ಎಂದು ತಿಳಿದು ಆತನಿಗೆ ಗುಡಿಕಟ್ಟಿ ಪೂಜೆ ಮಾಡುತ್ತಾರೊ, ಅಂದು ಆತನ ಸಿದ್ಧಾಂತಗಳು, ವಿಚಾರಗಳು ಸತ್ತು ಹೋಗುತ್ತವೆ. ಈ ಜನ ಸಮುದಾಯದಲ್ಲೂ ಆದದ್ದು ಹಾಗೆ, ಜನರನ್ನು ಮೌಢ್ಯದಲ್ಲಿಟ್ಟು, ಕುರಿ ಬಲಿ, ಹಬ್ಬ ಮುಂತಾದ ಆಚರಣೆಗಳ ಹೆಸರಲ್ಲಿ ಆರ್ಥಿಕವಾಗಿ ಸಬಲಗೊಳ್ಳದಂತೆ ನೋಡಿಕೊಳ್ಳುವ ಜನರಿಂದ ಎಚ್ಚರಿಕೆಯಿಂದ ಇರಬೇಕಾಗಿದೆ.

ಸಮಾಜದಿಂದ ದೂರ, ವಿದ್ಯೆಯಿಂದ ವಂಚಿತರಾಗಿ ಕಾಡುಗಳಲ್ಲಿ ತಾಂಡ ಕಟ್ಟಿಕೊಂಡಿರುವ ಬಂಜಾರರು ಜಾಗರೂಕರಾಗಬೇಕಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹೇಳಿದಂತೆ ವಿದ್ಯೆ, ಸಂಘಟನೆ ಮತ್ತು ಹೋರಾಟದ ಹಾದಿಯನ್ನು ಹಿಡಿಯಬೇಕಾಗಿದೆ. ಇತ್ತೀಚೆಗೆ ಒಳಗೊಳ್ಳುವ ಗುಣವನ್ನು ರೂಢಿಸಿಕೊಂಡು ತಲೆ ಎತ್ತಿ ನಿಲ್ಲುವ ಸಾಹಸ ಮಾಡಿರುವ ಬಂಜಾರರಿಗೆ ಹದಿನೆಂಟನೇ ಶತಮಾನದ ಆದಿಯಲ್ಲಿ ಬದುಕಿದ್ದ ಸಂತ ಸೇವಲಾಲ್ ಆವಾಗಲೇ ಈ ಮಾತನ್ನು ಹೇಳಿದ್ದರು. ತಲೆ ಎತ್ತಿ ನಿಲ್ಲಿ ಎಂದು ಸೇವಾಲಾಲ್ ಅವರ ಈ ಪ್ರಾರ್ಥನೆ 'ಕೀಡಿ ಮೂಂಗಿನ ಸಾಯವೇಙ, ಜೀವ ಜನಗಾನಿನ ಸಾಯಿವೇಙ, ಪೀಸಾನ ಸವಾಪೀಸಕರಙ' (ಇರುವೆ ಅರವತ್ತು ಕೋಟಿ ಜೀವಿಗಳಿಗೆ ಒಳಿತಾಗಬೇಕು ಕಾಸಿಗೆ ಕಾಲುಭಾಗದಷ್ಟು ಹೆಚ್ಚು ಮಾಡಬೇಕು) ಎನ್ನುವುದು ಇವತ್ತಿಗೂ ಕೂಡ ಆಚರಣೆಯಲ್ಲಿದೆ. ವ್ಯಾಪಾರದಲ್ಲಿ ಬರುವ ಎಲ್ಲ ಲಾಭ ನಮಗೆ ಬರಬೇಕೆಂದು ಹೇಳಿಕೊಡಲಿಲ್ಲ. ಇಂತಹ ಉದಾತ್ತತೆಯನ್ನು ಹೇಳಿಕೊಟ್ಟ ಸೇವಾಲಾಲ್ ಇವತ್ತಿಗೂ ಪ್ರಸ್ತುತರಾಗಿದ್ದಾರೆ ಮತ್ತು ಬಂಜಾರ ಸಮುದಾಯದ ಸಮಸ್ತ ಜನ ಮಾನಸದಲ್ಲಿ ನೆಲೆನಿಂತಿದ್ದಾರೆ.

ಲೇಖಕ: ಪ್ರಾಧ್ಯಾಪಕ, ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ



ನರೇಂದ್ರಸ್ವಾಮಿ ನೇಮಕ ಪ್ರಶ್ನಿಸಿ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ನೂತನ ಅಧ್ಯಕ್ಷರಾಗಿರುವ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಅವರ ನೇಮಕಾತಿ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ಚಿಕ್ಕಬಳ್ಳಾಪುರದ 'ಶಾಶ್ವತ ನೀರಾವರಿ ಹೋರಾಟ ಸಮಿತಿ' ಅಧ್ಯಕ್ಷ ಆರ್.ಆಂಜನೇಯ ರೆಡ್ಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರು ಮತ್ತು ಕೆಎಸ್‌ಪಿಸಿಬಿ ಪರ ವಕೀಲರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ; ಕೇಂದ್ರ, ರಾಜ್ಯ ಸರ್ಕಾರ, ರಾಜ್ಯ ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಕೆಎಸ್ ಪಿಸಿಬಿ ಸದಸ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ವಕ್ಫ್ ಮಂಡಳಿ ಸದಸ್ಯತ್ವ: ಆಕ್ಷೇಪಣೆಗೆ ಗಡುವು

ಹೈಕೋರ್ಟ್ ಸುದ್ದಿ

ಬೆಂಗಳೂರು: 'ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಮತ್ತು ಶಾಸಕಿ ಕನೀಜ್ ಫಾತಿಮಾ ಸೇರಿದಂತೆ ಐವರ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸದಸ್ಯತ್ವ ರದ್ದುಪಡಿಸಬೇಕು' ಎಂದು ಕೋರಲಾದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರ ಹಾಗೂ ಪ್ರತಿವಾದಿ ವಕ್ಫ್ ಮಂಡಳಿಗೆ ಸದಸ್ಯರಿಗೆ ಹೈಕೋರ್ಟ್, ಎರಡು ವಾರಗಳ ಕಾಲಾವಕಾಶ ನೀಡಿದೆ. ಈ ಸಂಬಂಧ ಯಾದಗಿರಿ ಜಿಲ್ಲೆ ವಡಗೇರಾ ನಿವಾಸಿ ಸೈಯದ್ ಖುಸ್ರೊ ವಲೀವಲ್ಲಾಹ್ ಹುಸೇನಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಗಾಣಿಗರ ಪೀಠಕ್ಕೆ ಅನುದಾನ: ನೋಟಿಸ್

ಬೆಂಗಳೂರು: 'ವಿಶ್ವ ಗಾಣಿಗ ಸಮುದಾಯ ಚಾರಿಟಬಲ್ ಟ್ರಸ್ಟ್‌ಗೆ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದ್ದ ₹3.50 ಕೋಟಿ ಅನುದಾನದಲ್ಲಿ ₹1.50 ಕೋಟಿ ಬಾಕಿ ಇದ್ದು, ಈ ಮೊತ್ತವನ್ನು ಬಿಡುಗಡೆ ಮಾಡುವಂತೆ ಆದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.ಈ ಸಂಬಂಧ ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ವ್ಯವಸ್ಥಾಪಕ ಟ್ರಸ್ಟಿ ಪೂರ್ಣಾನಂದಪುರಿ ಮಹಾಸ್ವಾಮೀಜಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಇದೇ 21ಕ್ಕೆ ವಿಚಾರಣೆ ಮುಂದೂಡಲಾಗಿದೆ.

ವಸತಿ ಶಾಲೆ, ನಿಲಯಗಳಲ್ಲಿನ ಊಟದ ಗುಣಮಟ್ಟ ಪರಿಶೋಧನೆ: ರಾಜ್ಯದಾದ್ಯಂತ ವಿಸ್ತರಣೆ

ಆಹಾರ ಗುಣಮಟ್ಟ ಖಾತ್ರಿಗೆ ಆದ್ಯತೆ

• ಹರಿಶಂಕರ್ ಆರ್.

ಬಳ್ಳಾರಿ: ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆ, ಕಾಲೇಜು ಮತ್ತು ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರದ ಗುಣಮಟ್ಟ ಕಾಯ್ದುಕೊಳ್ಳಲು ಜಾರಿಗೆ ತರಲಾದ 'ಆಹಾರ ಪಾರದರ್ಶಕತೆ ಮತ್ತು ಸಾಮಾಜಿಕ ಪರಿಶೋಧನೆ'ಯನ್ನು ರಾಜ್ಯದಾದ್ಯಂತ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಚಾಮರಾಜನಗರ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಇದು ಜಾರಿ ಆಗಿತ್ತು. ಜನವರಿಯಲ್ಲಿ ಬೆಂಗಳೂರು ನಗರ, ಉಡುಪಿ, ಮೈಸೂರು, ಬಾಗಲಕೋಟೆ, ಕೋಲಾರ, ಬೆಳಗಾವಿ, ತುಮಕೂರು ಜಿಲ್ಲೆಗಳಿಗೆ ವಿಸ್ತರಣೆಗೊಂಡಿತು. ಸದ್ಯ ಫೆ. 6ರಂದು ಹೊಸ ಆದೇಶ ಹೊರಡಿಸಿರುವ ಸಮಾಜ ಕಲ್ಯಾಣ ಇಲಾಖೆ ಉಳಿದ 21 ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸುತ್ತಿದೆ.

ಏನಿದು ಕಾರ್ಯಕ್ರಮ: ಸಮಾಜ ಕಲ್ಯಾಣ ಇಲಾಖೆಯ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಬರುವ ವಸತಿ ಶಾಲೆ, ನಿಲಯಗಳ ವಿದ್ಯಾರ್ಥಿಗಳಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ, ರಾತ್ರಿ ಊಟಕ್ಕೆ ಏನನ್ನು ಕೊಡಲಾಗುತ್ತಿದೆ ಎಂಬುದರ ಬಗ್ಗೆ ಚಿತ್ರ ತೆಗೆದು, ಅದನ್ನು ಸಾಮಾಜಿಕ ಮಾಧ್ಯಮ 'ಎಕ್ಸ್' (ಟ್ವಿಟರ್)ನಲ್ಲಿ ಶಿಕ್ಷಕರು, ವಾರ್ಡನ್‌ಗಳು ಪ್ರಕಟಿಸಬೇಕು.

ಪೋಸ್ಟ್ ಪರಿಶೀಲಿಸುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಮೆನು, ಶುಚಿತ್ವ, ಗುಣಮಟ್ಟ ಪರಿಶೀಲಿಸಿ ಜಿಲ್ಲೆಗಳಿಗೆ ರ‍್ಯಾಂಕಿಂಗ್ ಕೊಡುತ್ತಾರೆ. ಮಾರ್ಪಾಡುಗಳನ್ನು ಸೂಚಿಸುತ್ತಾರೆ. ಕರ್ತವ್ಯ ಲೋಪವಾದರೆ ಕ್ರಮ ಕೈಗೊಳ್ಳುತ್ತಾರೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಳ್ಳುವುದರಿಂದ ನಾಗರಿಕರ ಪ್ರತಿಕ್ರಿಯಿಸುತ್ತಾರೆ. ಅವುಗಳನ್ನೂ ಇಲಾಖೆ ಪರಿಗಣಿಸುತ್ತದೆ.

ಕಾರ್ಯಕ್ರಮದ ಬಗ್ಗೆ ನಾಗರಿಕರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. 'ನಮ್ಮ ಜಿಲ್ಲೆಯಲ್ಲಿ ಯಾವಾಗ ಈ ಕಾರ್ಯಕ್ರಮ ಜಾರಿ ಆಗಲಿದೆ' ಎಂದು ಟ್ವಿಟರ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಕೇಳಿದ್ದಾರೆ. ಅವರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್, ಉಳಿದ 21 ಜಿಲ್ಲೆಗಳಿಗೆ ವಿಸ್ತರಿಸುತ್ತಿರುವ ಬಗ್ಗೆ ತಿಳಿಸಿದ್ದಾರೆ.



ಬಳ್ಳಾರಿಯ ಡಾ.ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದಲ್ಲಿ ನೀಡಲಾದ ಊಟ ಮತ್ತು ಭೋಜನಶಾಲೆಯ ವ್ಯವಸ್ಥೆಯ ಕುರಿತು ತೆಗೆಯಲಾದ ಚಿತ್ರ



ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿ, ಅನುಮಾನ ನಿವಾರಿಸುವ, ಅಭಿಪ್ರಾಯ ಸಂಗ್ರಹಿಸುವ ಕಾರ್ಯಕ್ರಮವಿದು

ಮಲ್ಲಿಕಾರ್ಜುನ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ, ಬಳ್ಳಾರಿ



ಮಕ್ಕಳ ಆಹಾರ ವಿಷಯದಲ್ಲಿ ಸಾರ್ವಜನಿಕ ಹೊಣೆಗಾರಿಕೆ ಮುಖ್ಯ. ಸದ್ಯ 9600 ಚಿತ್ರಗಳು ಟ್ವಿಟರ್‌ಗೆ ಅಪ್ಲೋಡ್ ಆಗುತ್ತಿವೆ. ಮುಂದೆ 36000 ಚಿತ್ರ ಅಪ್ಲೋಡ್ ಆಗಲಿವೆ

ಮಣಿವಣ್ಣನ್, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ

'ದೇಶದಲ್ಲೇ ಮೊದಲ ಪ್ರಯತ್ನ'

'ನನ್ನ ಅವಧಿಗೆ ಬಂದಂತೆ, ಇದು ದೇಶದಲ್ಲಿಯೇ ಮೊದಲ ಪ್ರಯತ್ನ. ತಂತ್ರಜ್ಞಾನ ಬಳಸಿಕೊಂಡು ನಡೆಸುವ ಸಾಮಾಜಿಕ ಲೆಕ್ಕಪರಿಶೋಧನೆ. ಮೆನುವಿನ ಪ್ರಕಾರ ಆಹಾರ ಸಿಗುತ್ತಿದೆಯೇ, ಗುಣಮಟ್ಟ ಇದೆಯೇ, ವಾರ್ಡನ್‌ಗಳು ಸ್ಥಳದಲ್ಲಿ ಇದ್ದಾರೆಯೇ ಎಂಬುದನ್ನು ಇದು ಖಾತರಿಪಡಿಸುತ್ತದೆ' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದಲ್ಲಿ 1,215 ಮೆಟ್ರಿಕ್ ಪೂರ್ವ ವಸತಿ ನಿಲಯಗಳಿದ್ದು, 1,01,475 ವಿದ್ಯಾರ್ಥಿಗಳಿದ್ದಾರೆ. 713 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ 1,18,699 ವಿದ್ಯಾರ್ಥಿಗಳಿದ್ದಾರೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಅಧೀನದಲ್ಲಿ ಒಟ್ಟು 821 ವಸತಿ ಶಾಲೆ, ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ಸದ್ಯ 2,00,710 ವಿದ್ಯಾರ್ಥಿಗಳಿದ್ದಾರೆ.

ಅಂಬೇಡ್ಕರ್ ಪ್ರತಿಮೆ ಎದುರು ವಿವಾಹ

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ಇಲ್ಲಿನ ಅಂಬೇಡ್ಕರ್ ಪ್ರತಿಮೆ ಎದುರು ಪ್ರೇಮಿಗಳ ದಿನದಂದು ಪ್ರೇಮಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ತಾಲ್ಲೂಕಿನ ಯಗಟಿ ಗ್ರಾಮದ ಕುಮಾರ್ (25) ಮತ್ತು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಪುರ್ಲೆಹಳ್ಳಿಯ ಸುಚಿತ್ರಾ (20) ಅಂತರ್ಜಾತಿ ವಿವಾಹವಾದರು. ಕುಮಾರ್ ಅವರು ಎಂಟನೇ ತರಗತಿಗೆ ಓದು ನಿಲ್ಲಿಸಿದ್ದರೆ, ಸುಚಿತ್ರಾ ದ್ವಿತೀಯ ಪಿಯುಸಿ ಓದಿದ್ದಾರೆ. ಎರಡು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು.

'ನಾನು ಮಾದಿಗ ಸಮುದಾಯಕ್ಕೆ ಸೇರಿದ್ದರೆ, ಸುಚಿತ್ರಾ ಲಂಬಾಣಿ ಸಮುದಾಯದವರು. ನಮ್ಮ ಮನೆಯಲ್ಲಿ ಎಲ್ಲರೂ ಒಪ್ಪಿದ್ದರು. ಸುಚಿತ್ರಾ ಮನೆಯಲ್ಲಿ ತಾಯಿ ಹೊರತುಪಡಿಸಿ ಉಳಿದವರು ಒಪ್ಪಿರಲಿಲ್ಲ. ಆದ್ದರಿಂದ ಪ್ರೇಮಿಗಳ ದಿನದಂದು ಅದರಲ್ಲೂ ಅಂಬೇಡ್ಕರ್ ಪ್ರತಿಮೆ ಬಳಿಯೇ ಮದುವೆಯಾಗಬೇಕು ಎಂಬ ಆಸೆ ಇತ್ತು' ಎಂದು ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಜೆಪಿ ಮಂಡಲ ಉಪಾಧ್ಯಕ್ಷ ಜಿಗಣೇಹಳ್ಳಿ ನೀಲಕಂಠಪ್ಪ, ತಾಲ್ಲೂಕು ಮಾದಿಗ ಸಮಾಜದ ಗೌರವಾಧ್ಯಕ್ಷ ಕೆ.ವೈ.ವಾಸು, ಅಧ್ಯಕ್ಷ ಜಗದೀಶ್, ಪ್ರಧಾನ ಕಾರ್ಯದರ್ಶಿ ಗಂಗರಾಜು, ಸಗನಪ್ಪ, ನಾರಾಯಣಸ್ವಾಮಿ, ತಿಮ್ಮಯ್ಯ ಈ ಪ್ರೇಮ ವಿವಾಹಕ್ಕೆ ಸಾಕ್ಷಿಯಾದರು.



ಕಡೂರಿನ ಅಂಬೇಡ್ಕರ್ ಪ್ರತಿಮೆ ಎದುರು ವೈವಾಹಿಕ ಜೀವನಕ್ಕೆ ಕಾಲಿಟ್ಟ ಪ್ರೇಮಿಗಳಾದ ಸುಚಿತ್ರಾ ಮತ್ತು ಕುಮಾರ್

ಬಾಗಪ್ಪ ಹರಿಜನ ಹತ್ಯೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಭೀಮಾ ತೀರದ ಹಂತಕ ಬಾಗಪ್ಪ ಹರಿಜನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಇಂಡಿ ತಾಲ್ಲೂಕಿನ ಅಗರಖೇಡದ ಪ್ರಕಾಶ ಅಲಿಯಾಸ್ ಪಿಂಟು ಮೇಲಿನಕೇರಿ(26), ಹೊರ್ತಿಯ ರಾಹುಲ ತಳಕೇರಿ(20), ಅಗರಖೇಡದ ಸುದೀಪ ಕಾಂಬಳೆ (20) ಮತ್ತು ಬೆಳಗಾವಿ ಜಿಲ್ಲೆ ಬೈಲಹೊಂಗಲದ ಮಣಿಕಂಠ ಅಲಿಯಾಸ್‌ಗದಿಗೆಪ್ಪ ಬೆನಕೊಪ್ಪ (27) ಬಂಧಿತರು. ಶಸ್ತ್ರಗಳನ್ನು ಮತ್ತು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವಿಜಯಪುರದಲ್ಲಿ 6 ತಿಂಗಳ ಹಿಂದೆ ವಕೀಲ ರವಿ ಮೇಲಿನಕೇರಿ ಎಂಬುವರನ್ನು ಬಾಗಪ್ಪ ಹರಿಜನ ಕಡೆಯುವರು ಕಾರು ಡಿಕ್ಕಿ ಹೊಡೆಸಿ, ಬಾನೆಟ್‌ಗೆ ಸಿಲುಕಿದ ಶವವನ್ನು 4 ಕಿ.ಮೀ. ಎಳೆದೊಯ್ದು ಭೀಕರವಾಗಿ ಕೊಲೆ ಮಾಡಿದ್ದರು. ಬಾಗಪ್ಪ ಹರಿಜನ ಮತ್ತು ರವಿ ಮೇಲಿನಕೇರಿ ಸಂಬಂಧಿಕರಾಗಿದ್ದು, ಇವರಿಬ್ಬರ ನಡುವೆ ಕೆಲ ವರ್ಷಗಳಿಂದ ಹಣಕಾಸಿನ ವ್ಯವಹಾರವಿತ್ತು. ಇಬ್ಬರೂ ಸೇರಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಪರಸ್ಪರ ವೈಮನಸ್ಸು ಮೂಡಿತ್ತು. ಈ ಕಾರಣಕ್ಕೆ ಕೊಲೆಯಾಗಿದೆ' ಎಂದು ಅವರು ಹೇಳಿದರು.

ಅಧ್ಯಯನದ ಹೆಸರಲ್ಲಿ ತೀರ್ಥಯಾತ್ರೆ

ಒಂದನೇ ಪುಟದಿಂದ...

ಉತ್ತರಪ್ರದೇಶ ವಿಧಾನ ಪರಿಷತ್ ಭರವಸೆ ಸಮಿತಿಯನ್ನು ಸಂಪರ್ಕಿಸಿದಾಗ ಸದಸ್ಯರು ಕುಂಭಮೇಳದ ಉಸ್ತುವಾರಿ ಕಾರ್ಯದಲ್ಲಿ ತೊಡಗಿಕೊಂಡಿರುವುದರಿಂದ, ಬಿಡುವು ಇಲ್ಲ. ಆದ್ದರಿಂದ ಸಮಿತಿ ಜತೆ ಭೇಟಿ ಅಥವಾ ಸಭೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವುದಾಗಿ ಗೊತ್ತಾಗಿದೆ.

'ಅಲ್ಲಿನ ಭರವಸೆ ಸಮಿತಿಗಳ ಜತೆ ಸಭೆ ನಡೆಯುವುದಿಲ್ಲ ಎಂದು ಗೊತ್ತಾದ ಮೇಲೂ 'ಅಧ್ಯಯನ ಪ್ರವಾಸ' ಹೋಗುವ ಔಚಿತ್ಯ ಏನಿದೆ? ತೀರ್ಥಕ್ಷೇತ್ರಗಳಿಗೆ ಹೋಗಬೇಕು, ಕುಂಭ ಮೇಳದಲ್ಲಿ ಭಾಗವಹಿಸಬೇಕು ಎನ್ನುವುದಾದರೆ ಸ್ವಂತ ಖರ್ಚಿನಲ್ಲಿ ಹೋಗಬಹುದು. ತೆರಿಗೆದಾರರ ಹಣದಲ್ಲಿ ಏಕೆ ಹೋಗಬೇಕು' ಎಂದು ವಿಧಾನಪರಿಷತ್ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕುಂಭ ಮೇಳಕ್ಕೆ ಇನ್ನೆರಡು ತಂಡ ಸಜ್ಜು


ವಿಧಾನಸಭೆ ಮತ್ತು ಪರಿಷತ್ತಿನ 40ಕ್ಕೂ ಹೆಚ್ಚು ಕಾಂಗ್ರೆಸ್ ಸದಸ್ಯರು ಕುಂಭಮೇಳಕ್ಕೆ ಹೋಗಲು ತಯಾರಿ ನಡೆಸಿದ್ದಾರೆ. ಇವರಲ್ಲಿ 20 ಶಾಸಕರು ವಿವಿಧ ಸಮಿತಿಗಳ ಮೂಲಕ ಅಧ್ಯಯನ ಪ್ರವಾಸ ಹೋಗಲು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಇವರಲ್ಲಿ ಕೆಲವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಳಿ ಕುಂಭಮೇಳಕ್ಕೆ ಹೋಗುವ ಇಂಗಿತವನ್ನು ವ್ಯಕ್ತಪಡಿಸಿ ಅನುಮತಿ ಕೇಳಿದಾಗ, ಅಧ್ಯಕ್ಷರು ಅದಕ್ಕೆ ಹಸಿರು ನಿಶಾನೆ ನೀಡಲಿಲ್ಲ. 'ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೋಗಿ ಬಂದಿದ್ದಾರೆ. ಅವರು ಹೋಗಬಹುದಾದರೆ ನಾವು ಏಕೆ ಹೋಗಬಾರದು? ನಮ್ಮ ಧಾರ್ಮಿಕ ಹಕ್ಕುಗಳನ್ನು ಪಾಲಿಸಬಾರದೇ' ಎಂದು ಖರ್ಗೆಯವರನ್ನು ಪ್ರಶ್ನಿಸಿರುವುದಾಗಿ ಮೂಲಗಳು ತಿಳಿಸಿವೆ.

ಯತ್ನಾಳಗೆ ನೋಟಿಸ್: ನಾನು ಪ್ರತಿಕ್ರಿಯಿಸಲ್ಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಷೋಕಾಸ್ ನೋಟಿಸ್ ಕೊಟ್ಟಿರುವುದು ನಾನಲ್ಲ. ಕೇಂದ್ರದ ಶಿಸ್ತು ಸಮಿತಿ ಕೊಟ್ಟಿದೆ. ಆ ಬಗ್ಗೆ ನಾನು ಮಾತ ನಾಡುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಬಿ.ವೈ. ವಿಜಯೇಂದ್ರ

ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಭಾಯಾಗಡದಲ್ಲಿ ಶುಕ್ರವಾರ ಆರಂಭವಾದ ಸಂತ ಸೇವಾಲಾಲ್ ಜಾತ್ರಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲವೂ ಸರಿ ಹೋಗಲಿದೆ ಎಂದು ಈ ಹಿಂದೆಯೇ ಹೇಳಿದ್ದೆ. ಶೀಘ್ರವೇ ಸರಿಹೋಗುವ ಲಕ್ಷಣ ಕಾಣುತ್ತಿವೆ' ಎಂದು ಹೇಳಿದರು.

'ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರಿಯುವ ವಿಶ್ವಾಸ ಇದೆಯೇ?' ಎಂಬ ಪ್ರಶ್ನೆಗೆ, 'ದೆಹಲಿಗೂ ಹೋಗಿದ್ದೇನೆ. ಕುಂಭಮೇಳಕ್ಕೂ ಹೋಗಿ ಬಂದಿದ್ದೇನೆ. ಎಲ್ಲರಿಗೂ ಒಳ್ಳೆಯದಾಗಲಿದೆ' ಎಂದರು.

ಉದಯಗಿರಿ ಗಲಾಟೆ: ಮಾಹಿತಿ ಪಡೆದ ಗೃಹ ಸಚಿವ ಜಿ. ಪರಮೇಶ್ವರ

ಕಠಿಣ ಕ್ರಮಕ್ಕೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು: ಮೈಸೂರು ಉದಯಗಿರಿ ಗಲಭೆಗೆ ಸಂಬಂಧಿಸಿದಂತೆ ಕಾನೂನು ಕೈಗೆತ್ತಿಕೊಂಡ ಪ್ರತಿಯೊಬ್ಬರನ್ನೂ ಪತ್ತೆ ಹಚ್ಚಿ ಕಾನೂನು ಕ್ರಮಕ್ಕೆ ಒಳಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.



ಸಿದ್ದರಾಮಯ್ಯ

'ಕಾವೇರಿ' ನಿವಾಸದಲ್ಲಿ ಮೈಸೂರು ಜಿಲ್ಲಾಧಿಕಾರಿ, ಎಸ್‌ಪಿ, ಮೈಸೂರು ಪೊಲೀಸ್ ಕಮಿಷನರ್ ಮತ್ತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಜತೆ ಸಭೆ ನಡೆಸಿದ ಅವರು, ತಪ್ಪಿತಸ್ಥರು ಯಾರೇ ಇದ್ದರೂ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು ಎಂದು ಹೇಳಿದರು.

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದವರು ಮತ್ತು ಹಿಂಸೆಗೆ ಪ್ರಚೋದನೆ ನೀಡಿದ ಎಲ್ಲರನ್ನೂ ಪತ್ತೆ ಹಚ್ಚಬೇಕು ಮತ್ತು ಕಠಿಣ ಕ್ರಮ ತೆಗೆದುಕೊಳ್ಳಬೇಕು. ಅಮಾಯಕರಿಗೆ ತೊಂದರೆ ಕೊಡಬಾರದು. ಮುಂದೆ ಇಂಥಾ ಘಟನೆಗಳು ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.



ಪೊಲೀಸರ ಮೇಲೆ ಹಲ್ಲೆ ನಡೆದಿರುವುದು ಸ್ಪಷ್ಟ. ಕಾಂಗ್ರೆಸ್ ನಾಯಕರು ಮುಸ್ಲಿಂ ಸಮುದಾಯದಿಂದ ಭಿಕ್ಷೆ ತೆಗೆದುಕೊಂಡು ಆ ಋಣ ತೀರಿಸಲು ಈಗ ಅವರ ಪರ ನಿಂತಿದ್ದಾರೆ

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ನಿರ್ದಾಕ್ಷಿಣ್ಯ ಕ್ರಮ: ಪ್ರಕರಣ ಸಂಬಂಧ ಮೈಸೂರಿನಲ್ಲಿ ಶುಕ್ರವಾರ ಠಾಣೆಗೆ ಗೃಹ ಸಚಿವ ಜಿ.ಪರಮೇಶ್ವರ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಪೊಲೀಸರು ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದಾರೆ. ಕಾನೂನು ಕೈಗೆತ್ತಿಕೊಳ್ಳುವವರು ಎಷ್ಟೇ ಬಲಾಢ್ಯರಾಗಿದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳುವಂತೆ ಸೂಚಿಸಿದ್ದೇನೆ. ಪೊಲೀಸ್ ಇಲಾಖೆಗೆ ಪಕ್ಷ, ಸಮುದಾಯ ಮುಖ್ಯವಲ್ಲ. ಸಿಸಿಟಿವಿ ಕ್ಯಾಮೆರಾ ಆಧರಿಸಿ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದಾರೆ. ಇಂಥ ಘಟನೆಗಳಲ್ಲಿ ಯಾರೂ ರಾಜಕೀಯ ಮಾಡಬಾರದು' ಎಂದರು.

'ಘಟನೆ ಬಗ್ಗೆ ಕೆಲವರ ಹೇಳಿಕೆಗಳಿಂದ ಪೊಲೀಸರನ್ನು ಕುಗ್ಗಿಸಲು ಸಾಧ್ಯವಿಲ್ಲ. ಸಾರ್ವಜನಿಕ ಆಸ್ತಿ ನಷ್ಟ ಮಾಡಿದವರಿಂದಲೇ ನಷ್ಟ ಭರಿಸುವ ವಿಚಾರ ರಾಜ್ಯಕ್ಕೆ ಸದ್ಯಕ್ಕೆ ಅಗತ್ಯವಿಲ್ಲ. ಉತ್ತರ ಪ್ರದೇಶದಲ್ಲಿ ಬುಲ್ಡೋಜರ್‌ನಿಂದ ಆರೋಪಿಗಳ ಮನೆ ಕೆಡವುತ್ತಾರೆ. ನಮ್ಮ ಜನ ಆ ಮಟ್ಟಕ್ಕೆ ಹೋಗಿಲ್ಲ. ಮುಂದೆ ಬೇಕಿದ್ದರೆ ನೋಡೋಣ. ನಗರ ಪೊಲೀಸ್ ಆಯುಕ್ತರು ಉದಯಗಿರಿಯಲ್ಲಿ ಮತ್ತೊಂದು ಠಾಣೆಗೆ ಬೇಡಿಕೆಯಿಟ್ಟಿದ್ದು, ಚರ್ಚಿಸಲಾಗುವುದು' ಎಂದರು.

'ಅವಹೇಳನಕಾರಿ ಪೋಸ್ಟ್ ಹಾಕಿದ್ದ ಆರೋಪಿ ಸತೀಶ್, ಪ್ರತಾಪ ಸಿಂಹ ಅವರ ಬಂಟನಾಗಿದ್ದು, ಆರೋಪಿಯೊಂದಿಗೆ ಪ್ರತಾಪ್ ಅವರನ್ನೂ ತನಿಖೆಗೆ ಒಳಪಡಿಸಬೇಕು' ಎಂದು ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ ಆಗ್ರಹಿಸಿದ್ದು, ಈ ಸಂಬಂಧ ಉದಯಗಿರಿ ಠಾಣೆಗೆ ದೂರು ನೀಡಿದ್ದಾರೆ.

ಆರೋಪಿ ಪೊಲೀಸ್ ಕಸ್ಟಡಿಗೆ

ಮೈಸೂರು: ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಬಂಧಿತರಾಗಿರುವ ಸತೀಶ್ ಅವರನ್ನು ಪೊಲೀಸರು ಶುಕ್ರವಾರ, ಇಲ್ಲಿನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರು ಪಡಿಸಿದರು. ನ್ಯಾಯಾಲಯವು ಅವರನ್ನು ಒಂದು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಐದು ದಿನ ಕಸ್ಟಡಿಗೆ ನೀಡುವಂತೆ ಸರ್ಕಾರಿ ಅಭಿಯೋಜಕಿ ಸವಿತಾ ಕೋರಿದ್ದರು. ಅದಕ್ಕೆ ವಿರೋಧ ವ್ಯಕ್ತಪಡಿಸಿದ ಸತೀಶ್ ಪರ ವಕೀಲ ಭಾಸ್ಕರ್, ಕೇವಲ 3 ಗಂಟೆ ಕಸ್ಟಡಿಗೆ ನೀಡುವಂತೆ ವಾದಿಸಿದ್ದರು.

'ಒಂದು ದಿನದ ಒಳಗೆ ಮಹಜರು ಕಾರ್ಯ ಮುಗಿಸಿ, ಕೃತ್ಯಕ್ಕೆ ಬಳಸಲಾದ ಮೊಬೈಲ್ ಫೋನ್ ಜಪ್ತಿ ಮಾಡಿ' ಎಂದು ನ್ಯಾಯಧೀಶರಾದ ಸರೋಜಾ ಆದೇಶಿಸಿದರು.

₹40 ಲಕ್ಷ ಮೌಲ್ಯದ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಾರಿನಲ್ಲಿ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಕಾಳಗಿ ಠಾಣೆ ಪೊಲೀಸರು, ಆರೋಪಿಗಳಿಂದ ₹ 40 ಲಕ್ಷ ಮೌಲ್ಯದ 40 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಕಾಳಗಿ ತಾಲ್ಲೂಕಿನ ಲಕ್ಷ್ಮಣ ನಾಯಕ ತಾಂಡಾದ ಚಂದ್ರಕಾಂತ ಅಲಿಯಾಸ್ ಪಪ್ಪು ಹರಿಶ್ಚಂದ್ರ ಚವ್ಹಾಣ್ (40), ಕೋಡ್ಲಿ ಗ್ರಾಮದ ಮಲ್ಲಯ್ಯ ಪ್ಯಾಟಿಮನಿ ಬಂಧಿತ ಆರೋಪಿಗಳು.

'ಲಕ್ಷ್ಮಣ ನಾಯಕ ತಾಂಡಾ ಬಳಿ ಕಾರನ್ನು ತಪಾಸಣೆ ಮಾಡಿದಾಗ 18 ಪ್ಯಾಕೇಟ್‌ಗಳಲ್ಲಿ 40 ಕೆ.ಜಿ. ಗಾಂಜಾ ಪತ್ತೆಯಾಗಿದೆ. ಗಾಂಜಾ ಜೊತೆಗೆ ಕೃತ್ಯಕ್ಕೆ ಬಳಸಿದ ₹ 5 ಲಕ್ಷ ಮೌಲ್ಯದ ಕಾರು, ಒಂದು ಬೈಕ್ ಅನ್ನೂ ವಶಕ್ಕೆ ಪಡೆದಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಗಾಂಜಾವನ್ನು ಒಡಿಶಾ ರಾಜ್ಯದಿಂದ ತಂದಿರುವುದಾಗಿ ಆರೋಪಿಗಳು ಪ್ರಾಥಮಿಕ ತನಿಖೆ ವೇಳೆ ಹೇಳಿಕೆ ನೀಡಿದ್ದಾರೆ.

'ಸಮಗ್ರ ತನಿಖೆ ನಡೆಸಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: '50:50 ಅನುಪಾತದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನೀಡಿರುವ ಎಲ್ಲ ನಿವೇಶನಗಳ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ 14 ನಿವೇಶನಗಳ ಬಗ್ಗೆ ಮಾತ್ರ ತನಿಖೆ ನಡೆಸಿದೆ' ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ದೂರಿದರು.

ನಗರದಲ್ಲಿ ಶುಕ್ರವಾರ ಲೋಕಾಯುಕ್ತಕ್ಕೆ ಹೆಚ್ಚುವರಿ ದಾಖಲೆಗಳನ್ನು ನೀಡಿ, ಮನವಿ ಪತ್ರ ಸಲ್ಲಿಸಿದ ಅವರು ನಂತರ ಸುದ್ದಿಗಾರರ ಜತೆಗೆ ಮಾತನಾಡಿ, 'ತನಿಖಾಧಿಕಾರಿಗಳು ಏಕಪಕ್ಷೀಯವಾಗಿ ನಡೆದುಕೊಂಡಿದ್ದಾರೆ. ಸಮಗ್ರ ತನಿಖೆ ನಡೆಸಿಲ್ಲ' ಎಂದು ಆರೋಪಿಸಿದರು.



ಸ್ನೇಹಮಯಿ ಕೃಷ್ಣ

'ದಟ್ಟಗಳ್ಳಿ 3ನೇ ಹಂತದಲ್ಲಿ 50x80 ವಿಸ್ತೀರ್ಣದ ನಿವೇಶನ ಸಂಖ್ಯೆ 3553 ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 2008ರಲ್ಲಿ ₹24 ಲಕ್ಷ ನೀಡಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಸತ್ಯನಾರಾಯಣ ಅವರಿಂದ ಖರೀದಿ ಮಾಡಿ, 2014ರಲ್ಲಿ ಮಾರಾಟ ಮಾಡಿದ್ದಾರೆ' ಎಂದು ದೂರಿದರು.

'10 ವರ್ಷ ಪರಾಭಾರೆ ಮಾಡುವಂತಿಲ್ಲ, ಮನೆ ಕಟ್ಟದಿದ್ದರೆ ಮುಡಾ ಕ್ರಯ ಪತ್ರ ಕೊಡುವಂತಿಲ್ಲ. ಆದರೂ ನಿಯಮ ಉಲ್ಲಂಘಿಸಿ 5 ವರ್ಷ 5 ತಿಂಗಳಿಗೆ ಸತ್ಯನಾರಾಯಣ ಅವರು ಕ್ರಯಪತ್ರ ಪಡೆದು ಪಾರ್ವತಿ ಅವರಿಗೆ ಮಾರಾಟ ಮಾಡಿದ್ದಾರೆ. ಪಾರ್ವತಿ ಅವರು ಅದೇ ನಿವೇಶನವನ್ನು 6 ವರ್ಷಕ್ಕೆ ₹1ಕೋಟಿಗೆ ಸುಲೋಚನಾ ಎಂಬುವರಿಗೆ ಮಾರಾಟ ಮಾಡಿದ್ದಾರೆ. ಈ ಪ್ರಕರಣದ ತನಿಖೆಯು ನಡೆದಿಲ್ಲ' ಎಂದರು.



ಜೆಡಿಎಸ್ ಜಿಲ್ಲಾ ಘಟಕದ ವತಿಯಿಂದ ಭದ್ರಾವತಿಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರ್ ಸ್ವಾಮಿ ಪಾಲ್ಗೊಂಡಿದ್ದರು

ಅಧಿಕಾರಿ ನಿಂದಿಸಿದವನ ಬಂಧಿಸಿ: ನಿಖಿಲ್

ಪ್ರಜಾವಾಣಿ ವಾರ್ತೆ

ಭದ್ರಾವತಿ (ಶಿವಮೊಗ್ಗ ಜಿಲ್ಲೆ): 'ಭದ್ರಾವತಿಯಲ್ಲಿ ಅಕ್ರಮ ಮರಳುಗಾರಿಕೆ ತಡೆಯಲು ತುಂಗಭದ್ರಾ ನದಿಗೆ ತೆರಳಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿ ಜ್ಯೋತಿ ಅವರನ್ನು ಅವಾಚ್ಯವಾಗಿ ನಿಂದಿಸಿದ ವ್ಯಕ್ತಿಯ ವಿರುದ್ಧ ಸರ್ಕಾರ ಎಫ್‌ಐಆರ್ ದಾಖಲಿಸಿ, ಬಂಧಿಸಲು ಸೂಚಿಸಬೇಕು' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರ್‌ಸ್ವಾಮಿ ಸವಾಲು ಹಾಕಿದರು.

ಮಹಿಳಾ ಅಧಿಕಾರಿ ನಿಂದಿಸಿದ ಅಕ್ರಮ ಮರಳು ದಂಧೆಕೋರ ವ್ಯಕ್ತಿಯನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಜೆಡಿಎಸ್ ಜಿಲ್ಲಾ ಘಟಕದ ವತಿಯಿಂದ ತಾಲ್ಲೂಕು ಕಚೇರಿ ಎದುರು ಶುಕ್ರವಾರ ನಡೆದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

'ಭದ್ರಾವತಿ ತಾಲ್ಲೂಕು ವ್ಯಾಪ್ತಿಯ ಬೀದಿ– ಬೀದಿಗಳಲ್ಲಿ ಮಟ್ಕಾ, ಇಸ್ಪೀಟ್ ದಂಧೆ ಎಗ್ಗಿಲ್ಲದೇ ನಡೆಯುತ್ತಿದೆ. ಜನಪ್ರತಿನಿಧಿಗಳು, ಅವರ ಸಂಬಂಧಿಗಳು ಅದಕ್ಕೆ ಬೆಂಗಾವಲಾಗಿ ನಿಂತು ಜನರನ್ನು ಹಾಳು ಮಾಡುತ್ತಿದ್ದಾರೆ. ಅವರ ದಬ್ಬಾಳಿಕೆ, ದೌರ್ಜನ್ಯ ಹೆಚ್ಚು ದಿನ ನಡೆಯುವುದಿಲ್ಲ' ಎಂದರು.

'ಜನಪ್ರತಿನಿಧಿ ಆದವರು ಸ್ಥಳೀಯವಾಗಿ ಅಭಿವೃದ್ಧಿ ಕಾರ್ಯಗಳಿಗೆ ಶಕ್ತಿ ತುಂಬಬೇಕು. ಜನಪರ ಯೋಜನೆಗಳನ್ನು ಜಾರಿಗೊಳಿಸಬೇಕು. ಆದರೆ, ಭದ್ರಾವತಿಯ ಸ್ಥಳೀಯ ಜನಪ್ರತಿನಿಧಿ ಹಾಗೂ ಅವರ ಸಂಬಂಧಿಗಳು ತಾಲ್ಲೂಕಿನ ಮರ್ಯಾದೆ ಹರಾಜಿಗೆ ಇಟ್ಟಿದ್ದಾರೆ. ಇದು ಶಿವಮೊಗ್ಗ ಜಿಲ್ಲೆಯಲ್ಲಿನ ಅರಾಜಕತೆಗೆ ಸಾಕ್ಷಿ' ಎಂದು ದೂರಿದರು. ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಶಾರದಾ ಅಪ್ಪಾಜಿ ಇದ್ದರು.

ಭೂಮಾಪಕ ಆತ್ಮಹತ್ಯೆ: ಮೂವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಭೂಮಾಪಕ ಕೆ.ಎಸ್. ಶಿವಕುಮಾರ್ ಆತ್ಮಹತ್ಯೆಗೆ ಸಂಬಂಧಿಸಿದಂತೆ ಮೂವರ ವಿರುದ್ಧ ಮೂಡಿಗೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆತ್ಮಹತ್ಯೆಗೂ ಮುನ್ನ ಶಿವಕುಮಾರ್ ಬರೆದಿಟ್ಟಿದ್ದ ಪತ್ರವೊಂದು ಪೊಲೀಸರಿಗೆ ದೊರೆತಿದೆ. ಸಾವಿಗೆ ಮೂವರು ಕಾರಣ ಎಂದು ಅವರು ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಖಾಸಗಿ ಕಾಲೇಜಿನ ಉಪನ್ಯಾಸಕಿಯೊಬ್ಬರ ಜತೆ ದೂರವಾಣಿಯಲ್ಲಿ ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಂಡು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಉಪನ್ಯಾಸಕಿ ಪದೇ ಪದೇ ಹಣಕ್ಕಾಗಿ ಪೀಡಿಸುತ್ತಿದ್ದಾರೆ' ಎಂದು ಪತ್ರದಲ್ಲಿ ಬರೆದಿದ್ದಾರೆ.

'ಮತ್ತೊಂದು ಪ್ರಕರಣದಲ್ಲಿ ಕುನ್ನಹಳ್ಳಿ ಗ್ರಾಮದ ಜಮೀನು ಸರ್ವೆ ವಿಷಯದಲ್ಲಿ ಗ್ರಗೋರಿಯ ಡಿಕುನ್ನ ಮತ್ತು ಡ್ರೊನಾಲ್ಡ್ ಡಿಸೋಜ ಡಿಕುನ್ನ ಕಿರುಕುಳ ನೀಡುತ್ತಿದ್ದರು. ಇದರಿಂದ ಮನನೊಂದಿರುವುದಾಗಿ ಪತ್ರದದಲ್ಲಿ ಬರೆದಿದ್ದಾರೆ' ಎಂದು ಶಿವಕುಮಾರ್ ಅವರ ಪತ್ನಿ ಪುಷ್ಪ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಾಗಿದೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಬೆಣ್ಣೆಹಳ್ಳಿಯ ಶಿವಕುಮಾರ್, ಇಲ್ಲಿಯ ಭೂಮಾಪನ ಕಚೇರಿಯಲ್ಲಿ ಕಾರ್ಯ-ನಿರ್ವಹಿಸುತ್ತಿದ್ದರು. ಮೂಡಿಗೆರೆ ಬಾಡಿಗೆ ಮನೆಯಲ್ಲಿ ಗುರುವಾರ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಆರ್ಟ್ ಆಫ್ ಲಿವಿಂಗ್: ಮಹಿಳಾ ಸಮ್ಮೇಳನಕ್ಕೆ ದ್ರೌಪದಿ ಮುರ್ಮು ಚಾಲನೆ

ಮಾನವೀಯ ಮೌಲ್ಯಕ್ಕೆ ಒತ್ತು ನೀಡಿ: ರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ರಾಮನಗರ: 'ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸುವ ಜತೆಗೆ ಮಾನವೀಯ ಮೌಲ್ಯಗಳನ್ನು ಕಾಪಾಡಿಕೊಳ್ಳುವುದಕ್ಕೂ ಒತ್ತು ನೀಡಬೇಕು. ದಯೆ ಮತ್ತು ಕನಿಕರದಿಂದ ಮುನ್ನಡೆಯುವ ಮಹಿಳೆಯರ ಪಾತ್ರ ಇದರಲ್ಲಿ ಅತ್ಯಂತ ಪ್ರಮುಖವಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳು ಅಖಂಡವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟರು.

ಬೆಂಗಳೂರು– ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರದಿಂದ ನಡೆಯುತ್ತಿರುವ ಮೂರು ದಿನಗಳ 10ನೇ ಅಂತರ ರಾಷ್ಟ್ರೀಯ ಮಹಿಳಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ನಾವು ತಾಂತ್ರಿಕ ಅಡಚಣೆಗಳ ಯುಗದಲ್ಲಿದ್ದೇವೆ. ತಂತ್ರಜ್ಞಾನದ ಪ್ರಗತಿಯು ಕೆಲವು ರೀತಿಯಲ್ಲಿ ಉತ್ತಮ ಗುಣಮಟ್ಟದ ಜೀವನ ನೀಡಿದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸಹಾನುಭೂತಿ, ಪ್ರೀತಿ, ಏಕತೆ ಹಾಗೂ ಮಾನವೀಯ ಮೌಲ್ಯಗಳನ್ನು ಉತ್ತೇಜಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕಾಗಿದೆ' ಎಂದು ಕಿವಿಮಾತು ಹೇಳಿದರು.



ಬೆಂಗಳೂರು–ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರ ಜರುಗಿದ 10ನೇ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಶ್ರೀ ಶ್ರೀ ರವಿಶಂಕರ್ ಗುರೂಜಿ, ಸಂಸದೆ ಹೇಮಾಮಾಲಿನಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇದ್ದಾರೆ

ರವಿಶಂಕರ್ ಗುರೂಜಿ ನೇತೃತ್ವದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಜನರಿಗೆ ಧ್ಯಾನ ಹಾಗೂ ಮಾನವೀಯ ಸೇವೆಗಳ ಮೂಲಕ ಶಾಂತಿ ಮಾರ್ಗ ತೋರಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಶ್ರೀ ರವಿಶಂಕರ್ ಗುರೂಜಿ ಮಾತನಾಡಿ, 'ಮಹಿಳೆಯರು ಕಣ್ಣೀರು ಹಾಕಲು ಬಿಡಬಾರದು. ಮಹಿಳೆಯರು ನಾಯಕರಾದರೆ ಜಗತ್ತಿನಲ್ಲಿ ನಡೆಯುವ ಸಂಘರ್ಷ, ಯುದ್ಧ ಹಾಗೂ ಸಾಮಾಜಿಕ ಅಸ್ಥಿರತೆ ಕಡಿಮೆಯಾಗಬಹುದು' ಎಂದು ಅಭಿಪ್ರಾಯಪಟ್ಟರು.

ಅಂತರರಾಷ್ಟ್ರೀಯ ಮಹಿಳಾ ಪರಿಷತ್ತಿನ ಅಧ್ಯಕ್ಷೆ ಭಾನುಮತಿ ನರಸಿಂಹನ್, 'ಜಸ್ಟ್ ಬೀ ಎಂಬ ಘೋಷಣೆ ಮೂಲಕ ನಾವು ಆತ್ಮಾನುಸಂಧಾನ ಮಾಡಬೇಕು. ನಮ್ಮೊಳಗಿನ ಶಕ್ತಿ ಅರಿತು ಸಮತೋಲನ ಸಾಧಿಸಬೇಕು' ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿದೇಶಾಂಗ ಮತ್ತು ಸಂಸ್ಕೃತಿ ಖಾತೆ ಮಾಜಿ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ, ಕಾಮನ್‌ವೆಲ್ತ್ ಸಂಸ್ಥೆ ಮಹಾಸಚಿವರಾದ ರೈಟ್‌ಹಾನ್ ಪ್ಯಾಟ್ರಿಷಿಯಾ ಸ್ಕಾಟ್‌ಲ್ಯಾಂಡ್, ಸಂಸದೆ ಹೇಮಾಮಾಲಿನಿ ಹಾಗೂ 50ಕ್ಕೂ ಹೆಚ್ಚು ದೇಶಗಳಿಂದ ಬಂದಿದ್ದ 500ಕ್ಕೂ ಹೆಚ್ಚು ಪ್ರತಿನಿಧಿಗಳು ಇದ್ದರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ

ವಿಶಾಲಾಕ್ಷಿ ಪ್ರಶಸ್ತಿ: ಅನ್ನಪೂರ್ಣ ದೇವಿ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ)
ಹೇಮಾ ಮಾಲಿನಿ (ಸಿನಿಮಾ ಮತ್ತು ಸಾರ್ವಜನಿಕ ಸೇವೆ)
ಪ್ಯಾಟ್ರಿಷಿಯಾ ಸ್ಕಾಟ್‌ಲ್ಯಾಂಡ್ (ಸಾಮಾಜಿಕ ನ್ಯಾಯ ಮತ್ತು ಸಮಾನತೆ)
ಅಮ್ಲಾ ರೂಯಾ (ಗ್ರಾಮೀಣ ಅಭಿವೃದ್ಧಿ)
ಡಾ.ಭಾಗ್ಯಶ್ರೀ ಪ್ರಸಾದ್ ಪಾಟೀಲ (ಕೃಷಿ ಸಂಶೋಧನೆ,ಗ್ರಾಮೀಣ ಅಭಿವೃದ್ಧಿ)
ಕ್ಯಾಥರಿನ್ ವಿಂಟರ್ ಸೆಲ್ಲೇರಿ (ಸೂಕ್ಷ್ಮ ಪೋಷಣಾ ನಿಲುವು)
ಆರ್.ಪದ್ಮಾವತಿ (ಭಾರತದ ಶಿಲ್ಪಕಲೆ ಸಂರಕ್ಷಣೆ),
ಸಂಗೀತಾ ಜಿಂದಾಲ್ (ಭಾರತೀಯ ಸಂಸ್ಕೃತಿ ಸಂರಕ್ಷಣೆ)
ಸ್ಮಿತಾ ಪ್ರಕಾಶ್ (ಪತ್ರಿಕೋದ್ಯಮ)
ಸುಮಲತಾ ಅಂಬರೀಶ್ (ಸಾರ್ವಜನಿಕ ಸೇವೆ).
ಆಚಾರ್ಯ ರತ್ನಾನಂದ ಪ್ರಶಸ್ತಿ: ಲೆಫ್ಟಿನೆಂಟ್ ಕರ್ನಲ್ ಅನಿಷ್ ಮೋಹನ್ (ಶೌರ್ಯ ಮತ್ತು ಸೇವಾ ದೃಷ್ಟಿಕೋನ)
ಅರ್ನಬ್ ಗೋಸ್ವಾಮಿ (ಪತ್ರಿಕೋದ್ಯಮ)

'ಜಸ್ಟ್ ಬೀ' ಮಂತ್ರ ನಾವು ಸಹಜವಾಗಿರಲು ಪ್ರೇರೇಪಿಸುತ್ತದೆ. ಧ್ಯಾನ ಹಾಗೂ ಯೋಗದಿಂದ ಸಮತೋಲನ ಕಂಡುಕೊಳ್ಳಬಹುದು

ಅನ್ನಪೂರ್ಣ ದೇವಿ, ಕೇಂದ್ರ ಸಚಿವೆ

ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮುನ್ನಡೆ ಸಾಧಿಸುತ್ತಿದ್ದಾರೆ. ಮಾನವೀಯ ಮೌಲ್ಯಗಳೊಂದಿಗೆ ಮಹಿಳೆ ಹೀಗೆಯೇ ಮುಂದುವರಿಯಬೇಕು

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಮೈಲಾರಲಿಂಗೇಶ್ವರ ಕಾರಣಿಕ ಮಹೋತ್ಸವ, ನೆರೆದಿದ್ದ ಭಾರಿ ಜನ

ಕಾರಣಿಕ: 'ತುಂಬಿದ ಕೊಡ ತುಳಕೀತಲೇ ಪರಾಕ್'

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ: 'ತುಂಬಿದ ಕೊಡ ತುಳಕೀತಲೇ ಪರಾಕ್' ಎಂದು ಮೈಲಾರಲಿಂಗೇಶ್ವರ ಸ್ವಾಮಿಯ ಕಾರಣಿಕ ನುಡಿ ಮೊಳಗುವ ಮೂಲಕ ನಾಡಿಗೆ ಸುಭಿಕ್ಷವಾಗುವ ಸಂದೇಶ ರವಾನೆಯಾಗಿದೆ.

ತಾಲ್ಲೂಕಿನ ಐತಿಹಾಸಿಕ ಮೈಲಾರ ಸುಕ್ಷೇತ್ರದಲ್ಲಿ ಶುಕ್ರವಾರ ಸಂಜೆ 5.30ರ ಸುಮಾರಿಗೆ ಬಿಲ್ಲು ಏರಿದ ಗೊರವಯ್ಯ ರಾಮಣ್ಣ ಅವರು 'ಸದ್ದಲೇ' ಎಂದು ಕೂಗುತ್ತಿದ್ದಂತೆ ಡೆಂಕನಮರಡಿಯಲ್ಲಿ ಸೇರಿದ್ದ ಲಕ್ಷಾಂತರ ಭಕ್ತರು ಸ್ತಬ್ಧರಾದರು. ಗೊರವಯ್ಯ ದೈವವಾಣಿಯನ್ನು ನುಡಿದು ಕೆಳಕ್ಕೆ ಜಿಗಿದರು. ಸುತ್ತಲೂ ನೆರೆದಿದ್ದ ಗೊರವ ಸಮೂಹದವರು ಅವರನ್ನು ಕಂಬಳಿಯಲ್ಲಿ ಹಿಡಿದರು.

'ನಾಡಿನಲ್ಲಿ ಮಳೆ, ಬೆಳೆ ಸಮೃದ್ಧವಾಗಿರಲಿದೆ. ರೈತರಿಗೆ ಉತ್ತಮ ಇಳುವರಿ ಸಿಗಲಿದೆ. ರೋಗ ರುಜಿನಗಳಿಂದ ಜನರನ್ನು ಮೈಲಾರಲಿಂಗ ಕಾಪಾಡುತ್ತಾನೆ ಎಂದು ಕಾರ್ಣಿಕವನ್ನು ವಿಶ್ಲೇಷಿಸಲಾಗಿದೆ' ಎಂದು ದೇವಸ್ಥಾನದ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ತಿಳಿಸಿದರು.

ಐದು ಲಕ್ಷಕ್ಕೂ ಅಧಿಕ ಭಕ್ತರ 'ಏಳು ಕೋಟಿ ಏಳು ಕೋಟಿಗೋ... ಚಹಾಂಗ ಬಲೋ' ಎಂಬ ಸ್ವಾಮಿಯ ಉದ್ಘೋಷದ ನಡುವೆ ದೇವಸ್ಥಾನದ ವಂಶಪಾರಂಪರ್ಯ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಅಶ್ವಾರೂಢರಾಗಿ ದೇವಸ್ಥಾನದ ಸಮೀಪದಲ್ಲೇ ಇರುವ ಡೆಂಕನಮರಡಿಗೆ ಬಂದು ಕಾರಣಿಕ ಸ್ಥಳದಲ್ಲಿ ಪ್ರದಕ್ಷಿಣೆ ಹಾಕಿದರು.

ಬಳಿಕ ಈ ಹಿಂದೆ ವಿಜಯನಗರದ ಅರಸರು ಮೈಲಾರಲಿಂಗ ಸ್ವಾಮಿಗೆ ಅರ್ಪಿಸಿದ್ದ ಮೂರ್ತಿಗಳ ಉತ್ಸವದೊಂದಿಗೆ ಗೊರವಯ್ಯ ರಾಮಣ್ಣ ಅವರನ್ನು ಸಿಂಹಾಸನ ಕಟ್ಟೆಯಿಂದ ಕಾರಣಿಕ ಸ್ಥಳಕ್ಕೆ ಗೊರವ ಸಮೂಹ ಭವ್ಯ ಮೆರವಣಿಗೆಯಲ್ಲಿ ಕರೆತರಲಾಯಿತು. ಬಳಿಕ ಕಾರಣಿಕ ನುಡಿ ಮೊಳಗಿದಾಗ ಭಕ್ತರು ಜಯಘೋಷ ಹಾಕಿದರು.



ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಕ್ಷೇತ್ರದಲ್ಲಿ ಶುಕ್ರವಾರ ಸಂಜೆ ಕಾರಣಿಕ ಆಲಿಸಲು ಸೇರಿದ್ದ ಭಕ್ತಸಮೂಹ –ಪ್ರಜಾವಾಣಿ ಚಿತ್ರ/ ಕೆ.ಸೋಮಶೇಖರ್



ಕಾರಣಿಕ ನುಡಿದ ಗೊರವಯ್ಯ ರಾಮಣ್ಣ –ಪ್ರಜಾವಾಣಿ ಚಿತ್ರ




ಸುಭಾಷಿತ

ನಮ್ಮ ಬದುಕಿನಲ್ಲೇ ನೋವು, ನಲಿವು, ಸಂಕಟ ಎಲ್ಲವೂ ಇರುವಾಗ, ಸ್ವರ್ಗ, ನರಕವನ್ನು ಹುಡುಕಿಕೊಂಡು ಹೋಗುವ ಜನ್ಮ ಯಾಕಾಗಿ? –ಶಿವರಾಮ ಕಾರಂತ

ಎ.ಐ: ಸಾಮರ್ಥ್ಯ ಮತ್ತು ಕಳವಳ ನಿಯಂತ್ರಣಕ್ಕೆ ಬೇಕು ಅಗತ್ಯ ನಿಯಮ

ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಮಂಗಳವಾರ ಕೊನೆಗೊಂಡ ಕೃತಕ ಬುದ್ಧಿಮತ್ತೆ (ಎ.ಐ) ಕುರಿತ ಶೃಂಗಸಭೆಯು ಜಗತ್ತಿನ ಈ ನವೀನ ತಂತ್ರಜ್ಞಾನದ ಬಳಕೆಯ ವಿಚಾರವಾಗಿ ವಿವಿಧ ದೇಶಗಳ ನಡುವೆ ಸಮಾನ ಅಂಶಗಳನ್ನು ಕಂಡುಕೊಳ್ಳುವ ಯತ್ನವಾಗಿತ್ತು. ಹಿಂದೆ ಕೈಗಾರಿಕಾ ಕ್ರಾಂತಿಯು ತಂದಂತಹ ಬಗೆಯಲ್ಲಿ ಜನಜೀವನ ಮತ್ತು ಕೆಲಸದ ಬಗೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವ ಸಾಮರ್ಥ್ಯವು ಎ.ಐ.ಗೆ ಇದೆ ಎಂದು ತಜ್ಞರು ಹೇಳುತ್ತಿದ್ದಾರೆ. ಎ.ಐ. ಬಳಕೆಯಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡೂ ಇವೆ. ಹೀಗಾಗಿ, ಹೆಚ್ಚಿನವರಿಗೆ ಒಳಿತಾಗುವ ಬಗೆಯಲ್ಲಿ ಮತ್ತು ಪರಸ್ಪರರ ಹಿತಾಸಕ್ತಿಗಳಿಗೆ ಪೂರಕವಾಗುವ ರೀತಿಯಲ್ಲಿ ಸಹಮತವನ್ನು ರೂಪಿಸುವ ಅಗತ್ಯ ಇದೆ. ಫ್ರಾನ್ಸ್‌ನ ಅಧ್ಯಕ್ಷ ಎಮ್ಯಾನ್ಯುವಲ್ ಮ್ಯಾಕ್ರನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಜೊತೆಯಾಗಿ ಆಯೋಜಿಸಿದ ಈ ಶೃಂಗಸಭೆಯಲ್ಲಿ ವಿವಿಧ ಆಯಾಮಗಳ ಬಗ್ಗೆ ವಿಸ್ತೃತವಾದ ಚರ್ಚೆಗಳು ನಡೆದಿವೆ. ಎ.ಐ. ಸಂಬಂಧಿತ ನಿಯಮಗಳು, ಅದರ ಬಳಕೆ, ಈ ತಂತ್ರಜ್ಞಾನದಲ್ಲಿನ ಸಂಶೋಧನೆಗಳು ಮತ್ತು ಪಾಲಿಸಬೇಕಾದ ನೈತಿಕ ಚೌಕಟ್ಟಿನ ಕುರಿತು ಮಾತುಕತೆಗಳು ನಡೆದಿವೆ. ಎ.ಐ. ಕುರಿತು ನಿಯಂತ್ರಣವೇ ಇಲ್ಲದಿದ್ದರೆ ಹೇಗೆ ಎಂಬ ಬಗ್ಗೆ ಮತ್ತು ನಿಯಂತ್ರಣವು ಅತಿಯಾದರೆ ಹೇಗೆ ಎಂಬ ಬಗ್ಗೆ ಕಳವಳಗಳು ಇವೆ.



ಕೃತಕ ಬುದ್ಧಿಮತ್ತೆ ಬಳಕೆಗೆ ಸಂಬಂಧಿಸಿದಂತೆ ಹೆಚ್ಚಿನವರಿಗೆ ಒಳಿತಾಗುವ ಬಗೆಯಲ್ಲಿ ಸಹಮತವನ್ನು ರೂಪಿಸುವ ಅಗತ್ಯ ಇದೆ

ಎ.ಐ. ವಿಚಾರವಾಗಿ ಅಮೆರಿಕವು ಹೆಚ್ಚು ಮುಕ್ತವಾಗಿದೆ, ಐರೋಪ್ಯ ಒಕ್ಕೂಟವು ಕಾನೂನಿನ ಚೌಕಟ್ಟಿನಲ್ಲಿ ಎ.ಐ. ನಿಯಂತ್ರಿಸುವುದರ ಪರವಾಗಿದೆ, ಚೀನಾ ದೇಶವು ಎ.ಐ. ತಂತ್ರಜ್ಞಾನವನ್ನು ಬಿಗಿ ಹಿಡಿತದಲ್ಲಿ ಇರಿಸಿಕೊಳ್ಳುವಂತಹ ನಿಲುವು ಹೊಂದಿದೆ. ಶೃಂಗಸಭೆಯಲ್ಲಿ ಭಾರತ, ಫ್ರಾನ್ಸ್, ಚೀನಾ, ಜರ್ಮನಿ ಸೇರಿದಂತೆ ಒಟ್ಟು 61 ದೇಶಗಳು ಭಾಗಿಯಾಗಿದ್ದವು. ಎ.ಐ. ತಂತ್ರಜ್ಞಾನವು 'ಮುಕ್ತವಾಗಿ, ಒಳಗೊಳ್ಳುವ ಬಗೆಯಲ್ಲಿ, ಪಾರದರ್ಶಕವಾಗಿ, ನೈತಿಕ ಚೌಕಟ್ಟುಗಳಿಗೆ ಒಳಪಟ್ಟು, ಸುರಕ್ಷಿತವಾಗಿ, ವಿಶ್ವಾಸಾರ್ಹವಾಗಿ, ಅಂತರರಾಷ್ಟ್ರೀಯ ನಿಯಮಗಳ ಚೌಕಟ್ಟನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ' ಇರಬೇಕು ಎಂಬ ಘೋಷಣೆಗೆ ಈ ದೇಶಗಳು ಸಹಿ ಮಾಡಿವೆ. ಘೋಷಣೆಯ ವಿಚಾರವಾಗಿ ಸಂಪೂರ್ಣ ಸಹಮತ ಮೂಡಿಲ್ಲ, ಅಮೆರಿಕ ಮತ್ತು ಬ್ರಿಟನ್ ಈ ಒಪ್ಪಂದಕ್ಕೆ ಸಹಿ ಮಾಡಿಲ್ಲ.

ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಮತ್ತು ಅದರ ನಕಾರಾತ್ಮಕ ಆಯಾಮಗಳ ಬಗ್ಗೆ ಜಾಗರೂಕರಾಗಿ ಇರಬೇಕಾದುದರ ಅಗತ್ಯದ ಬಗ್ಗೆ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಈ ತಂತ್ರಜ್ಞಾನವು 'ಈ ಶತಮಾನದಲ್ಲಿ ಮಾನವ ಕುಲಕ್ಕೆ ಸಂಬಂಧಿಸಿದ ಕೋಡ್ (ಕಂಪ್ಯೂಟರ್ ಪ್ರೋಗ್ರಾಂ) ಬರೆಯುತ್ತಿದೆ' ಎಂದು ಹೇಳಿದ್ದಾರೆ. ಭವಿಷ್ಯದಲ್ಲಿ ತಂತ್ರಜ್ಞಾನವು ಎಲ್ಲರಿಗೂ ಲಭ್ಯವಿರುವಂತೆ ಆಗಬೇಕು, ಅದು ಸ್ಥಳೀಯ ವ್ಯವಸ್ಥೆಯ ಜೊತೆ ಬೆಸೆದುಕೊಂಡಿರಬೇಕು ಎಂದು ಮೋದಿ ಅವರು ಹೇಳಿದ್ದಾರೆ. ಜಗತ್ತಿನ ಎಲ್ಲ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ದೇಶಗಳಿಗೆ ಅನುಕೂಲ ಆಗುವ ಬಗೆಯಲ್ಲಿ ಎ.ಐ. ಕುರಿತ ಮಾನದಂಡಗಳನ್ನು ರೂಪಿಸಬೇಕು ಎಂದು ಅವರು ಹೇಳಿದ್ದಾರೆ. ಪ್ರಧಾನಿಯವರು ತಮ್ಮ ಭಾಷಣದಲ್ಲಿ, ಭಾರತವು 'ಬೃಹತ್ ಭಾಷಾ ಮಾದರಿ'ಯನ್ನು (ಎಲ್‌ಎಲ್‌ಎಂ) ಅಭಿವೃದ್ಧಿಪಡಿಸುವಲ್ಲಿ ಸಾಧಿಸಿರುವ ಮುನ್ನಡೆಯನ್ನು ಉಲ್ಲೇಖಿಸಿದ್ದಾರೆ. ಎ.ಐ. ಲೋಕದಲ್ಲಿ ಭಾರತವು ನಾಲ್ಕನೆಯ ಅತಿದೊಡ್ಡ ಶಕ್ತಿ. ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಬಲ ದೇಶಕ್ಕೆ ಇದೆ. ಮುಂದಿನ ವರ್ಷದ ಎ.ಐ. ಶೃಂಗಸಭೆಗೆ ತಾನು ಆತಿಥ್ಯ ವಹಿಸುವುದಾಗಿ ಭಾರತ ಹೇಳಿರುವುದು, ಈ ತಂತ್ರಜ್ಞಾನಕ್ಕೆ ದೇಶವು ಕೊಡುತ್ತಿರುವ ಮಹತ್ವವನ್ನು ಹೇಳುತ್ತದೆ.

ದುರ್ಬಳಕೆಯ ಅಪಾಯಗಳು, ಮನುಷ್ಯ ಮಾಡುವ ಹಲವು ಕೆಲಸಗಳನ್ನು ಎ.ಐ. ಮಾಡಲಿದೆ ಎನ್ನುವ ವಾದ, ಈ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಬೇರೆ ಬೇರೆ ದೇಶಗಳು ಬೇರೆ ಬೇರೆ ಪ್ರಮಾಣದಲ್ಲಿ ಮುನ್ನಡೆ ಸಾಧಿಸಿರುವುದರ ಪರಿಣಾಮವಾಗಿ ಸೃಷ್ಟಿಯಾಗಿರುವ ಅಸಮಾನತೆಯು ಈ ತಂತ್ರಜ್ಞಾನದ ಕುರಿತಾಗಿ ಇರುವ ಪ್ರಮುಖ ಕಳವಳಗಳು. ಈ ತಂತ್ರಜ್ಞಾನವು ಮನುಕುಲಕ್ಕೆ ಒಂದು ಬೆದರಿಕೆಯಾಗಿಯೂ ಬೆಳೆಯಬಹುದು ಎಂಬ ಆತಂಕವು ಹಲವರಲ್ಲಿದೆ. ಈ ಕಳವಳಕ್ಕೆ ವಿರುದ್ಧವಾಗಿ ಒಂದಿಷ್ಟು ವಾದಗಳು ಕೂಡ ಇವೆ. ಇವೆಲ್ಲ ಶೃಂಗಸಭೆಯಲ್ಲಿ ಚರ್ಚೆಗೆ ಬಂದಿವೆ. ಎ.ಐ. ತಂತ್ರಜ್ಞಾನವು ಉದ್ಯೋಗದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂಬ ಆಶಾವಾದವನ್ನು ಮೋದಿ ಅವರು ವ್ಯಕ್ತಪಡಿಸಿದ್ದಾರೆ. ಕೆಲಸಗಳ ಸ್ವರೂಪ ಮಾತ್ರವೇ ಬದಲಾಗುತ್ತದೆ, ಇದಕ್ಕೆ ಪೂರಕವಾಗಿ ಕೌಶಲ ಹೆಚ್ಚಿಸಿಕೊಳ್ಳುವ, ಹೊಸದಾಗಿ ಕೌಶಲಗಳನ್ನು ರೂಢಿಸಿಕೊಳ್ಳುವ ಅಗತ್ಯ ಉಂಟಾಗುತ್ತದೆ ಎಂದಿದ್ದಾರೆ. ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಮತ್ತು ಅದರ ಕುರಿತಾಗಿ ಇರುವ ಕಳವಳಗಳು ಎಲ್ಲರಿಗೂ ಅನ್ವಯವಾಗುವ ನಿಯಮಗಳ ಅಗತ್ಯವನ್ನು ಹೇಳುತ್ತವೆ. ಶೃಂಗಸಭೆಯಲ್ಲಿ ನಡೆದ ಹಾಗೂ ಇತರ ಕಡೆಗಳಲ್ಲಿ ನಡೆಯುವ ಚರ್ಚೆಗಳು ಜಗತ್ತನ್ನು ಆ ದಿಕ್ಕಿನೆಡೆಗೆ ಒಯ್ಯಬೇಕಿದೆ.

ದಿನದ ಟ್ವೀಟ್

ಮೆಟ್ರೊ: ಯಶಸ್ಸಿನ ಮಾನದಂಡ ಯಾವುದು?



'ನಮ್ಮ ಮೆಟ್ರೊ'ದ ಪ್ರಯಾಣ ದರ ಏರಿಕೆಯು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮೆಟ್ರೊದ ಯಶಸ್ಸನ್ನು ಅದರ ಲಾಭದಾಯಕತೆಯಿಂದ ಅಳೆಯಬಾರದು. ಕೈಗೆಟಕುವ ಪ್ರಯಾಣ ದರ, ವಿಶ್ವಾಸಾರ್ಹವಾದ ಮತ್ತು ಸುಲಭವಾಗಿ ಲಭ್ಯವಾಗಬಹುದಾದ ಸಂಚಾರ ವ್ಯವಸ್ಥೆ, ಬೆಂಗಳೂರಿನ ಜೀವನದ ಗುಣಮಟ್ಟ ವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಗೆ ಅದು ನೀಡುವ ಕೊಡುಗೆಯನ್ನು ಆಧರಿಸಿ ನಿರ್ಧರಿಸಬೇಕು.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಇನ್ನೊಂದು ವರ್ಷ, ಎರಡು ವರ್ಷ, ಐದು ವರ್ಷ ಇರುತ್ತಾರೆಂದು ಒಬ್ಬೊಬ್ಬ ಸಚಿವರು ಒಂದೊಂದು ರೀತಿ ಹೇಳಿಕೆ ನೀಡುತ್ತಿದ್ದಾರೆ. ಸರ್ಕಾರದ ಮಂತ್ರಿಮಂಡಲವೇ ಎರಡು ಬಣಗಳಾಗಿ ವಿಭಜನೆಗೊಂಡಿದೆ. ಒಂದು, ಸಿದ್ದರಾಮಯ್ಯ ಬಣ. ಇನ್ನೊಂದು, ಡಿ.ಕೆ.ಶಿವಕುಮಾರ್ ಬಣ.

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 15-2-2000

• ಆಶ್ರಯ ಯೋಜನೆ ರದ್ದಿಗೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಫೆ. 14– ಗ್ರಾಮೀಣ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಇದ್ದ ಶೇ 10ರಷ್ಟು ಕೃಪಾಂಕ ರದ್ದು ಮಾಡಿದ್ದ ಕರ್ನಾಟಕ ಹೈಕೋರ್ಟ್ ಆಜ್ಞೆಯನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್, 'ಆಶ್ರಯ ಯೋಜನೆ' ರದ್ದು ಆಜ್ಞೆಗೆ ಇಂದು ತಡೆಯಾಜ್ಞೆ ನೀಡಿತು.

ಕರ್ನಾಟಕ ಹೈಕೋರ್ಟ್ ರದ್ದು ಮಾಡಿದ್ದ ಈ ಎರಡು ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ಇಂದು ವಿಚಾರಣೆಗೆ ಬಂದಿದ್ದವು. ಗ್ರಾಮೀಣ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಅವರು ಗಳಿಸಿದ ಒಟ್ಟು ಅಂಕಗಳಲ್ಲಿ ಶೇ 10ರಷ್ಟು ಕೃಪಾಂಕ ನೀಡುವ ರಾಜ್ಯ ಸರ್ಕಾರದ ಆಜ್ಞೆಯು ಅಸಿಂಧು ಮತ್ತು ಸಂವಿಧಾನದ ನಿಯಮಾವಳಿಗಳನ್ನು ಮೀರಿದ ಕ್ರಮ ಎಂದು ರದ್ದು ಮಾಡಿದ್ದ ಹೈಕೋರ್ಟ್ ಆಜ್ಞೆಯನ್ನು ಪೀಠ ಎತ್ತಿಹಿಡಿಯಿತು.

50 ವರ್ಷಗಳ ಹಿಂದೆ

ಶನಿವಾರ, 15-2-1975

• ನಗರ ವಿ.ವಿ. ನೇಮಕಗಳಲ್ಲಿ ಅಕ್ರಮ

ಬೆಂಗಳೂರು, ಫೆ. 14– ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತದಲ್ಲಿ ನಡೆದ ಹಲವಾರು ನೇಮಕಗಳಲ್ಲಿ ಅಕ್ರಮ ನಡೆದಿದೆ ಎಂದು ಆರು ವರ್ಷಗಳ ಹಿಂದೆ ವಿದ್ಯಾರ್ಥಿಗಳು ಮಾಡಿದ್ದ ಆಪಾದನೆಗಳ ಬಗ್ಗೆ ತನಿಖೆ ಮಾಡಿದ್ದ ರಹಮತ್ ಉಲ್ಲಾ ಸಮಿತಿಯು ಅದರಲ್ಲಿ ಕೆಲವು ಆಪಾದನೆಗಳನ್ನು ಎತ್ತಿಹಿಡಿದಿದೆ.

ಇಂದು ಸಮಿತಿಯ ವರದಿಯನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಬಿಡುಗಡೆ ಮಾಡಲಾಯಿತು.

ವಿದ್ಯಾರ್ಥಿ ಮಂಡಲಿಯು ಒಟ್ಟು 27 ಆಪಾದನೆಗಳನ್ನು ಮಾಡಿತ್ತು. ಅದರ ಬಗ್ಗೆ ಉಗ್ರ ಸ್ವರೂಪದ ಚಳವಳಿ ನಡೆದ ಮೇಲೆ ಸರ್ಕಾರ ಆಪಾದನೆಗಳ ಬಗ್ಗೆ ತನಿಖೆ ಮಾಡುವ ಕಾರ್ಯವನ್ನು ಆಗಿನ ಜಾಗೃತ ಕಮಿಷನರ್ ಆಗಿದ್ದ ರಹಮತ್ ಉಲ್ಲಾ ಅವರಿಗೆ ಒಪ್ಪಿಸಿತ್ತು. ಸಮಿತಿಯು ವರದಿ ಒಪ್ಪಿಸಿ ಬಹಳ ಕಾಲ ಕಳೆದಿದ್ದರೂ ಸರ್ಕಾರ ಅದನ್ನು ಬಿಡುಗಡೆ ಮಾಡಿರಲಿಲ್ಲ. ಅದರ ಬಗ್ಗೆ ವಿಧಾನಮಂಡಲದಲ್ಲಿ ಹಾಗೂ ವಿದ್ಯಾರ್ಥಿ ಸಮೂಹದಿಂದ ಪದೇ ಪದೇ ಬೇಡಿಕೆ ಬಂದಿತ್ತು.

• ಕಾಳಿ 'ಕರ್ಮಕಾಂಡ'ಕ್ಕೆ ಅವಕಾಶ ನೀಡದಿರಿ

ಬೆಂಗಳೂರು, ಫೆ. 14– ಶರಾವತಿ ಕರ್ಮಕಾಂಡದ ರೀತಿ ಕಾಳಿ ಯೋಜನೆಯಲ್ಲಿ ಕರ್ಮಕಾಂಡ ಆಗದಂತೆ ಸರ್ಕಾರ ಎಚ್ಚರ ವಹಿಸಬೇಕೆಂದು ಕಾಂಗ್ರೆಸ್ ಸದಸ್ಯರೊಬ್ಬರು ಇಂದು ವಿಧಾನಸಭೆಯಲ್ಲಿ ಆಗ್ರಹಿಸಿದರು.

ಕಾಳಿ ಜಲ ವಿದ್ಯುತ್ ಯೋಜನೆಯ ಸಿಮೆಂಟ್ ಮತ್ತಿತರ ವಸ್ತುಗಳನ್ನು ಮೈಸೂರು ವಿದ್ಯುತ್ ಸಂಸ್ಥೆಯ ಅಧಿಕಾರಿಗಳು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೋತ್ತರ ಕಾಲದಲ್ಲಿ ಕೇಳಿದ ಕಾಂಗ್ರೆಸ್ಸಿನ ವಿ.ಎಂ.ಘಾಡಿ ಅವರು, ಅಧಿಕಾರಿ ಮತ್ತು ಕಂಟ್ರಾಕ್ಟರ್ ಇಬ್ಬರೂ ಸೇರಿ ಸಿಮೆಂಟ್ ಸಾಗಿಸಿದ ನಿದರ್ಶನ ಒಂದನ್ನು ನೀಡಿ, ಆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿಯವರ ಪರವಾಗಿ ಉತ್ತರ ನೀಡಿದ ವಿದ್ಯುತ್ ಖಾತೆಯ ರಾಜ್ಯ ಸಚಿವ ಎಚ್.ಸಿ.ಶ್ರೀಕಂಠಯ್ಯ ಅವರು, ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ನಿರಾಕರಿಸಿದರು.

ಈ ಕ್ಷೇತ್ರವನ್ನು ಹೊಸದಾಗಿ ಮರುರೂಪಿಸುವುದು ಬಿಟ್ಟು ಬೇರೆ ಮಾರ್ಗವಿಲ್ಲ

ಮೈಕ್ರೊಫೈನಾನ್ಸ್ ಮತ್ತು ಪರಿಹಾರ ಮಾರ್ಗ



ವಿಶ್ಲೇಷಣೆ

ಎಂ.ಎಸ್.ಶ್ರೀರಾಮ್

ಮೈಕ್ರೊಫೈನಾನ್ಸ್ ಕ್ಷೇತ್ರದಲ್ಲಿ ಪ್ರತಿ ಮೂರ್ನಾಲ್ಕು ವರ್ಷಗಳಿಗೊಮ್ಮೆ ಯಾವುದಾದರೊಂದು ಬಿಕ್ಕಟ್ಟನ್ನು ಕಾಣುವುದು ಸಹಜವಾಗಿಬಿಟ್ಟಿದೆ. ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿದ್ದ ಮೈಕ್ರೊಫೈನಾನ್ಸ್ ಸಂಸ್ಥೆಗಳ 50 ಕಾರ್ಯಾಲಯಗಳನ್ನು 2006ರಲ್ಲಿ ಅಲ್ಲಿನ ಸರ್ಕಾರ ಕೆಲಕಾಲ ಮುಚ್ಚಿತ್ತು. ಆಗ ಈ ಸಂಸ್ಥೆಗಳ ಮೇಲೆ ಮುಖ್ಯವಾಗಿ ಮೂರು ಆರೋಪಗಳು ಕೇಳಿಬಂದಿದ್ದವು. ಅತಿ ಹೆಚ್ಚು ಬಡ್ಡಿ ದರದ ಮೇಲೆ ಸಾಲ ಕೊಡಲಾಗುತ್ತದೆ, ವಸೂಲಾತಿಯ ವಿಧಾನ ಸಮರ್ಪಕವಾಗಿಲ್ಲ ಮತ್ತು ಹಲವು ಸಂಸ್ಥೆಗಳು ಅದೇ ಗ್ರಾಹಕರಿಗೆ ಮತ್ತೆ ಮತ್ತೆ ಹೆಚ್ಚಿನ ಸಾಲ ಕೊಡುತ್ತಿವೆ ಎನ್ನುವುದು ಆ ಆಪಾದನೆಗಳು. ಆಗ ಈ ಸಂಸ್ಥೆಗಳು ತಮ್ಮ ಒಕ್ಕೂಟವಾದ 'ಸಾ-ಧನ್' ಮೂಲಕ ಸರ್ಕಾರದೊಂದಿಗೆ ಒಂದು ಒಪ್ಪಂದಕ್ಕೆ ಬಂದವು. ಬಡ್ಡಿದರವನ್ನು ಕಡಿಮೆ ಮಾಡುವ, ಹೆಚ್ಚಿನ ಸಾಲದ ಪ್ರಲೋಭನೆಗೆ ಗ್ರಾಹಕರನ್ನು ತಳ್ಳದಿರುವ ಸ್ವನಿಯಂತ್ರಣಾ ಪದ್ಧತಿಯನ್ನು ಪಾಲಿಸುವುದಾಗಿ ಮಾತು ಕೊಟ್ಟಿದ್ದವು.

2010ರ ವೇಳೆಗೆ ಈ ಎಲ್ಲ ಆಶ್ವಾಸನೆಗಳನ್ನೂ ಗಾಳಿಗೆ ತೂರಿ, ತಮ್ಮ ವ್ಯಾಪಾರ ವೃದ್ಧಿಯನ್ನಷ್ಟೇ ಗುರಿಯಾಗಿ ಇಟ್ಟುಕೊಂಡ ಈ ಸಂಸ್ಥೆಗಳು, ಮತ್ತೆ ಅವೇ ಮೂರು ಆಪಾದನೆಗಳನ್ನು ಹೊತ್ತು ಕಟಕಟೆಯಲ್ಲಿ ನಿಂತವು. ಆಗ, ಅವಿಭಜಿತ ಆಂಧ್ರಪ್ರದೇಶ ಸರ್ಕಾರ ಮತ್ತೆ ಈ ಸಂಸ್ಥೆಗಳನ್ನು ನಿಯಂತ್ರಿಸಲು ಒಂದು ಸುಗ್ರೀವಾಜ್ಞೆಯನ್ನು, ನಂತರ ಕಾನೂನನ್ನು ಜಾರಿ ಮಾಡಿತು. ಅದೇ ಮಾದರಿಯಲ್ಲಿ ಇದೇ 12ರಂದು ಕರ್ನಾಟಕ ಸರ್ಕಾರವೂ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಈ ಸುಗ್ರೀವಾಜ್ಞೆಯಿಂದ ಬಿಕ್ಕಟ್ಟಿನ ಆಯಾಮ ಬದಲಾಗುತ್ತದೆಯೇ ವಿನಾ ಒಂದು ದೀರ್ಘಕಾಲಿಕ ಪರಿಹಾರ ಒದಗಿಸಿದಂತೆ ಆಗುವುದಿಲ್ಲ. ಮೈಕ್ರೊಫೈನಾನ್ಸ್ ಸಂಸ್ಥೆಗಳು ಸಾಲ ಕೊಡುವ ವಿಧಾನದಲ್ಲಿ ಗಮನಿಸಲೇಬೇಕಾದ ನಾಲ್ಕಾರು ಅಂಶಗಳಿವೆ. ಈ ಸಂಸ್ಥೆಗಳು ಮಹಿಳೆಯರಿಗೆ ಮಾತ್ರ ಸಾಲ ಕೊಡುತ್ತವೆ. ಮಹಿಳೆಯರ ಗುಂಪುಗಳನ್ನು ರಚಿಸಿ, ಒಬ್ಬರ ಸಾಲಕ್ಕೆ ಇನ್ನೊಬ್ಬರನ್ನು ಬಾಧ್ಯರನ್ನಾಗಿಸುತ್ತವೆ. ಈ ಪ್ರಕ್ರಿಯೆಯಲ್ಲಿ, ಆಣೆ ಪ್ರಮಾಣ ಮಾಡಿ ಅವರಲ್ಲಿ ಒಂದು ರೀತಿಯ ಅಪರಾಧಿ ಭಾವವನ್ನು ಹುಟ್ಟಿಸುವುದೂ ಒಳಗೊಂಡಿದೆ.

ಇಡೀ ವ್ಯವಹಾರವನ್ನು ಬಹಿರಂಗ ಸ್ಥಳದಲ್ಲಿ ನಡೆಸಲಾಗುತ್ತದೆ. ಸಾಲ ಮರುಪಾವತಿಸುವುದು ಅತ್ಯಂತ ಪ್ರಮುಖವಾದ ನಿಯಮ, ಅದನ್ನು ಯಾವುದೇ ಪರಿಸ್ಥಿತಿಯಲ್ಲೂ ಉಲ್ಲಂಘಿಸಬಾರದು ಎನ್ನುವ ಸಂದೇಶವನ್ನು ಮತ್ತೆ ಮತ್ತೆ ಕೊಡಲಾಗುತ್ತದೆ. ಸಾಲ ಪಡೆದುಕೊಳ್ಳುವವರಿಗೆ ಕಂತುಗಳನ್ನು ಮರುಪಾವತಿಸುವ ಶಕ್ತಿಯಿದೆಯೇ ಎಂದು ಈ ಸಂಸ್ಥೆಗಳು ಪರಾಮರ್ಶಿಸುವುದಿಲ್ಲ. ಗ್ರಾಹಕರೇ ತಮ್ಮ ಪರಿಸ್ಥಿತಿಗೆ ಅನುಸಾರವಾಗಿ ಪರಾಮರ್ಶಿಸಿಕೊಂಡು ಸಾಲ ತೆಗೆದುಕೊಳ್ಳಬೇಕು. ಈ ಸಂಸ್ಥೆಗಳ ವಾರ್ಷಿಕ ಬಡ್ಡಿದರ ಶೇ 22ರಿಂದ ಶೇ 28ರವರೆಗೆ ಇರುತ್ತದೆ. ಈ ಬಡ್ಡಿದರದಲ್ಲಿ ಸಣ್ಣ ಮಟ್ಟದ ಸಾಲ ತೆಗೆದುಕೊಂಡರೆ ಮರುಪಾವತಿ ಕಷ್ಟವಾಗದು. ಆದರೆ ಇದೇ ಬಡ್ಡಿದರ ದೊಡ್ಡ ಮಟ್ಟದ ಸಾಲಕ್ಕೆ ಮತ್ತು ದೀರ್ಘಕಾಲದ ಸಾಲಕ್ಕೆ ಹೊರಲಾರದ ಭಾರವಾಗುತ್ತದೆ. ಮೈಕ್ರೊಫೈನಾನ್ಸಿನ ಬಿಕ್ಕಟ್ಟು ಇರುವುದು ಬಡ್ಡಿದರವನ್ನು ಅದೇ ಮಟ್ಟದಲ್ಲಿಟ್ಟು ಗ್ರಾಹಕರಿಗೆ ಹೆಚ್ಚೆಚ್ಚು ಸಾಲ ಕೊಡುವುದರಲ್ಲಿ. ಒಂದು ಸಂಸ್ಥೆ ತಕ್ಕ ಮಟ್ಟಿನ ಸಾಲ ಕೊಟ್ಟು, ಇದಕ್ಕಿಂತ ಹೆಚ್ಚಿನ ಅಪಾಯಕ್ಕೆ ಒಡ್ಡಿಕೊಳ್ಳಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದರೆ, ಮತ್ತೊಂದು ಸಂಸ್ಥೆ ಅದೇ ಗ್ರಾಹಕರನ್ನು ಹೊಸ ಗ್ರಾಹಕರಾಗಿ ಕಂಡು ಅಧಿಕ ಸಾಲ ಕೊಡುವ ಪರಿಪಾಟವಿದೆ.

2010ರಲ್ಲಿ ರಿಸರ್ವ್ ಬ್ಯಾಂಕು ತನ್ನ ಕೇಂದ್ರೀಯ ಆಡಳಿತ ಮಂಡಳಿಯ ವರಿಷ್ಠ ಸದಸ್ಯರಾಗಿದ್ದ ಮಾಲೇಗಾಮ್ ಅವರ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯ ವರದಿಯನ್ನು ಅನುಸರಿಸಿ, ಮೈಕ್ರೊಫೈನಾನ್ಸ್ ಸಂಸ್ಥೆಗಳಿಗೆ ಅನ್ವಯಿಸುವ ಕಾರ್ಯವಿಧಾನ ಮತ್ತು ವಿಶೇಷ ನಿಯಮಾವಳಿಯನ್ನು ಜಾರಿ ಮಾಡಿತು. ಈ ವರದಿಯ ಮೂಲ ಚೌಕಟ್ಟಿನಲ್ಲೇ ಸಮಯ, ಸಂದರ್ಭಾನುಸಾರವಾಗಿ ಕೈಗೊಂಡ ಸುಧಾರಣೆ ಹಾಗೂ ಬದಲಾವಣೆಗಳೊಂದಿಗೆ ರಿಸರ್ವ್ ಬ್ಯಾಂಕಿನ ನೀತಿ ನಿಯಮಗಳು ಇಂದಿಗೂ ಜಾರಿಯಲ್ಲಿವೆ.

ಈ ನಿಯಮಾನುಸಾರ ಮೈಕ್ರೊಫೈನಾನ್ಸ್ ಸಂಸ್ಥೆಗಳು ಮೊದಲಿಗೆ ತಮ್ಮನ್ನು ನೋಂದಾಯಿಸಿಕೊಳ್ಳಬೇಕು. ಆನಂತರ ಅವು ಪಾಲಿಸಬೇಕಾದ ಕಾರ್ಯವಿಧಾನದ ಪ್ರಕಾರ, ಸಂಸ್ಥೆಗಳು ಎಲ್ಲ ಗ್ರಾಹಕರ ಸಾಲದ ವಿವರಗಳನ್ನು, ಇರುವ ನಾಲ್ಕು ಕ್ರೆಡಿಟ್ ಬ್ಯೂರೊಗಳ ಮಾಹಿತಿ ಕೋಶದಲ್ಲಿ ಕಡ್ಡಾಯವಾಗಿ ಸೇರಿಸಬೇಕು. ಇದರಿಂದ ಗ್ರಾಹಕರು ಎಲ್ಲಾ ಮೂಲಗಳಿಂದ ಪಡೆದಿರುವ ಒಟ್ಟಾರೆ ಸಾಲದ ವಿವರಗಳು ಸಿಗುತ್ತವೆ. 2011ರಲ್ಲಿ ಮೊದಲಿಗೆ ನಿಯಮಾವಳಿಗಳು ಜಾರಿಯಾದಾಗ ಗ್ರಾಮೀಣ ಪ್ರದೇಶಗಳಲ್ಲಿ ಆದಾಯದ ಗರಿಷ್ಠ ಮಿತಿ ಬರೀ ₹ 60,000 ಇತ್ತು. ಈಗ ಅದನ್ನು ₹ 3 ಲಕ್ಷಕ್ಕೆ ಏರಿಸಲಾಗಿದೆ. ಒಟ್ಟಾರೆ ಸಾಲದ ಗರಿಷ್ಠ ಮಿತಿ ₹ 50,000 ಇತ್ತು. ಇದನ್ನೂ ₹ 3 ಲಕ್ಷಕ್ಕೆ ಏರಿಸಲಾಗಿದೆ. ಈ ಎರಡೂ ಗರಿಷ್ಠ ಮಿತಿಗಳನ್ನು ಐದಾರು ಪಟ್ಟು ಹೆಚ್ಚಿಸಿರುವುದು ಮೈಕ್ರೊಫೈನಾನ್ಸ್ ಸಂಸ್ಥೆಗಳು ಬಡ ಗ್ರಾಹಕರಿಗೆ ಅಧಿಕ ಸಾಲ ಕೊಡಲು ಪ್ರೋತ್ಸಾಹಿಸುತ್ತಿರುವಂತೆಯೇ ಕಾಣುತ್ತದೆ. ಈ ಸಾಲದ ಮಿತಿಯ ಮೇಲೆ ಹೆಚ್ಚಿನ ಕಡಿವಾಣ ಇರಬೇಕು. ಸಾಲದ ಗರಿಷ್ಠ ಮಿತಿಯನ್ನು ಆರು ಪಟ್ಟು ಹೆಚ್ಚಿಸುವಾಗ ಗ್ರಾಮೀಣ ಪ್ರದೇಶಗಳಲ್ಲಿ ಈ ಹದಿನಾಲ್ಕು ವರ್ಷಗಳಲ್ಲಿ ಆರ್ಥಿಕ ವೃದ್ಧಿ ಅಷ್ಟರಮಟ್ಟಿಗೆ ಆಗಿದೆಯೇ ಎನ್ನುವ ಪ್ರಶ್ನೆಯನ್ನು ಯಾರೂ ಕೇಳಿದಂತಿಲ್ಲ.

ಇನ್ನು, ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕೆಂದು ರಿಸರ್ವ್ ಬ್ಯಾಂಕು ತನ್ನ ನಿಯಂತ್ರಣದಲ್ಲಿರುವ ಸಂಸ್ಥೆಗಳಿಗೆ ಮಾತ್ರ ನಿಯಮ ಜಾರಿ ಮಾಡಬಹುದು. ಆದರೆ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಡದ ಅನೇಕರು (ಸಹಕಾರಿ ಸಂಘಗಳು, ಸೊಸೈಟಿಗಳು, ಟ್ರಸ್ಟ್, ಸ್ವಸಹಾಯ ಗುಂಪುಗಳು, ಚಿಟ್ ಕಂಪನಿಗಳು, ಅನಿಯಂತ್ರಿತ ಬಡ್ಡಿ ವ್ಯಾಪಾರಿಗಳು) ಮಾರುಕಟ್ಟೆಯಲ್ಲಿ ಇದ್ದಾರೆ. ಮೈಕ್ರೊಫೈನಾನ್ಸ್ ಗ್ರಾಹಕರು ಬೇರೆ ಮೂಲಗಳಿಂದ ಎಷ್ಟು ಸಾಲವನ್ನು ಪಡೆಯುತ್ತಿದ್ದಾರೆ ಎನ್ನುವ ಮಾಹಿತಿ ಇಲ್ಲವಾಗಿದೆ.



ಸದ್ಯ ಕರ್ನಾಟಕ ಸರ್ಕಾರ ಜಾರಿ ಮಾಡಿರುವ ಸುಗ್ರೀವಾಜ್ಞೆಯ ಉದ್ದೇಶ ಒಳ್ಳೆಯದೇ ಆಗಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನವಾಗುವಂತೆ ಕಾಣುತ್ತಿಲ್ಲ. ಅದರಲ್ಲಿ ರಿಸರ್ವ್ ಬ್ಯಾಂಕಿನ ಸುಪರ್ದಿಯಲ್ಲಿರುವ ಸಂಸ್ಥೆಗಳನ್ನು ಹೊರಗಿಡಲಾಗಿದೆ. ಮಿಕ್ಕ ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸುವುದು ಈ ಚೌಕಟ್ಟಿಗೆ ಒಳಪಟ್ಟಿದೆಯಾದರೂ ಅದನ್ನು ಸಮರ್ಪಕವಾಗಿ ಜಾರಿಗೆ ತರುವ ಮತ್ತು ಅದನ್ನು ಆಧಾರವಾಗಿ ಇಟ್ಟುಕೊಂಡು ಒಂದು ನಿಯಂತ್ರಣಾ ಚೌಕಟ್ಟನ್ನು ರೂಪಿಸುವ ದೂರದೃಷ್ಟಿ ಕಾಣುತ್ತಿಲ್ಲ. ಇದರಿಂದ ಪ್ರಾಮಾಣಿಕವಾಗಿ ವ್ಯವಹರಿಸುತ್ತಿರುವ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ. ಪರವಾನಗಿ ಪಡೆಯದೆ ನೀಡಿದ ಸಾಲವು ವಸೂಲಿಗೆ ಅರ್ಹವಲ್ಲ ಎಂದು ಹೇಳಲಾಗಿದ್ದರೂ ಇದಕ್ಕೆ ಒಂದು ಶಾಶ್ವತವಾದ ಏರ್ಪಾಟನ್ನು ಮಾಡಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಏನು ಮಾಡಬಹುದು?

ಇದಕ್ಕೆ ಒಂದು ದೀರ್ಘಕಾಲಿಕ ಪರಿಹಾರವನ್ನು ಒದಗಿಸಲು ಸರ್ಕಾರ ಭಿನ್ನ ರೀತಿಯಲ್ಲಿ ಆಲೋಚಿಸಬೇಕು. ಸುಗ್ರೀವಾಜ್ಞೆಯಲ್ಲಿ ಮಂಡಿಸಿರುವ ಉದ್ದೇಶಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ರಾಜ್ಯ ಮಟ್ಟದ ಹಣಕಾಸು ಕ್ಷೇತ್ರ ನಿಯಂತ್ರಣಾ ಪ್ರಾಧಿಕಾರವನ್ನು ರಚಿಸಬೇಕು. ಕೇರಳ ಸರ್ಕಾರವು ಪತ್ತಿನ ವ್ಯವಸ್ಥೆಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು ರಾಜ್ಯದ ಅಪೆಕ್ಸ್ ಬ್ಯಾಂಕಿನೊಂದಿಗೆ ವಿಲೀನಗೊಳಿಸಲು ಸಮಿತಿಯೊಂದನ್ನು ರಚಿಸಿತ್ತು. ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ವೈ.ವಿ.ರೆಡ್ಡಿ ಅವರ ಸಲಹೆಯ ಮೇರೆಗೆ ಈ ಸಮಿತಿಯು ಇಂತಹ ಸೂಚನೆಯನ್ನು ಕೇರಳ ಸರ್ಕಾರಕ್ಕೆ ನೀಡಿತ್ತು. ಅದು ಜಾರಿಯಾಗಲಿಲ್ಲ. ಆದರೆ ಕರ್ನಾಟಕ ಸರ್ಕಾರ ಈ ಸಲಹೆಯನ್ನು ಕಾರ್ಯರೂಪಕ್ಕೆ ತರಬಹುದು. ಇದರಿಂದ ರಿಸರ್ವ್ ಬ್ಯಾಂಕಿನ ವ್ಯಾಪ್ತಿಗೆ ಬರದ ಎಲ್ಲ ಸಂಸ್ಥೆಗಳೂ ಈ ಪ್ರಾಧಿಕಾರದ ಅಡಿಯಲ್ಲಿ ಬರುತ್ತವೆ. ಅವು ನಿಯಮಿತವಾಗಿ ತಮ್ಮ ಮಾಹಿತಿಯನ್ನು ಕ್ರೆಡಿಟ್ ಬ್ಯೂರೊಗಳೊಂದಿಗೆ ಹಂಚಿಕೊಳ್ಳಬೇಕೆಂಬ ನಿಯಮವನ್ನು ಜಾರಿ ಮಾಡಿದರೆ, ಅಪೂರ್ಣ ಮಾಹಿತಿಯಿಂದ ಆಗುತ್ತಿರುವ ತೊಡಕುಗಳ ನಿವಾರಣೆಯತ್ತ ಒಂದು ಹೆಜ್ಜೆ ಇಟ್ಟಂತೆ ಆಗುತ್ತದೆ. ಸಂಸ್ಥೆಗಳ ವಾರ್ಷಿಕ ವಹಿವಾಟಿನ ಮಾಹಿತಿಯನ್ನು ಒಂದೆಡೆ ದಾಖಲಿಸಲು ಮತ್ತು ಸಂಸ್ಥೆಗಳನ್ನು ನಿಯಂತ್ರಿಸಲು ಒಂದು ಚೌಕಟ್ಟು ಸಿಕ್ಕಂತೆ ಆಗುತ್ತದೆ. ರಾಜ್ಯದ ಕಾನೂನಿನ ಅಡಿಯಲ್ಲಿ ಬರುವ ಸಹಕಾರ ವ್ಯವಸ್ಥೆ, ಸ್ವಸಹಾಯ ಗುಂಪುಗಳು, ಸೊಸೈಟಿಗಳು, ಇತರ ಎಲ್ಲ ಆರ್ಥಿಕ ಕ್ಷೇತ್ರದ ಸಂಸ್ಥೆಗಳು ಈ ಕಾನೂನು ಮತ್ತು ಪ್ರಾಧಿಕಾರದ ಅಡಿಯಲ್ಲಿ ಬರಬೇಕು. ಆಗ ಸದ್ಯದ ಸುಗ್ರೀವಾಜ್ಞೆಯಲ್ಲಿರುವ ಉದ್ದೇಶವನ್ನು ಸಾಧಿಸಲು ಒಂದು ಸುಸ್ಥಿರ ಏರ್ಪಾಟನ್ನು ಸರ್ಕಾರ ಮಾಡಿದೆ ಎಂದು ನಂಬಬಹುದು.

ಈಗಿನ ತೇಪೆಯಿಂದ ಮೈಕ್ರೊಫೈನಾನ್ಸ್ ಕ್ಷೇತ್ರದಲ್ಲಿ ಸುಸ್ತಿ ಹೆಚ್ಚಾಗುತ್ತದೆಯೇ ವಿನಾ ಯಾವ ಮೂಲಭೂತ ಬದಲಾವಣೆಗಳೂ ಆಗುವುದಿಲ್ಲ. ಮೈಕ್ರೊಫೈನಾನ್ಸ್‌ನ ಮಾದರಿ ಬಿರುಕು ಬಿಟ್ಟು ಛಿದ್ರವಾಗುತ್ತಿದೆ. ಈ ಕ್ಷೇತ್ರವನ್ನು ಹೊಸದಾಗಿ ಮರುರೂಪಿಸದೇ ಅನ್ಯಮಾರ್ಗವಿಲ್ಲ.

ಚುರುಮುರಿ



ಮುಳುಗು ಭಾಗ್ಯ

• ಆನಂದ

'ಕುಂಭಮೇಳಕ್ಕೆ ಜನ ಯಾಕೆ ಹೋಗ್ತಾರೆ?' ಎಂದು ಮಡದಿ ಕೇಳಿದಳು. 'ಹೋಗ್ತಾರೆ ಅಲ್ಲ ಹೋಗ್ತಿದಾರೆ ಯಾಕೆ?' ಎಂದು ಕೇಳು ಎಂದೆ. 'ಸರಿ, ಯಾಕೆ ಹೋಗ್ತಿದಾರೆ?' ಎಂದಳು.

'ಗುಡ್ ಕ್ವೆಶ್ಚನ್. ಅವರವರ ಭಾವ ಭಕುತಿಗೆ ತಕ್ಕಂತೆ ಡಿಮಾಂಡ್ ಇರಿಸಿಕೊಂಡು, ಕೋರಿಕೆ, ಬೇಡಿಕೆಗೆ ತಕ್ಕಂತೆ ಅಲ್ಲಿಗೆ ಹೋಗಿ ಮುಳುಗು ಹಾಕ್ತಾರೆ. ಉದಾಹರಣೆಗೆ, ಈ ವ್ಯಕ್ತಿ ನೋಡು. ಆರ್‌ಸಿಬಿ ಫ್ಯಾನ್. 'ಈ ಸಲ ಕಪ್ ನಮ್ದೇ' ಅಂತ ಬರೆದಿರುವ ತಂಡದ ಆಟಗಾರರಿರುವ ಫೋಟೊ ಹಿಡಿದು ಮುಳುಗು ಹಾಕ್ತಿದಾನೆ' ಎಂದು ಅವಳಿಗೆ ವಾಟ್ಸ್‌ಆ್ಯಪ್ ಫೋಟೊ ತೋರಿಸಿದೆ.

'ಹಾಗಾದರೆ ಕಪ್ ಅವರದೇನಾ ಈ ಸಲ?'

'ಹಾಗಾಗಲಿ ಅಂತ ಆ ಫ್ಯಾನಿನ ಬಯಕೆ. ಹಾಗೇ ಇನ್ನೊಬ್ಬನಿಗೆ ದುಡ್ಡು ಮಾಡಿಕೊಳ್ಳುವ ಹಂಬಲ. ಇಲ್ಲಿ ಅವನಿಗೆ ದಂಧೆಯ ಅವಕಾಶ ಕಂಡಿದೆ. 500 ರೂಪಾಯಿ ಕೊಟ್ಟು ಫೋಟೊ ಕಳಿಸಿದರೆ, ಅವನು ಅದನ್ನು ಕೈಲಿ ಹಿಡಿದು ಅವರ ಪರವಾಗಿ ಮುಳುಗು ಹಾಕ್ತಾನಂತೆ. ಶ್ರಮ ಅವನದು, ಪುಣ್ಯ 500 ಕೊಟ್ಟವನದು. ಹೇಗಿದೆ ಬ್ಯುಸಿನೆಸ್ ಐಡಿಯಾ?'

'ಹಾಗೆ ಪುಣ್ಯ ಟ್ರಾನ್ಸ್‌ಫರ್ ಮಾಡಬಹುದೆ?'

'ಗೊತ್ತಿಲ್ಲ. ಹೋದರೆ 500, ಬಂದರೆ ಒಂದಿಷ್ಟು ಪುಣ್ಯ ಎಂದು, ತಮಗೆ ಮುಳುಗು ಹಾಕಲು ಆಗದವರು ಕೆಲವರು ತಮ್ಮ ಪರವಾಗಿ ಮುಳುಗು ಹಾಕಲು ಬೇರೊಬ್ಬರಿಗೆ ಪವರ್ ಆಫ್ ಅಟಾರ್ನಿ ಕೊಡಬಹುದು'.

'ನಮ್ಮ ರಾಜಕಾರಣಿಗಳು ಕುರ್ಚಿ ಹಿಡಿದು ಮುಳುಗು ಹಾಕಿದರೆ ಹೇಗೆ?'

'ಗುಡ್ ಐಡಿಯಾ. ಆದರೆ ಟೀವಿ ಕ್ಯಾಮೆರಾಗಳ ಕಣ್ಣಿಗೆ ಬಿದ್ದರೆ ಬ್ರೇಕಿಂಗ್ ನ್ಯೂಸ್ ಆಗುತ್ತೆ. ಆಗ ಅವರ ವಿರೋಧಿಗಳು ಮುಳುಗು ಹಾಕಲು ಗುಟ್ಟಾಗಿಯಾದರೂ ಹೋಗ್ತಾರೆ'.

'ಇದೇನಾದರೂ ಕ್ಲಿಕ್ ಆದರೆ ಬೇರೆ ಬೇರೆ ಕಾರಣಗಳಿಗೆ ಮುಳುಗು ಹಾಕುವ ಅಥವಾ ಮುಳುಗು ಹಾಕಿಸುವ ದಂಧೆ ಶುರುವಾಗಬಹುದು'.

'ಫಾರ್ ಎಕ್ಸಾಂಪಲ್?'

'ಮುಡಾ, ಸಿಬಿಐ, ಐಟಿ, ಇಡಿ ನೋಟೀಸ್ ಹಿಡಿದು ಮುಳುಗಿದರೆ ಹೇಗೆ?'

ಸಂಗತ

ಜೊಳ್ಳುಕಾಳುಗಳ ಪೊಳ್ಳು ಸಂತೆ!

ವೇಗದ ಬದುಕಿನಲ್ಲಿಯೂ ಆಲಿಸುವ, ಗ್ರಹಿಸುವ, ಕಲಿಯುವ ಸಂಯಮ ಮೂಡಬೇಕು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಯಂತ್ರಗಳು ಮನುಷ್ಯನಂತಾದ ಹೊತ್ತಿನಲ್ಲಿ ಮನುಷ್ಯನು ಯಂತ್ರದಂತೆ ಆಗದಿರಲು ಮಾಡಬೇಕಾದುದೇನು ಎಂಬುದೇ ಪ್ರಶ್ನಾರ್ಹ! ನಮ್ಮ ಪ್ರಸಕ್ತ ಜೀವನಶೈಲಿಯ ಅಶಿಸ್ತು, ಆತುರಗೇಡಿತನ ಹಲವಾರು ಅನಾಹುತಗಳನ್ನು ತಂದೊಡ್ಡುತ್ತಿವೆ. ಎಲ್ಲಿಯೂ ನಮಗಾಗಲಿ ನಮ್ಮೊಟ್ಟಿಗೆ ಹೆಜ್ಜೆ ಹಾಕುತ್ತಿರುವ ಮಕ್ಕಳಿಗಾಗಲಿ ಶ್ರದ್ಧೆ, ಸೈರಣೆಯಿಲ್ಲ, ಕಾಯುವಿಕೆ, ಮಾಗುವಿಕೆಗೆ ತಯಾರಿಲ್ಲ ಎಂಬಂತಹ ಮನಃಸ್ಥಿತಿ.


ಹೌದು, ಇದು ರೀಲ್ಸ್‌ನ ಕಾಲಘಟ್ಟ. ಕೈಲಿರುವ ಮೊಬೈಲ್ ಫೋನ್ ಪರದೆಯಲ್ಲಿನ ವಿಡಿಯೊಗಳು ಕ್ಷಣಾರ್ಧದಲ್ಲಿ ಸ್ಕ್ರೋಲ್ ಆಗಿಬಿಡುತ್ತವೆ. ಮನಸ್ಸು ಬರೀ ಸೆಕೆಂಡಿನೊಳಗೆ ಕಣ್ಣೆದುರು ಕಂಡಿದ್ದನ್ನು ವೀಕ್ಷಿಸಬೇಕೋ ಬೇಡವೋ ಎಂಬುದನ್ನು ನಿರ್ಧರಿಸಿ ಮುಂದೆ ಹೋಗುತ್ತದೆ. ಚಿತ್ರ-ಸನ್ನಿವೇಶಗಳು ಚಕ್ಕನೆ ಬದಲಾಗುತ್ತಿರುತ್ತವೆ. ಕೂತು ಓದುವ, ಧ್ಯಾನಿಸುವ, ಆಸ್ವಾದಿಸುವ, ವಿಷದೀಕರಿಸುವ, ಚಿಂತಿಸುವ ವ್ಯವಧಾನವೇ ಈಗ ನಮ್ಮಲ್ಲಿ ಉಳಿದಿಲ್ಲ.

ದೀರ್ಘಾವಧಿಯ ದಣಿವಿರದ ದುಡಿತ, ಅವಿರತ ಪರಿಶ್ರಮದ ನಡುವೆ ಸಣ್ಣದೊಂದು ಬಿಡುವು, ರಂಜನೆ, ಪೇಟೆ, ಟಿ.ವಿ-ಸಿನಿಮಾ ಹೀಗಿತ್ತು ಅವತ್ತಿನ ಬದುಕು. ಈಗ ಬದಲಾಗಿದೆ. ಬಹುತೇಕ ಮನೆಮಂದಿಗೆ ಮನರಂಜನೆಯೇ ಬದುಕಾಗಿದೆ. ಇಡೀ ದಿನ ಮನೆಯೇ ಯಾವ ಮೌಲಿಕತೆ, ನೈತಿಕತೆಯನ್ನೂ ಕಲಿಸದ, ಬರೀ ದಾರಿ ತಪ್ಪಿಸುವ ಟಿ.ವಿ. ಧಾರಾವಾಹಿಗಳು, ರಿಯಾಲಿಟಿ ಷೋಗಳ ಎದುರು ಕೂತುಬಿಟ್ಟಿದೆ. ದಿನದ ಉಳಿದ ಅವಧಿಗೂ ಅದರದೇ ಮೆಲುಕು. ವಾಸ್ತವ ಜಗತ್ತಿನಿಂದ ಬಹುದೂರ. ಸುಳ್ಳು, ಕಪಟತನ, ಆಕರ್ಷಕ ಮುಖವಾಡಗಳಿಗೆ ಮಾರುಹೋಗುವ ಅಪ್ರಬುದ್ಧತೆ. ಹೀಗೆ ವಿವೇಕಹೀನರಾಗಿ ಬದುಕುವ ಮನೆಮಂದಿ ತಮ್ಮ ಕುಡಿಗಳಿಗಾಗಲಿ, ಪರಿಸರಕ್ಕಾಗಲಿ ನೈತಿಕ ಮೌಲ್ಯಗಳನ್ನು ಬೋಧಿಸಲು, ಬಿತ್ತಿ ಬೆಳೆಯಲು ಅಥವಾ ಉಳಿಸಿ ಹೋಗಲು ಸಾಧ್ಯವೇ?

ನಕಾರಾತ್ಮಕತೆಯ ನೆರಳಲ್ಲಿ ಬೆಳೆದ ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನಾಗಲಿ ತಿಳಿವಳಿಕೆಯನ್ನಾಗಲಿ ಉಂಡು ಬೆಳೆಯುವುದಕ್ಕೆ ಸಾಧ್ಯವಾಗದು. ಅದೇ ವಾತಾವರಣದಲ್ಲಿನ ಎಳೆಯ ಮನಸ್ಸುಗಳಿಗೆ ವರ್ತಮಾನದ ತಲ್ಲಣಗಳಾಗಲಿ, ಭವಿಷ್ಯದ ಭೀಕರತೆಯ ಬಗೆಗಾಗಲಿ ಅರಿವಿರುವುದಿಲ್ಲ. ಹಾಗಾಗಿ, ಇವತ್ತಿನ ತಲೆಮಾರಿಗೆ ಚರಿತ್ರೆಯ ವಿವೇಕವಾಗಲಿ, ಅಪಾರ ಓದಿನದ್ದಾಗಲಿ ಅಥವಾ ಆದರ್ಶಪುರುಷರ ಒಡನಾಟದ ಬಲವಾಗಲೀ ಇಲ್ಲ. ಜೊಳ್ಳುಕಾಳುಗಳ ಪೊಳ್ಳು ಸಂತೆಯಂತೆ. ಸುದ್ದಿ-ಸಂಗತಿಗಳನ್ನು ವಿವೇಚಿಸುವ, ಮಥಿಸುವ ವ್ಯವಧಾನವಿಲ್ಲ. ಯಾವುದೋ ದುಶ್ಚಟ, ದ್ವೇಷ, ದಾಳಿ, ಜೂಜು, ಆನ್‌ಲೈನ್ ಗೇಮು, ಪ್ರೀತಿ-ಪ್ರೇಮ ಅಂತೆಲ್ಲಾ ನಿತ್ಯವೂ ಹಾದಿತಪ್ಪುತ್ತಿದೆ ದೊಡ್ಡ ಯುವಸಮೂಹ. ಹಿಡಿದು ಕೇಳುವ ಸ್ಥಿತಿಯಲ್ಲಿ ಹಿರಿಯರೂ ಇಲ್ಲ!

ಸಮಸ್ಯೆಗಳ ಬಗ್ಗೆ ಬರಿದೇ ಹಳಹಳಿಸುವ ಬದಲು ಪರಿಹಾರದ ಕುರಿತು ಯೋಚಿಸಬೇಕು, ಯೋಜಿಸಬೇಕು. ಇಂತಹ ಕಾಲಘಟ್ಟದಲ್ಲಿ ನಮ್ಮನ್ನು ಕೈ ಹಿಡಿಯಬೇಕಾದುದು ದಾರ್ಶನಿಕರು ತೋರಿದ ವಿವೇಕದ ಮಾರ್ಗಗಳು. ಹಿರಿಯರ ನೈತಿಕ ಪ್ರಜ್ಞೆ ಮತ್ತು ಶ್ರಮದ ದುಡಿಮೆಯ ಸಭ್ಯ ಮಾರ್ಗಗಳನ್ನು ಹೊಸಪೀಳಿಗೆಗೆ ಸಕಾಲಿಕವಾಗಿ ಅರಿಯದೇ ಹೋದರೆ ಆಪತ್ತು ಕಟ್ಟಿಟ್ಟ ಬುತ್ತಿ.

ಸಮಾಜ ಪರಿವರ್ತನೆಗೆ ದಿಟ್ಟ ಹೆಜ್ಜೆ ಇಡಬೇಕೆಂದರೆ ಶಿಕ್ಷಣದ ಎಲ್ಲ ಹಂತಗಳಲ್ಲೂ ಮಾನವೀಯ ಮೌಲ್ಯಗಳು ಪ್ರಾಮುಖ್ಯ ಪಡೆಯಬೇಕು, ಸುದ್ದಿಮಾಧ್ಯಮಗಳ ಕಾರ್ಯಕ್ರಮಗಳಲ್ಲೂ ಸತ್ಸಂದೇಶಗಳು ಮನೆಮನೆಗಳನ್ನು ತಲುಪಬೇಕು. ನೈತಿಕತೆಯನ್ನು ಬಾಳುವ ದಿವ್ಯಚೈತನ್ಯವೇ ದೇವರೆಂದು ಪ್ರತಿ ಮನೆಯೂ ಮನವೂ ಪರಿಭಾವಿಸಬೇಕು. ಆ ಹಾದಿಯಲ್ಲಿ ನಾವು ವಿವೇಕಪೂರ್ಣವಾಗಿ ಗ್ರಹಿಸಬೇಕಾದ, ಪಾಲಿಸಬೇಕಾದ ಸಂಗತಿಗಳು ಹಲವು ಇವೆ. ನಮ್ಮೆಲ್ಲರ ಜೀವಚೈತನ್ಯವು ಕ್ಷುಲ್ಲಕ ರಾಜಕೀಯ, ಜಾತಿ– ಮತಗಳ ವಿಭಜನೆಯ ಭಾವೋದ್ವೇಗದಲ್ಲಿ ವ್ಯಯವಾಗದೆ, ಬಲಿಯಾಗದೆ ಪ್ರೀತಿ, ಕರುಣೆಯಿಂದ ಹೊರಹೊಮ್ಮಬೇಕು. ಶಿಕ್ಷಣವು ಸಾಂವಿಧಾನಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪ್ರತಿಫಲಿಸಬೇಕು. ಮಕ್ಕಳು ತಿಳಿಯಾದ ಆಲೋಚನೆ, ಮನದಮಾತು, ಹೃದಯದ ಮಿಡಿತದಲ್ಲಿ ಬೆಸೆದುಕೊಂಡು, ಜೀವನ ಮೌಲ್ಯಗಳಲ್ಲಿ ಒಡಮೂಡಬೇಕು.



ತಂತ್ರಜ್ಞಾನ ಯುಗವು ತಂದೊಡ್ಡುವ ಒಂಟಿತನ, ಸೋಮಾರಿತನ, ಮಿಥ್ಯ ಸುಖಗಳಲ್ಲಿ ಮೆದುಳು ಮುದುಡದೆ, ಅಂತರ್ಯದ ಅತೃಪ್ತಿ ಜ್ವಾಲೆಯು ಮಂಕಾಗದೆ ಸೃಜನಶೀಲತೆಗೆ ತೆರೆದುಕೊಳ್ಳಬೇಕು. ಶಿಷ್ಟ ಸಮಾಜವು ಗುರುತಿಸುವ 'ನೈತಿಕತೆ'ಯು ಒಳ-ಹೊರ ಸುಳಿಗಳನ್ನು ಮೀರಿ ಸ್ವಂತಿಕೆಯ ಪೂರ್ಣ ಸ್ವಾತಂತ್ರ್ಯದಲ್ಲಿ ಸಂಭ್ರಮಿಸುವಂತಾಗಬೇಕು. ಬಾಳುವೆಯ ವೈಶಾಲ್ಯವು ಸ್ವಾರ್ಥ, ಲೋಭಗಳಲ್ಲಿ ಕುರುಡಾಗದೇ ಪ್ರಕೃತಿಯ ಅದಮ್ಯ ಚೇತನದಲ್ಲಿ ಕಲೆತು ಬೆಳಗಬೇಕು. ಆ ಬೆಳಕು ಎಲ್ಲೆಡೆಯೂ ಪಸರಿಸಬೇಕು. ಚಲನಶೀಲ ಬದುಕಿನಲ್ಲಿಯೂ ಆಲಿಸುವ, ಗ್ರಹಿಸುವ, ಕಲಿಯುವ, ಧ್ಯಾನಿಸುವ ಸಂಯಮ ಮೂಡಬೇಕು, ಎಲ್ಲಕ್ಕೂ ಮಿಗಿಲಾಗಿ ಸಂವೇದನಾಶೀಲತೆ, ವಿನಯವಂತಿಕೆಯು 'ಜೀವನ ಕಲೆ' ಆಗಬೇಕು.

ಪರಸ್ಪರ ಪ್ರೀತಿ, ನಂಬುಗೆಯಲ್ಲಿ ಬಾಂಧವ್ಯಗಳನ್ನು ಬೆಸೆಯುವಷ್ಟು ನಿಸ್ವಾರ್ಥ ಬೇಕು. ಮುಗ್ಧತೆಯು ಮಾನ, ಅಪಮಾನಗಳನ್ನು ಮೀರಿ, ಹಳೆಯ ಗಾಯದ ನೋವುಗಳಿಲ್ಲದೆ ನಿರಾಳಗೊಳ್ಳಬೇಕು. ನಮ್ಮ ಆತ್ಮವನ್ನು ತಿನ್ನುವ ಮನ್ನಣೆಯ ದಾಹವನ್ನು ತೊರೆದು, ತನ್ನ ತಾನು ಬಣ್ಣಿಸ ಬಯಸದೆ, ಕೀರ್ತಿಶನಿಯನ್ನು ಆಚೆ ನೂಕಬೇಕು. ಹಾಗಾದಾಗ ಮಾನವ ಜನ್ಮ ಹಿರಿದೆನಿಸುತ್ತದೆ.

ವಾಚಕರ ವಾಣಿ

ಮೆಟ್ರೊ: ಒಗ್ಗಟ್ಟಿನಿಂದ ಮಣಿಸೋಣ

ಪ್ರಯಾಣ ದರವನ್ನು ಅಧಿಕ ಪ್ರಮಾಣದಲ್ಲಿ ಏರಿಸಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿರುವ 'ನಮ್ಮ ಮೆಟ್ರೊ', ಆ ಬಗ್ಗೆ ಜನಾಕ್ರೋಶ ವ್ಯಕ್ತವಾಗುತ್ತಿದ್ದಂತೆ ನೆಪಮಾತ್ರಕ್ಕೆ ಕೊಂಚ ದರ ಕಡಿತ ಮಾಡಿ ಮೂಗಿಗೆ ತುಪ್ಪ ಹಚ್ಚುವ ಪ್ರಯತ್ನ ಮಾಡಿದೆ. ಮೆಟ್ರೊ ಆಡಳಿತ ಮಂಡಳಿ ಹೀಗೆ ತನ್ನ ಮೂಗಿನ ನೇರಕ್ಕೆ ವರ್ತಿಸುವುದಕ್ಕೆ ಮೂಲ ಕಾರಣ ನಮ್ಮ ಪ್ರಯಾಣಿಕರಲ್ಲಿ ಒಗ್ಗಟ್ಟು ಇಲ್ಲದಿರುವುದು.

ಸಂಚಾರಕ್ಕೆ ಮೆಟ್ರೊ ಹೊರತುಪಡಿಸಿ ಬಿಎಂಟಿಸಿ ಬಸ್, ಆ್ಯಪ್ ಆಧಾರಿತ ಆಟೊ ಮತ್ತು ಕ್ಯಾಬ್ ಸೇವೆಗಳಿವೆ. ಇಷ್ಟೇ ಅಲ್ಲದೆ ಅನೇಕರಿಗೆ ಸ್ವಂತ ವಾಹನಗಳೂ ಇವೆ. ಇವುಗಳನ್ನೆಲ್ಲಾ ಬಳಸಿಕೊಂಡು ಸಂಚರಿಸಿ, ಒಂದು ವಾರ ಕಾಲ ಎಲ್ಲರೂ ಮೆಟ್ರೊ ಪ್ರಯಾಣವನ್ನು ಬಹಿಷ್ಕರಿಸಿದರೆ ತಂತಾನೇ ದರ ಇಳಿಯುತ್ತದೆ. ಈ ಒಗ್ಗಟ್ಟನ್ನು ತೋರಿಸುವ ಕಾಲ ಇದೀಗ ಬಂದಿದೆ. 'ನಮ್ಮ ಮೆಟ್ರೊ' ಎಂಬುದು ಹೆಸರಿಗಷ್ಟೇ ಇದ್ದು, ಅದು ಈಗ ನಮ್ಮದಾಗಿ ಉಳಿದಿಲ್ಲ. ಅದು 'ಅವರ ಮೆಟ್ರೊ' ಆಗಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಮಣಿಪುರ: ಪ್ರಧಾನಿ ಮಾತುಕತೆ ನಡೆಸಲಿ

ಈಶಾನ್ಯ ಭಾರತದ ಮಹತ್ವದ ರಾಜ್ಯವಾದ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸಲಾಗಿದೆ. ಅದು ಅಲ್ಲಿನ ಜನಾಂಗೀಯ ಸಂಘರ್ಷದ ಪರಿಹಾರಕ್ಕೆ ಸಹಾಯಕವೇನೂ ಆಗದು. ಚುನಾಯಿತ ಮುಖ್ಯಮಂತ್ರಿ ಇದ್ದಾಗಲೂ ಅವರು ಎಲ್ಲ ಸಮುದಾಯಗಳ ವಿಶ್ವಾಸ ಗಳಿಸುವುದರಲ್ಲಿ ವಿಫಲರಾದರು. ವಿಶೇಷವೆಂದರೆ, ಪ್ರಧಾನಮಂತ್ರಿ ಈ ಸಮಸ್ಯೆಯನ್ನು ಗೃಹ ಸಚಿವರ ಕೈಗೆ ಒಪ್ಪಿಸಿ, ತಾವು ಅಲ್ಲಿಗೆ ಭೇಟಿ ನೀಡುವುದಿರಲಿ ಆ ವಿಷಯದ ಬಗ್ಗೆ ಮಾತನ್ನೂ ಆಡಿಲ್ಲ. ಆಡಳಿತ ಪಕ್ಷದಲ್ಲಿ ಯಾವ ನಾಯಕನ ಬಳಿಯೂ ಮುಖ್ಯಮಂತ್ರಿಯಾಗಲು ಬೇಕಾದ 'ಸಂಖ್ಯೆ' ಇಲ್ಲ. ಮಿತ್ರಪಕ್ಷಗಳೂ ನಿಸ್ಸಂದಿಗ್ಧ ಬೆಂಬಲ ನೀಡುತ್ತಿಲ್ಲ.

ಸಂಸತ್ ಅಧಿವೇಶನ ಮಾರ್ಚ್ ಹತ್ತರ ನಂತರ ಪುನರಾರಂಭ ಆಗುವುದರಿಂದ ಕೇಂದ್ರ ಸರ್ಕಾರ ಒಂದಷ್ಟು ಕಾಲಾವಕಾಶ ಪಡೆಯಲು ಯತ್ನಿಸಿರಬೇಕು. ಅಮಿತ್ ಶಾ ಅವರು ತಮ್ಮ ಪ್ರಯತ್ನಗಳಲ್ಲಿ ಸಫಲರಾಗದಿರುವುದರಿಂದ ಪ್ರಧಾನಿಯೇ ಈ ಕ್ಲಿಷ್ಟ ಸಮಸ್ಯೆಯನ್ನು ಪರಿಹರಿಸಲು ಮುಂದಾಗಬೇಕು. ಮಣಿಪುರದ ವಿವಿಧ ಸಮುದಾಯಗಳು, ಸಂಘಟನೆಗಳ ಜತೆ ಅವರು ಮಾತುಕತೆ ಆರಂಭಿಸುವ ಅಗತ್ಯ ಇದೆ. ಸಮಾಜದಲ್ಲಿ ಸಾಮರಸ್ಯ ಇಲ್ಲದಿದ್ದರೆ ಯಾರು ಮುಖ್ಯಮಂತ್ರಿಯಾದರೂ ಆ ರಾಜ್ಯವನ್ನು ನಿರ್ವಹಿಸಲಾರರು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಉಚಿತ ಕೊಡುಗೆ: ಅರಿಯಬೇಕಿದೆ ದುಷ್ಪರಿಣಾಮ

ಚುನಾವಣೆ ಗೆಲ್ಲಲು ರಾಜಕೀಯ ಪಕ್ಷಗಳು ಜಿದ್ದಿಗೆ ಬಿದ್ದಂತೆ ಉಚಿತ ಕೊಡುಗೆಗಳನ್ನು ನೀಡುವುದರ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವುದು ಸಮಂಜಸವಾಗಿದೆ. ಈ ಮೊದಲು ಸಹ ಹಲವಾರು ಸಂದರ್ಭಗಳಲ್ಲಿ ಸುಪ್ರೀಂ ಕೋರ್ಟ್ ಮಾತ್ರವಲ್ಲದೆ ಆರ್‌ಬಿಐ ಕೂಡಾ ದೇಶದ ಆರ್ಥಿಕ ಸ್ಥಿತಿಯು ಉಚಿತ ಕೊಡುಗೆಗಳಿಂದ ಹದಗೆಡುತ್ತದೆ ಎಂದು ಎಚ್ಚರಿಕೆ ನೀಡಿತ್ತು. ಕೆಲವು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಚುನಾವಣೆ ಗೆಲ್ಲಲು 'ಅಮ್ಮ ಕ್ಯಾಂಟೀನ್' ಸೇವೆ, ಉಚಿತ ಟಿ.ವಿ, ಲ್ಯಾಪ್‌ಟಾಪ್‌ನಂತಹ ವಸ್ತುಗಳನ್ನು ಉಚಿತವಾಗಿ ನೀಡುವ ಪರಂಪರೆಯೊಂದು ಆರಂಭವಾಯಿತು. ಆದರೆ ಇತರ ರಾಜ್ಯಗಳಲ್ಲಿ ಇಂತಹ ಪದ್ಧತಿ ಅಷ್ಟಾಗಿ ಇರಲಿಲ್ಲ. ಆದರೆ ಯಾವಾಗ ಅರವಿಂದ ಕೇಜ್ರಿವಾಲ್ ಅವರು ಎಎಪಿ ಪಕ್ಷ ಸ್ಥಾಪಿಸಿ, ಎಲ್ಲರಿಗೂ ಉಚಿತ ವಿದ್ಯುತ್, ನೀರು, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಭರವಸೆ ನೀಡಿ ಸತತವಾಗಿ ದೆಹಲಿಯಲ್ಲಿ ಗೆದ್ದರೋ ಅಲ್ಲಿಂದ ಇತರ ರಾಜಕೀಯ ಪಕ್ಷಗಳೂ ಇದನ್ನೇ ಅನುಸರಿಸಲು ಮುಂದಾದವು.

ಕಾಂಗ್ರೆಸ್ ಪಕ್ಷವು ಕರ್ನಾಟಕ ಮತ್ತು ತೆಲಂಗಾಣದಲ್ಲಿ ಭರಪೂರ ಉಚಿತ ಕೊಡುಗೆಗಳ ಆಶ್ವಾಸನೆ ನೀಡಿ ಚುನಾವಣೆ ಗೆದ್ದಿತು. ಮೊದ ಮೊದಲು ಬಿಜೆಪಿ ಈ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಬಿಗಡಾಯಿಸುತ್ತಿದೆ ಎಂದು ಬೇರೆ ಪಕ್ಷಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿತ್ತು. ಆದರೆ ಉಚಿತ ಕೊಡುಗೆಗಳನ್ನು ನೀಡುವ ಪಕ್ಷಗಳನ್ನು ಜನ ಗೆಲ್ಲಿಸುತ್ತಿದ್ದುದನ್ನು ನೋಡಿ ಅದು ಕೂಡಾ ಅನಿವಾರ್ಯವಾಗಿ ಉಚಿತ ಕೊಡುಗೆ ನೀಡಿ ಗೆಲ್ಲುವ ದಾರಿ ಹಿಡಿಯಿತು. ಇದರಿಂದ ದೇಶದ ಆರ್ಥಿಕತೆಯ ಮೇಲಾಗುವ ದುಷ್ಪರಿಣಾಮಗಳನ್ನು ಎಲ್ಲ ರಾಜಕೀಯ ಪಕ್ಷಗಳೂ ಅರಿಯಬೇಕು. ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್‌ನ ಆತಂಕ, ಅಸಮಾಧಾನ, ಎಚ್ಚರಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಸ್ಪರ್ಧೆಗೆ ಬಿದ್ದವರಂತೆ ಬೇಕಾಬಿಟ್ಟಿಯಾಗಿ ಉಚಿತ ಕೊಡುಗೆಗಳನ್ನು ನೀಡುವುದನ್ನು ನಿಲ್ಲಿಸಬೇಕು.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

'ಇನ್ವೆಸ್ಟ್ ಕರ್ನಾಟಕ': ಕನ್ನಡಿಗರಿಗೆ ಸಿಗಲಿ ಆದ್ಯತೆ

'ಕನ್ನಡದ ಗಿಡದ ಬೇರಿಗೆ ನೀರೆರೆಯಬೇಕಿದೆ' ಎಂಬ ರೇವಣ್ಣ ಎಂ.ಜಿ. ಅವರ ಪತ್ರದಲ್ಲಿನ (ವಾ.ವಾ., ಫೆ. 13) ಅಂಶಗಳನ್ನು, ಗಿಡ ಇದ್ದಲ್ಲಿ ಬೇರೂ ಇದೆ ಎಂದು ತರ್ಕಿಸಬಹುದು. ಬೇರು ಇದ್ದಾಗ ಮಾತ್ರ ನೀರನ್ನು ಎರೆಯುವ ಯೋಚನೆ ಮಾಡಬಹುದು. ಆದರೆ, ಕರ್ನಾಟಕದಲ್ಲಿ ಸ್ಥಾಪಿತವಾಗಿರುವ ಉದ್ಯಮ ವಲಯದ ಅನೇಕ ಸಂಸ್ಥೆಗಳಲ್ಲಿ ಕನ್ನಡ ಗಿಡಗಳನ್ನು ಹುಡುಕಿಕೊಂಡು ಹೋಗಬೇಕು ಎಂಬಂತಹ ಸ್ಥಿತಿ ನಿರ್ಮಾಣವಾಗಿ ಬಹಳ ಸಮಯ ಆಗಿದೆ.


'ಇನ್ವೆಸ್ಟ್ ಕರ್ನಾಟಕ' ಎಂಬ ಅದ್ದೂರಿ ಮೇಳ ರಾಜ್ಯದ ರಾಜಧಾನಿಯಲ್ಲಿ ಸಮಾರೋಪಗೊಂಡಿದೆ. ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ಸಚಿವರಾದ ಪೀಯೂಷ್ ಗೋಯಲ್, ರಾಜನಾಥ ಸಿಂಗ್ ಅವರು ದೇಶದ ಪ್ರಗತಿಯಲ್ಲಿ ಕರ್ನಾಟಕದ ಕೊಡುಗೆಯನ್ನು ಶ್ಲಾಘಿಸಿದ್ದಾರೆ. ನಮ್ಮ ಕರ್ನಾಟಕವು ದೇಶದ ಬೆನ್ನೆಲುಬು ಎಂದು ಮುಖ್ಯಮಂತ್ರಿ ಬೀಗಿದ್ದಾರೆ. ಆದರೆ ಇಂಥ ಮಾತುಗಳಿಂದ ನಾವು ಉಬ್ಬಬಹುದು ಅಷ್ಟೆ. ಇನ್ವೆಸ್ಟ್ ಕರ್ನಾಟಕದಲ್ಲಿ ಈಗಾಗಲೇ ಲಕ್ಷಾಂತರ ಕೋಟಿ ರೂಪಾಯಿ ಹೂಡಿಕೆಯ ಪ್ರಸ್ತಾವಗಳು ಬಂದಿವೆ. ಇದರಿಂದ ಕನ್ನಡಿಗರಿಗೆ ದೊರಕುವ ಉದ್ಯೋಗ ಅವಕಾಶ ಎಷ್ಟು, ರಾಜ್ಯದ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಇರತಕ್ಕದ್ದು ಎಂಬುದನ್ನು ರಾಜ್ಯ ಸರ್ಕಾರವು ಹೂಡಿಕೆ ಸಂಸ್ಥೆಗಳಿಗೆ ಮನಗಾಣಿಸಿದೆಯೇ, ಹೂಡಿಕೆ ಸಂಸ್ಥೆಗಳ ಸಹಮತ ಇದೆಯೇ ಎಂಬ ಪ್ರಶ್ನೆಗಳು ಪ್ರಸ್ತುತವಾಗುತ್ತವೆ. ಏಕೆಂದರೆ ಕನ್ನಡಿಗರನ್ನು ಕಡೆಗಣಿಸಿದ ಕರ್ನಾಟಕದ ಪ್ರಗತಿಗೆ ಅರ್ಥ ಇದೆಯೇ? ನಮ್ಮ ಗಿಡಗಳ ಬೇರಿಗೆ ನೀರೆರೆಯದೆ ಬೇರೆಯವರ ಗಿಡಗಳಿಗೆ ನೀರುಣಿಸುವುದರಲ್ಲಿ ಅರ್ಥವೂ ಇಲ್ಲ, ನಮಗೆ ಪ್ರಯೋಜನವೂ ಇಲ್ಲ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಉಚಿತ ಕೊಡುಗೆಗಳಿಂದ ಪರಾವಲಂಬಿಗಳ ವರ್ಗ ಸೃಷ್ಟಿ: ಸುಪ್ರೀಂ ಕೋರ್ಟ್ ಹೇಳಿಕೆ ಕುರಿತು ಎರಡು ಪ್ರತಿಕ್ರಿಯೆಗಳು

‘ಸುಪ್ರೀಂ’ ಕೇಳದ ಪ್ರಶ್ನೆಗಳು



ಎಲ್ಲರಿಗೂ ಭೂಮಿ, ಬಂಡವಾಳ ಹಂಚಿ ಕೃಷಿ, ವ್ಯಾಪಾರ, ಉದ್ದಿಮೆಗಳನ್ನು ನಡೆಸುವಂತೆ ಮಾಡುವುದು ಕಷ್ಟದ ಕೆಲಸ. ಭೂಮಿ, ಬಂಡವಾಳ ಇಲ್ಲದವರು ಭೂಮಿ, ಬಂಡವಾಳ ಇದ್ದವರಲ್ಲಿ ದುಡಿದು ಗಳಿಸುವ ಮೂಲಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬಹುದು. ಇದು ಸಾಧ್ಯವಾಗಬೇಕಾದರೆ ಶಿಕ್ಷಣ, ಆರೋಗ್ಯ ಬೇಕು. ಇವನ್ನು ಕೊಡಲು ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ

ಪ್ರಜಾವಾಣಿ ಚರ್ಚೆ

• ಎಂ. ಚಂದ್ರ ಪೂಜಾರಿ

ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಸವಲತ್ತುಗಳನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಇಂತಹ ಸವಲತ್ತುಗಳನ್ನು ಉಚಿತವಾಗಿ ನೀಡುವುದರಿಂದ ಅಭಿವೃದ್ಧಿಗೆ ಅಡ್ಡಿಯಾಗುವುದಿಲ್ಲವೇ? ಜನರು ಸೋಮಾರಿಗಳಾಗುವುದಿಲ್ಲವೇ? ಪರಾವಲಂಬಿಗಳಾಗುವುದಿಲ್ಲವೇ? ಇಂತಹ ಉಚಿತ ಸವಲತ್ತುಗಳನ್ನು ನೀಡುವ ಬದಲು ಜನರನ್ನು ಮುಖ್ಯವಾಹಿನಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವಂತೆ ಮಾಡುವುದು ಉತ್ತಮವಲ್ಲವೇ? ಇತ್ಯಾದಿ ಪ್ರಶ್ನೆಗಳನ್ನು ಸುಪ್ರೀಂ ಕೋರ್ಟ್ ಎತ್ತಿದೆ. ಸವಲತ್ತುಗಳು ಉಚಿತವೇ, ಸೋಮಾರಿಗಳನ್ನು ಸೃಷ್ಟಿಸುವುದಿಲ್ಲವೇ ಎನ್ನುವ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೂ ಸುಪ್ರೀಂ ಕೋರ್ಟ್ ಎತ್ತಿರುವ ಕೊನೇ ಪ್ರಶ್ನೆಯನ್ನು ಅಲ್ಲಗಳೆಯುವಂತಿಲ್ಲ.

‘ಸುಪ್ರೀಂ’ ಪ್ರಶ್ನೆಗೆ ಉತ್ತರಿಸುವ ಮುನ್ನ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕಾಗಿದೆ. ಅದೇನೆಂದರೆ, ಯಾವ ಸವಲತ್ತನ್ನು, ಯಾರಿಗೆ, ಎಷ್ಟು ಪ್ರಮಾಣದಲ್ಲಿ, ಹೇಗೆ ಕೊಡಬೇಕು ಇತ್ಯಾದಿ ಪ್ರಶ್ನೆಗಳು ಪ್ರಜಾಪ್ರಭುತ್ವದಲ್ಲಿ ಜನರು ಮತ್ತು ಪಕ್ಷಗಳಿಗೆ ಸಂಬಂಧಿಸಿದ ವಿಷಯಗಳು. ಅಷ್ಟು ಮಾತ್ರವಲ್ಲ; ಜನರು/ಪಕ್ಷಗಳು ‘ಉಚಿತ’ ಸವಲತ್ತುಗಳನ್ನು ಒಪ್ಪಿಕೊಂಡಿದ್ದಾರೆ. ನ್ಯಾಯಾಧೀಶರಿಗೆ ಅಥವಾ ಆರ್ಥಿಕ ಚಿಂತಕರಿಗೆ ಪಕ್ಷ/ಜನರ ನಿರ್ಣಯಗಳು ಸರಿ ಕಾಣದಿರಬಹುದು. ಹಾಗೆಂದು ಜನರು/ಪಕ್ಷಗಳ ಪರವಾಗಿ ಇತರರು ನಿರ್ಣಯ ತಳೆಯಲಾಗುವುದಿಲ್ಲ. ಪಕ್ಷ/ಜನರು ಇಂತಹ ನಿರ್ಣಯಕ್ಕೆ ಏಕೆ ಬರುತ್ತಿದ್ದಾರೆ ಎನ್ನುವುದನ್ನು ಮೊದಲು ಅರ್ಥ ಮಾಡಿಕೊಂಡು ನಂತರ ಇತರರು ಪರಿಹಾರ ಸೂಚಿಸಬೇಕೆಂದು ವಾದಿಸುವ ಲೇಖನ ಇದು.

ಸಂವಿಧಾನ ಮತ್ತು ಅಭಿವೃದ್ಧಿ ಎರಡರ ಉದ್ದೇಶ ಕೂಡ, ಸಮಾಜದ ಎಲ್ಲರನ್ನೂ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವಂತೆ ಮಾಡುವುದೇ ಆಗಿದೆ. ಆದರೆ, ಆರ್ಥಿಕ ಪ್ರಗತಿಗೆ ಮಹತ್ವ ನೀಡುವ ಇಂದಿನ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುಗೊಳ್ಳಬೇಕಾದರೆ ವ್ಯಕ್ತಿಗೆ ಒಂದೋ ಭೂಮಿ ಬೇಕು, ಇಲ್ಲವೇ ಬಂಡವಾಳ ಬೇಕು. ಇವೆರಡು ಇಲ್ಲವಾದರೆ ಕನಿಷ್ಠ ಶಿಕ್ಷಣ, ಆರೋಗ್ಯ ಆದರೂ ಬೇಕು. ಇವನ್ನು ಅಭಿವೃದ್ಧಿಯಲ್ಲಿ ಪಾಲುಗೊಳ್ಳಲು ಅವಶ್ಯವಿರುವ ಆರ್ಥಿಕ ಸಾಮರ್ಥ್ಯಗಳೆಂದು ಪರಿಗಣಿಸಲಾಗಿದೆ. ಆದರೆ, ಇಂದಿನ ಸರ್ಕಾರಗಳು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವ ಜನರ ಸಾಮರ್ಥ್ಯದ ಪ್ರಶ್ನೆಗಳನ್ನು ಬದಿಗೆ ಸರಿಸಿ ತಾವು ಜಾರಿಗೆ ತರುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಪ್ರಚಾರ ನೀಡುತ್ತಿವೆ. ಉದಾಹರಣೆಗೆ, ಕೃಷಿ ಅಭಿವೃದ್ಧಿಗೆ ಸರ್ಕಾರ ಮಾಡುವ ನೀರಾವರಿ ವ್ಯವಸ್ಥೆ ಬಗ್ಗೆ, ಕಡಿಮೆ ಬಡ್ಡಿಗೆ ನೀಡುವ ಸಾಲದ ಬಗ್ಗೆ, ಪೂರೈಕೆ ಮಾಡುವ ರಸಗೊಬ್ಬರದ ಬಗ್ಗೆ ಪ್ರಚಾರ ಇದೆ. ಆದರೆ, ಇವೆಲ್ಲದರ ಅನುಕೂಲ ಪಡೆಯಬೇಕಾದರೆ ಭೂಮಿ ಬೇಕು ಎನ್ನುವುದರ ಬಗ್ಗೆ ಎಲ್ಲೂ ಪ್ರಚಾರ ಇಲ್ಲ. ಇದರಿಂದಾಗಿ ದೊಡ್ಡ ಪ್ರಮಾಣದ ತೆರಿಗೆ ಹಣ ಭೂಮಿ ಇದ್ದವರ ಪಾಲಾಗುವುದು ಸಾರ್ವಜನಿಕರ ಗಮನಕ್ಕೆ ಬರುವುದಿಲ್ಲ. ಸುಪ್ರೀಂ ಕೋರ್ಟ್ ಕೂಡ ಇದನ್ನು ಪ್ರಶ್ನಿಸಿಲ್ಲ.

ವ್ಯಾಪಾರ, ಉದ್ದಿಮೆಗಳ ಅಭಿವೃದ್ಧಿಗೆ ಸರ್ಕಾರ ಕಡಿಮೆ ಬಡ್ಡಿಗೆ ನೀಡುವ ಸಾಲ, ಸಾಲ ಕಟ್ಟದಿದ್ದರೆ ಮಾಡುವ ಸಾಲ ಮನ್ನಾ, ಕಡಿಮೆ ಬೆಲೆಗೆ ಭೂಮಿ, ನೀರು, ಕಚ್ಚಾ ಸಾಮಗ್ರಿಗಳನ್ನು ಪೂರೈಕೆ ಮಾಡುವುದರ ಬಗ್ಗೆ ಪ್ರಚಾರ ಇದೆ. ಸರ್ಕಾರ ನೀಡುವ ಸವಲತ್ತುಗಳ ಲಾಭ ಪಡೆಯಬೇಕಾದರೆ ಬಂಡವಾಳ ಹೂಡುವ ಸಾಮರ್ಥ್ಯ ಬೇಕು ಎನ್ನುವುದು ಚರ್ಚೆಯಾಗುತ್ತಿಲ್ಲ. ಈ ಸಾಮರ್ಥ್ಯ ಕೆಲವರಲ್ಲೇ ಕ್ರೋಡೀಕರಣಗೊಂಡಿದೆ. ಇದೇ ಕಾರಣದಿಂದ ಸಾರ್ವಜನಿಕರ ತೆರಿಗೆ ಹಣದ ಹೆಚ್ಚಿನ ಲಾಭವನ್ನು ಕೆಲವರೇ ಪಡೆಯುತ್ತಿದ್ದಾರೆ. ಇದು ಕೂಡ ಸಾರ್ವಜನಿಕ ಚರ್ಚೆಯ ವಿಷಯವಾಗಿಲ್ಲ. ಸುಪ್ರೀಂ ಕೋರ್ಟ್ ಕೂಡ ಇದನ್ನು ಪ್ರಶ್ನಿಸಿಲ್ಲ.

ಎಲ್ಲರಿಗೂ ಭೂಮಿ, ಬಂಡವಾಳ ಹಂಚಿ ಕೃಷಿ, ವ್ಯಾಪಾರ, ಉದ್ದಿಮೆಗಳನ್ನು ನಡೆಸುವಂತೆ ಮಾಡುವುದು ಕಷ್ಟದ ಕೆಲಸ. ಭೂಮಿ, ಬಂಡವಾಳ ಇಲ್ಲದವರು ಭೂಮಿ, ಬಂಡವಾಳ ಇದ್ದವರಲ್ಲಿ ದುಡಿದು ಗಳಿಸುವ ಮೂಲಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬಹುದು. ಇದು ಸಾಧ್ಯವಾಗಬೇಕಾದರೆ ಶಿಕ್ಷಣ, ಆರೋಗ್ಯ ಬೇಕು. ಇವನ್ನು ಕೊಡಲು ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ. ಇದರಿಂದಾಗಿ ಕೆಲವೇ ಸಾವಿರ ರೂಪಾಯಿ ದುಡಿಯುವವರು ಕೂಡ ತಾವು ದುಡಿದ ಬಹುಪಾಲನ್ನು ಶಿಕ್ಷಣ, ಆರೋಗ್ಯದ ಮೇಲೆ ಖರ್ಚು ಮಾಡುವ ಸ್ಥಿತಿ ಇದೆ.

ಸಮಾಜದ ಎಲ್ಲರೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕಾದರೆ ಮೇಲಿನ ಆರ್ಥಿಕ ಸಾಮರ್ಥ್ಯಗಳ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಸಾಮರ್ಥ್ಯಗಳೂ ಬೇಕು. ಜಾತಿ, ಲಿಂಗ, ಧರ್ಮ ಇವೆಲ್ಲವೂ ನಮ್ಮಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯಕ್ತಿಯ ದುಡಿದು ಗಳಿಸುವ ಸಾಮರ್ಥ್ಯವನ್ನು ಪ್ರಭಾವಿಸುತ್ತಿವೆ. ನಮ್ಮಲ್ಲಿ ಉಡುಪಿ ಬ್ರಾಹ್ಮಣರ ಹೋಟೆಲ್, ಕಾಮತ್ ಕೆಫೆ, ಲಿಂಗಾಯತರ ಖಾನಾವಳಿ, ಒಕ್ಕಲಿಗರ ರಾಗಿ ಮುದ್ದೆ ಹೋಟೆಲ್ ಎಂದು ಬೋರ್ಡ್ ಹಾಕಿ ವ್ಯಾಪಾರ ಮಾಡುವುದನ್ನು ನೋಡಲು ಸಾಧ್ಯ. ಆದರೆ, ಇವತ್ತು ಕೂಡ– ಹಳ್ಳಿಯಿಂದ ದಿಲ್ಲಿಯ ತನಕ– ದಲಿತರ ಹೋಟೆಲ್ ಎನ್ನುವ ಬೋರ್ಡ್ ಹಾಕಿ ವ್ಯಾಪಾರ ಮಾಡಲು ಸಾಧ್ಯವೇ? ದಲಿತರ ಅಭಿವೃದ್ಧಿಯನ್ನು ಅಸ್ಪೃಶ್ಯತೆ ಕಾಡಿದಂತೆ ಅಭಿವೃದ್ಧಿಯಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆಯನ್ನು ಲಿಂಗ ತಾರತಮ್ಯ ವಿಧವಿಧವಾಗಿ ಕಾಡುತ್ತಿದೆ. ಅವರು ತೊಡಗಿಸಿಕೊಳ್ಳಬಹುದಾದ ಉದ್ಯೋಗಗಳನ್ನು, ಕೆಲಸದ ಅವಧಿಯನ್ನು, ಸಂಬಳ ಇತ್ಯಾದಿಗಳನ್ನು ಲಿಂಗ ತಾರತಮ್ಯ ಗಣನೀಯವಾಗಿ ಪ್ರಭಾವಿಸುತ್ತಿದೆ. ಇವೆಲ್ಲವನ್ನು ನಿಷೇಧಿಸುವ ಕಾಯ್ದೆಗಳಿವೆ. ಆದರೆ, ಸಾಮಾಜಿಕ ಒಪ್ಪಿಗೆ ಇಲ್ಲದೇ ಅವೆಲ್ಲವೂ ಉದ್ದೇಶಿತ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ.

ಬಲಾಢ್ಯ ಪಕ್ಷ ದೇಶವ್ಯಾಪಿ ನಡೆಸುತ್ತಿರುವ ಕೋಮು ರಾಜಕೀಯವು ಅಲ್ಪಸಂಖ್ಯಾತರ, ಅದರಲ್ಲೂ ಮುಸ್ಲಿಮರ ಬದುಕನ್ನು ನರಕಸದೃಶಗೊಳಿಸಿದೆ. ಕೋಮು ರಾಜಕೀಯ ಮುಸ್ಲಿಮರ ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲವನ್ನೂ ಪ್ರಭಾವಿಸುತ್ತಿದೆ. ಇಂದು ಕಾರುಬಾರು ಮಾಡುತ್ತಿರುವ ಸಾಂಸ್ಕೃತಿಕ ರಾಜಕೀಯ ಜನರ ಊಟ ಉಪಚಾರ, ದೇವರು ದಿಂಡರು, ಪ್ರೀತಿ ಪ್ರೇಮಗಳ ಸುತ್ತಾ ಇದೆ. ಇದು ತಳಸ್ತರದವರ ಸಾಂಸ್ಕೃತಿಕ ನಿಕೃಷ್ಟೀಕರಣಕ್ಕೆ ಮತ್ತು ಮೇಲಿನವರ ಅಹಂಗೆ ಎಡೆಮಾಡಿಕೊಡುತ್ತಿದೆ. ಇಂತಹ ಸಾಂಸ್ಕೃತಿಕ ರಾಜಕೀಯ ವೈಜ್ಞಾನಿಕ ಮನೋಭಾವದ ಬೆಳವಣಿಗೆಗೆ ಅಡ್ಡಿಯಾಗಿದೆ. ವೈಜ್ಞಾನಿಕ ಮನೋಭಾವದ ಕೊರತೆ ಅಸಮಾನತೆಯನ್ನು ಒಪ್ಪುವ, ಅನ್ಯಾಯಗಳನ್ನು ಸಹಿಸುವ ಗುಣವನ್ನು ಬೆಳೆಸುತ್ತಿದೆ. ಇವೆಲ್ಲವೂ ಜನಸಾಮಾನ್ಯರ ಅಭಿವೃದ್ಧಿ ಪಾಲುಗೊಳ್ಳುವಿಕೆಯನ್ನು ಪ್ರಭಾವಿಸುತ್ತಿವೆ.

ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳುವ ಜನರ ಸಾಮರ್ಥ್ಯ ವೃದ್ಧಿಸದೆ ಅಭಿವೃದ್ಧಿ ಮೇಲೆ ಸರ್ಕಾರ ಮಾಡುವ ಕೋಟಿ ಗಟ್ಟಲೆ ತೆರಿಗೆ ಹಣ ನಮ್ಮ ಸಮಾಜದ ಕೆಲವರಲ್ಲೇ ಕ್ರೋಡೀಕರಣಗೊಳ್ಳುತ್ತಿದೆ. ಇಂತಹ ಆರ್ಥಿಕ, ಸಾಮಾಜಿಕ ನೀತಿಗಳು ಹಾಗೂ ಅಧಿಕಾರದಲ್ಲಿರುವ ಪಕ್ಷದ ಸಾಂಸ್ಕೃತಿಕ ರಾಜಕೀಯ ಪರಾವಲಂಬಿಗಳನ್ನು ಉತ್ಪಾದಕರಂತೆ ಮತ್ತು ಉತ್ಪಾದಕರನ್ನು ಪರಾವಲಂಬಿಗಳಂತೆ ಬಿಂಬಿಸುತ್ತಿದೆ. ಮೇಲ್ನೋಟಕ್ಕೆ ಕಾಣುವ ಈ ಚಿತ್ರಣವನ್ನೇ ಸತ್ಯವೆಂದು ಬಗೆದು ಸುಪ್ರಿಂ ಕೋರ್ಟ್ ಬಡವರಿಗೆ ನೀಡುವ ಅಲ್ಪಸ್ವಲ್ಪ ಸವಲತ್ತುಗಳನ್ನು ಪ್ರಶ್ನಿಸುತ್ತಿದೆ. ಎಲ್ಲರೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕೆನ್ನುವುದೇ ‘ಸುಪ್ರಿಂ’ನ ನಿಜವಾದ ಉದ್ದೇಶವಾಗಿದ್ದರೆ, ಅದು ಕೇಳಬೇಕಾದ ಪ್ರಶ್ನೆಗಳೇ ಬೇರೆ ಇವೆ. ಎಲ್ಲರಿಗೂ ಶಿಕ್ಷಣ, ಆರೋಗ್ಯವನ್ನು ಸರ್ಕಾರವೇ ಏಕೆ ಕೊಡಬಾರದು? ಬೃಹತ್ ಕೃಷಿ, ವ್ಯಾಪಾರ, ಉದ್ದಿಮೆಗಳ ಅಭಿವೃದ್ಧಿಗೆ ಸರ್ಕಾರ ಮಾಡುವ ಬೃಹತ್ ವಿನಿಯೋಜನೆ ಮತ್ತು ಉದ್ಯೋಗ ಸೃಷ್ಟಿ ನಡುವೆ ಸಂಬಂಧ ಏಕಿಲ್ಲ? ತಳಸ್ತರದ ಜನರ ಬದುಕನ್ನು ಇಂದು ಕೂಡ ಲಿಂಗ, ಜಾತಿ, ಧರ್ಮಗಳು ಏಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಭಾವಿಸುತ್ತಿವೆ? ತಳಸ್ತರದ ಜನರಲ್ಲಿ ಸಾಂಸ್ಕೃತಿಕ ಕೀಳರಿಮೆ ಸೃಷ್ಟಿಸುವ ಹಾಗು ಮೌಢ್ಯವನ್ನು ಬೆಳೆಸುವ ಸಾಂಸ್ಕೃತಿಕ ರಾಜಕೀಯವನ್ನು ಏಕೆ ನಿಷೇಧಿಸಬಾರದು? ಒಂದು ವೇಳೆ ಈ ಎಲ್ಲ ಪ್ರಶ್ನೆಗಳನ್ನು ‘ಸುಪ್ರೀಂ’ ಹಿಂದೆಯೇ ಕೇಳಿದ್ದರೆ ಇವತ್ತು ‘ಉಚಿತ’ ಸವಲತ್ತುಗಳನ್ನು ಪ್ರಶ್ನಿಸುವ ಸಂದರ್ಭವೇ ಹುಟ್ಟುತ್ತಿರಲಿಲ್ಲ.

ಲೇಖಕ: ಹಂಪಿ ಕನ್ನಡ ವಿವಿಯ ನಿವೃತ್ತ ಪ್ರಾಧ್ಯಾಪಕ

ಹಕ್ಕು ದಕ್ಕಿಸಿದ ‘ಗ್ಯಾರಂಟಿ’



ಎಲ್ಲಿಯವರೆಗೆ ಬದುಕುವ ಮೂಲಭೂತ ಹಕ್ಕು ಸರ್ವರಿಗೂ ದೊರಕುವುದಿಲ್ಲವೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಆದರೂ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿ ಇರಲೇಬೇಕಾಗುತ್ತದೆ. ಇನ್ನೊಂದೆಡೆ ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಆರ್ಥಿಕವಾಗಿ ಹೊರೆ ಎನಿಸಬಹುದು. ಆದರೆ, ಅಭಿವೃದ್ಧಿ ಎಂದರೆ ಜನರ ಘನತೆಯ ಬದುಕಿನ ಅಭಿವೃದ್ಧಿಯೂ ಹೌದು ಎನ್ನುವುದನ್ನು ನಾವು ಅರಿತುಕೊಳ್ಳಬೇಕು



• ನಾಗೇಗೌಡ ಕೆ.ಎಸ್

ಕಳೆದ ಒಂದಷ್ಟು ವರ್ಷಗಳಿಂದ ಸುಪ್ರೀಂ ಕೋರ್ಟ್ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಸಂವಿಧಾನದ ವ್ಯಾಖ್ಯಾನ ಮಾಡುತ್ತಿದೆ. ಇಂತಹ ಹೊತ್ತಿನಲ್ಲೇ ದೇಶದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಅವರು ಫೆ. 12ರಂದು ‘ಉಚಿತ ಯೋಜನೆಗಳು ಜನರನ್ನು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಲು ಉತ್ತೇಜಿಸುವ ಬದಲು ಪರಾವಲಂಬಿಗಳಾಗಿಸುತ್ತಿಲ್ಲವೆ’ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಉಚಿತ ಯೋಜನೆಗಳು ಜನರನ್ನು ಪರಾವಲಂಬಿಗಳಾಗಿಸುತ್ತಿವೆಯೇ, ಇಲ್ಲವೇ ಎನ್ನುವುದನ್ನು ವಿವೇಚಿಸುವುದು ಈ ಹೊತ್ತಿನ ತುರ್ತಾಗಿದೆ.

ಸಂವಿಧಾನದ 21ನೇ ವಿಧಿ ಈ ದೇಶದ ಪ್ರತಿಯೊಬ್ಬರಿಗೂ ಬದುಕುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ನೀಡಿದೆ. ಸಂವಿಧಾನದ ಪ್ರಕಾರ ‘ಬದುಕುವ ಹಕ್ಕು’ ಎಂದರೆ ದುಡಿಯುವ ಹಕ್ಕು, ಸಮಾನ ವೇತನ, ಘನತೆಯಿಂದ ಕೆಲಸ ಮಾಡುವ ವಾತಾವರಣ, ವ್ಯಕ್ತಿತ್ವ ವಿಕಸನ, ಕೆಲಸದಿಂದ ಸಿಗಬೇಕಾದ ಸ್ವಯಂ ಸಂತೃಪ್ತಿ ಎಂದು ಸರಳವಾಗಿ ಅರ್ಥೈಸಬಹುದು. ಸಂವಿಧಾನದ 21ನೇ ವಿಧಿಯ ಹಿನ್ನೆಲೆಯಲ್ಲಿ ನಮ್ಮ ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಒಮ್ಮೆ ಗಮನಿಸಿದರೆ, ದೇಶದ ಶೇಕಡ 90ರಷ್ಟು ಜನಸಂಖ್ಯೆಯ ಬದುಕುವ ಹಕ್ಕನ್ನು ಕಸಿದುಕೊಳ್ಳಲಾಗಿದೆ ಎನ್ನುವ ಅಂಶ ಮನದಟ್ಟಾಗುತ್ತದೆ. ಚುನಾವಣಾ ರಾಜಕಾರಣಗಳನ್ನು ಬದಿಗಿಟ್ಟು ಗ್ಯಾರಂಟಿ ಯೋಜನೆಗಳ ಕುರಿತು ಅವಲೋಕಿಸುವುದಾದರೆ, ಈ ಯೋಜನೆಗಳು ದೇಶದ ಶೇ 90ರಷ್ಟು ಜನರಿಗೆ ಬದುಕುವ ಹಕ್ಕನ್ನು ತಾತ್ಕಾಲಿಕವಾಗಿ ಯಾದರೂ ಒದಗಿಸುತ್ತಿವೆ ಎನ್ನುವ ವಾದವನ್ನು ಮುಂದಿಡಬಹುದು. ಹಾಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಗುರಿಯನ್ನಾಗಿ ಹೊಂದಿರುವ ಯೋಜನೆಗಳನ್ನು ‘ಉಚಿತ ಯೋಜನೆಗಳು’ ಎಂದು ಸರ್ಕಾರ ಹಾಗೂ ನಾಗರಿಕರು ಕರೆಯುತ್ತಿರುವುದರಲ್ಲೇ ತಾತ್ವಿಕವಾದ ಸಮಸ್ಯೆಯಿದೆ ಎನಿಸುತ್ತಿದೆ.

ಭಾರತದಲ್ಲಿ ಶೇ 40ರಷ್ಟು ಸಂಪತ್ತು ಶೇ 1ರಷ್ಟು ಜನರ ಬಳಿಯಿದ್ದರೆ, ಶೇ 50ರಷ್ಟು ಜನಸಂಖ್ಯೆಯ ಒಟ್ಟು ಸಂಪತ್ತು ಶೇ 3ರಷ್ಟು ಮಾತ್ರ. ಅನಾರೋಗ್ಯದ ಕಾರಣದಿಂದ ಪ್ರತಿವರ್ಷ ಅಂದಾಜು 6.3 ಕೋಟಿಯಷ್ಟು ಜನರ ಬದುಕು ಬಡತನ ರೇಖೆಗಿಂತಲೂ ಕೆಳಮಟ್ಟಕ್ಕೆ ಕುಸಿಯುತ್ತಿದೆ. ಈ ಮಟ್ಟದ ಆರ್ಥಿಕ ಅಸಮಾನತೆಯಿರುವ ನಮ್ಮ ದೇಶದಲ್ಲಿ ಸಂವಿಧಾನದ 21ನೇ ವಿಧಿ ಪ್ರಕಾರ ಪ್ರತಿಯೊಬ್ಬರಿಗೂ ಸಮಾನ ದುಡಿಯುವ ಅವಕಾಶ ಸಿಗಲು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ಎಲ್ಲರೂ ಕೇಳಿಕೊಳ್ಳಬೇಕಾಗಿದೆ.

ಭಾರತದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜೀವಿತಾವಧಿ ಇತರೆ ಸಮುದಾಯಗಳ ಜೀವಿತಾವಧಿಗಿಂತ ಸುಮಾರು 4ರಿಂದ 6 ವರ್ಷಗಳಷ್ಟು ಕಡಿಮೆ ಇದ್ದು, ಶೇ 6ರಷ್ಟು ವಯಸ್ಕರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಅಂದಾಜು ಶೇ 60ರಷ್ಟು ಮಹಿಳೆಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಪ್ರಕಟಿಸಿರುವ ‘State of Working India Report– 2023’ರ ವರದಿಯ ಪ್ರಕಾರ, 1980ರ ದಶಕದಲ್ಲಿ ಪರಿಶಿಷ್ಟ ಪಂಗಡಗಳ ಸಮುದಾಯದ ಮಹಿಳೆಯರ ಕೆಲಸದಲ್ಲಿ ಭಾಗವಹಿಸುವಿಕೆಯ ದರ (ಡಬ್ಲ್ಯುಪಿಆರ್) ಶೇ 52 ಇತ್ತು. ಅದು 2020ರಲ್ಲಿ ಶೇ 39.1ಕ್ಕೆ ಕುಸಿದಿದೆ. ಇದೇ ರೀತಿಯಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯರ ಡಬ್ಲ್ಯುಪಿಆರ್ ಶೇ 35.6ರಿಂದ ಶೇ 26.3ಕ್ಕೆ ಇಳಿಮುಖವಾಗಿದ್ದರೆ, ಹಿಂದುಳಿದ ಸಮುದಾಯದ ಮಹಿಳೆಯರ ಡಬ್ಲ್ಯುಪಿಆರ್ ಶೇ 34.4 ಇದ್ದದ್ದು ಶೇ 25.2ಕ್ಕೆ ಇಳಿದಿದೆ. ಮುಸ್ಲಿಂ ಸಮುದಾಯದ ಮಹಿಳೆಯರ ಡಬ್ಲ್ಯುಪಿಆರ್ ಶೇ 16.6ರಿಂದ 16.3ಕ್ಕೆ ಇಳಿದಿದೆ.

ಇಪ್ಪತ್ತೈದು ವರ್ಷದೊಳಗಿನ ಶೇ 42ರಷ್ಟು ಪದವೀಧರರು ಈ ದೇಶದಲ್ಲಿ ನಿರುದ್ಯೋಗಿಗಳಿದ್ದಾರೆ. ನರೇಗಾ ಮತ್ತು ಪಡಿತರ ವ್ಯವಸ್ಥೆ ಶೇ 50ಕ್ಕಿಂತ ಹೆಚ್ಚಿನ ಜನರನ್ನು ಬಡತನ ರೇಖೆಗಿಂತ ಕೆಳಗೆ ಹೋಗದಂತೆ ತಡೆದು ನಿಲ್ಲಿಸಿದೆ. ಒಂದು ವೇಳೆ ಈ ಎರಡು ಯೋಜನೆಗಳನ್ನು ನಿಲ್ಲಿಸಿದರೆ ರಾತ್ರೋರಾತ್ರಿ ಶೇ 50ರಷ್ಟು ಜನಸಂಖ್ಯೆ ಬಡತನ ರೇಖೆಗಿಂತ ಕೆಳಗೆ ತಳ್ಳಲ್ಪಡುತ್ತದೆ. ಈ ಅಂಕಿಅಂಶಗಳನ್ನು ಒಮ್ಮೆ ಸಾವಧಾನವಾಗಿ ಗಮನಿಸಿದರೆ ದೇಶದ ಶೇ 90ರಷ್ಟು ಮಂದಿಯನ್ನು ಹೇಗೆ ಅವರ ಮೂಲಭೂತವಾದ ಬದುಕುವ ಹಕ್ಕಿನಿಂದ ವಂಚಿಸಲಾಗುತ್ತಿದೆ ಎನ್ನುವುದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾ. ಬಿ.ಆರ್.ಗವಾಯಿ ಅವರು ಉಚಿತ ಯೋಜನೆಗಳ ಫಲಾನುಭವಿಗಳನ್ನು ‘ಪರಾವಲಂಬಿಗಳು’ ಎಂದಿರುವುದು ಈ ದೇಶದಲ್ಲಿ ನೈಜ ಪರಾವಲಂಬಿಗಳು ಯಾರು ಎಂಬುದರ ಕುರಿತು ನಮ್ಮನ್ನು ವಿಶ್ಲೇಷಣೆಗೆ ಒಡ್ಡುತ್ತದೆ.

ಹತ್ತು ವರ್ಷಗಳಲ್ಲಿ ಈ ದೇಶದ ಬಂಡವಾಳಶಾಹಿಗಳ ಸುಮಾರು ₹15 ಲಕ್ಷ ಕೋಟಿಗಳಷ್ಟು ಸಾಲವನ್ನು ಮನ್ನಾ ಮಾಡಲಾಗಿದೆ. ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಶೇ 30ರಿಂದ ಶೇ 22ಕ್ಕೆ ಇಳಿಸಲಾಗಿದೆ. ಇದರಿಂದಾಗಿ ಒಕ್ಕೂಟ ಸರ್ಕಾರದ ಖಜಾನೆಗೆ ಅಂದಾಜು ₹1 ಲಕ್ಷ ಕೋಟಿಗಿಂತಲೂ ಅಧಿಕ ಖೋತಾ ಆಗುತ್ತಿದೆ. ವಾಸ್ತವದಲ್ಲಿ ಕಾರ್ಪೊರೇಟ್ ಕಂಪನಿಗಳು ದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡಲಿ ಎನ್ನುವ ಕಾರಣಕ್ಕಾಗಿ ಈ ರೀತಿಯ ತೆರಿಗೆ ವಿನಾಯಿತಿಯನ್ನು ನೀಡಲಾಯಿತು. ಆದರೆ, ಪ್ರಸ್ತುತ ‘ದೇಶದ ಅಭಿವೃದ್ಧಿ’ ಎಂದರೆ ಅದು ‘ನಿರುದ್ಯೋಗದ ಅಭಿವೃದ್ಧಿ’ ಎನ್ನುವಂತಾಗಿದೆ ಎನ್ನುವುದು ಅನೇಕ ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ. ತೆರಿಗೆ ವಿನಾಯಿತಿ ಪಡೆದ ಕಾರ್ಪೊರೇಟ್ ಕಂಪನಿಗಳು ದೇಶದ ಅಭಿವೃದ್ಧಿ ಮಾಡದೇ ವೈಯಕ್ತಿಕ ಅಭಿವೃದ್ಧಿಯ ಜೊತೆಗೆ ಸಾಲ ಮನ್ನಾದಂತಹ ವಿಶೇಷ ಸವಲತ್ತುಗಳನ್ನು ಪಡೆದುಕೊಂಡ ಕಾರಣ ಭಾರತದಲ್ಲಿ ಸುಮಾರು ನೂರಕ್ಕೂ ಹೆಚ್ಚು ಶತಕೋಟ್ಯಧಿಪತಿಗಳ ಸೃಷ್ಟಿಯಾಯಿತು. ಈ ಆಧಾರದಲ್ಲಿ ಪರಾವಲಂಬಿಗಳು ಶೇ 1ರಷ್ಟಿರುವ ಜನಸಂಖ್ಯೆಯೋ ಅಥವಾ ಉಚಿತ ಯೋಜನೆಗಳ ಫಲಾನುಭವಿಗಳಾದ ಶೇ 90ರಷ್ಟಿರುವ ಜನಸಂಖ್ಯೆಯೋ ಎನ್ನುವುದನ್ನು ವಿವೇಚಿಸಬೇಕಿದೆ. ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಇಲ್ಲಿನ ಬಹುದೊಡ್ಡ ವರ್ಗದ ದುಡಿಯುವ ಹಕ್ಕನ್ನೇ ಕಸಿದುಕೊಳ್ಳುವುದರ ಮೂಲಕ ಪ್ರಜೆಗಳ ಮೂಲಭೂತ ಬದುಕುವ ಹಕ್ಕಿಗೇ ಧಕ್ಕೆ ಉಂಟಾಗಿದೆ. ಒಂದು ವೇಳೆ ಈ ಬಹುಸಂಖ್ಯಾತ ದುಡಿಯುವ ವರ್ಗ, ‘ತಮ್ಮ ಘನತೆಯ ಬದುಕಿಗೆ ಪೂರಕವಾದ ದುಡಿಯುವ ಅವಕಾಶ ಮತ್ತು ವಾತಾವರಣವನ್ನು ಸೃಷ್ಟಿಸದ ಸರ್ಕಾರಗಳು ನಮಗೇಕೆ ಬೇಕು’ ಎನ್ನುವ ತಾತ್ವಿಕ ಪ್ರಶ್ನೆಯನ್ನು ಕೇಳಿಕೊಂಡರೆ ಎಂತಹ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗಬಲ್ಲದು ಎನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ.

ಮೇಲಿನ ಎಲ್ಲಾ ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕರ್ನಾಟಕದ ಗ್ಯಾರಂಟಿ ಯೋಜನೆಗಳ ವಿಚಾರಕ್ಕೆ ಬರುವುದಾದರೆ, ಕಳೆದ ಸಾಲಿನ ಕರ್ನಾಟಕ ಸರ್ಕಾರದ ಬಜೆಟ್ ಗಾತ್ರ ₹3.71 ಲಕ್ಷ ಕೋಟಿ. ಇದರಲ್ಲಿ ₹1.20 ಲಕ್ಷ ಕೋಟಿಯನ್ನು ಕಲ್ಯಾಣ ಯೋಜನೆಗಳಿಗೆ ಕಾಯ್ದಿರಿಸಲಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಒದಗಿಸಿದ ₹52 ಸಾವಿರ ಕೋಟಿ ಮೇಲೆ ಹೇಳಿದ ₹1.20 ಲಕ್ಷ ಕೋಟಿಯ ಒಳಗೆ ಸೇರಿದೆ. ಇದರರ್ಥ ಬಜೆಟ್‌ನ ಶೇ 32.4ರಷ್ಟು ಹಣವನ್ನು ರಾಜ್ಯ ಸರ್ಕಾರ ಕಲ್ಯಾಣ ಯೋಜನೆಗಳಿಗಾಗಿ ವಿನಿಯೋಗ ಮಾಡುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ₹50 ಸಾವಿರದಿಂದ ₹55 ಸಾವಿರದವರೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದೊರಕುತ್ತಿದೆ. ಅಂದರೆ, ತಿಂಗಳಿಗೆ ಅಂದಾಜು ₹4,000ದಿಂದ ₹4,500 ದೊರಕುತ್ತಿದೆ. ಶೇ 90ರಷ್ಟಿರುವ ದುಡಿಯುವ ವರ್ಗದ ಅಭಿವೃದ್ಧಿಗೆ ಗ್ಯಾರಂಟಿ ಯೋಜನೆಗಳನ್ನೂ ಒಳಗೊಂಡಂತೆ ವಿನಿಯೋಗ ಮಾಡುತ್ತಿರುವುದು ಬಜೆಟ್‌ನ ಶೇ 10ರಿಂದ ಶೇ 30ರಷ್ಟು ಮಾತ್ರ. ಮಾನವ ಸಂಪನ್ಮೂಲ ಅಭಿವೃದ್ಧಿ ಕೂಡ ಅಭಿವೃದ್ಧಿಯೇ ಆಗಿರುವುದರಿಂದ ದೇಶದ ಬಹುಸಂಖ್ಯೆಯ ದುಡಿಯುವ ವರ್ಗ ಅಭಿವೃದ್ಧಿ ಹೊಂದಿದರೆ ಇದೇ ವರ್ಗ ಭವಿಷ್ಯದಲ್ಲಿ ನೂರಾರು ಲಕ್ಷ ಕೋಟಿ ರೂಪಾಯಿಗಳ ಭೌತಿಕ ಅಭಿವೃದ್ಧಿಯನ್ನು ಸೃಷ್ಟಿ ಮಾಡಬಲ್ಲದು.

ಎಲ್ಲಿಯವರೆಗೆ ಬದುಕುವ ಮೂಲಭೂತ ಹಕ್ಕು ಸರ್ವರಿಗೂ ದೊರಕುವುದಿಲ್ಲವೋ ಅಲ್ಲಿಯವರೆಗೆ ತಾತ್ಕಾಲಿಕವಾಗಿಯಾದರೂ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿ ಇರಲೇಬೇಕಾಗುತ್ತದೆ. ಇನ್ನೊಂದೆಡೆ ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಆರ್ಥಿಕವಾಗಿ ಹೊರೆ ಎನಿಸಬಹುದು. ಆದರೆ ಅಭಿವೃದ್ಧಿ ಎಂದರೆ ಜನರ ಘನತೆಯ ಬದುಕಿನ ಅಭಿವೃದ್ಧಿಯೂ ಹೌದು ಎನ್ನುವುದನ್ನು ನಾವು ಅರಿತುಕೊಂಡಾಗ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ‘ಪರಾವಲಂಬಿಗಳಲ್ಲ’; ಬದಲಾಗಿ ಅವರೆಲ್ಲರೂ ತಮ್ಮ ಸಾಂವಿಧಾನಿಕ ‘ಬದುಕುವ ಹಕ್ಕನ್ನು’ ಪಡೆಯುತ್ತಿದ್ದಾರೆ ಎನ್ನುವುದು ಮನದಟ್ಟಾಗುತ್ತದೆ.

ಲೇಖಕ: ಪಿಇಎಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ

ನಾವು ನೋಡಿದ ಸಿನಿಮಾ

ಸಿದ್ಧಸೂತ್ರದಲ್ಲಿ ಅನಾವರಣಗೊಳ್ಳುವ ರಾಜು

ರಾಜು ಜೇಮ್ಸ್ ಬಾಂಡ್ (ಕನ್ನಡ)

- **ನಿರ್ಮಾಣ:** ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಭರ್ತೂರ್
- **ನಿರ್ದೇಶನ:** ದೀಪಕ್ ಮಧುವನಹಳ್ಳಿ
- **ತಾರಾಗಣ:** ಗುರುನಂದನ್, ಮೃದುಲ, ಅಚ್ಯುತ್ ಕುಮಾರ್, ಚಿಕ್ಕಣ್ಣ, ರವಿಶಂಕರ್, ಜೈಜಗದೀಶ್ ಮತ್ತಿತರರು

‘ಫಸ್ಟ್ ರ‍್ಯಾಂಕ್ ರಾಜು’ ಸಿನಿಮಾದಲ್ಲಿ ‘ಮುಗ್ಧ ರಾಜು’ವಾಗಿ ಕಾಣಿಸಿಕೊಂಡಿದ್ದ ಗುರುನಂದನ್ ನಾಯಕನಾಗಿ ನಟಿಸಿರುವ ಸಿನಿಮಾವಿದು. ಇಲ್ಲಿ ರಾಜು ಸಾಲ ಹಾಗೂ ಪ್ರೀತಿಯ ಸುಳಿಯಲ್ಲಿ ಸಿಲುಕಿದ್ದಾನೆ. ಈ ಅಂಶಗಳ ಸುತ್ತವೇ ಸಿನಿಮಾ ಕಥೆಯಿದ್ದು, ಸಿದ್ಧಸೂತ್ರವನ್ನಿಟ್ಟುಕೊಂಡೇ ನಿರ್ದೇಶಕರು ಈ ಸಿನಿಮಾ ಹೆಣೆದಿದ್ದಾರೆ.

ಬಡ ಹುಡುಗನೊಬ್ಬ ಮಧ್ಯಮ ವರ್ಗದ ಹುಡುಗಿಯನ್ನು ಪ್ರೀತಿಸುವ, ಅದನ್ನು ಹುಡುಗಿಯ ಮನೆಯವರು ವಿರೋಧಿಸುವ, ಇದರಿಂದ ದುಃಖತಪ್ತನಾದ ಹುಡುಗ ಕುಡಿಯುತ್ತಾ ಪ್ಯಾಥೋ ಹಾಡು ಹಾಡುವ, ಆಗ ಬಾರಲ್ಲೊಂದು ಫೈಟು... ಇಂತಹ ಸಿದ್ಧಸೂತ್ರದಲ್ಲಿ ಬಂದಿರುವ ಹಲವು ಸಿನಿಮಾಗಳ ಪಟ್ಟಿಗೆ ಈ ಸಿನಿಮಾ ಹೊಸ ಸೇರ್ಪಡೆ. ಸಿನಿಮಾದ ದ್ವಿತೀಯಾರ್ಧದಲ್ಲಿ ನಿರ್ದೇಶಕರು ಕಥೆಗೆ ತಿರುವು ನೀಡಿದ್ದರೂ, ಅದನ್ನು ಇನ್ನಷ್ಟು ಕುತೂಹಲಕಾರಿಯಾಗಿ ತೆರೆಗೆ ತರಬಹುದಿತ್ತು.

ರಾಜು(ಗುರುನಂದನ್) ಪೇಟೆಯೊಂದರಲ್ಲಿ ತನ್ನ ಮಾವನ(ಅಚ್ಯುತ್ ಕುಮಾರ್) ಜೊತೆ ಎಲೆಕ್ಟ್ರಿಕಲ್ಸ್ ಅಂಗಡಿಯಲ್ಲಿ ಕೆಲಸ ಮಾಡುವಾತ. ಈತನ ಅಪ್ಪ–ಅಮ್ಮ ಸತ್ತುಹೋಗಿದ್ದಾರೆ. ಸಾಲ ಕಟ್ಟಿಲ್ಲ ಎಂಬ ಕಾರಣಕ್ಕೆ ಅವರಿದ್ದ ಮನೆಯನ್ನು ಬ್ಯಾಂಕ್ ಜಪ್ತಿ ಮಾಡಲು ಸಿದ್ಧವಾಗಿದೆ. ಬ್ಯಾಂಕ್ ಪರೀಕ್ಷೆಗೆ ಸಿದ್ಧನಾಗುತ್ತಿರುವ ರಾಜುಗೆ ಬ್ಯಾಂಕ್ ಮ್ಯಾನೇಜರ್ ಆಗುವ ಇಚ್ಛೆ. ಊರಿನ ಹುಡುಗಿಯೊಬ್ಬಳ ಮೇಲೆ ಈತನಿಗೆ ಪ್ರೀತಿ. ಆ ಪ್ರೀತಿಗೆ ಹುಡುಗಿ ಮನೆಯವರು ವಿರೋಧಿಸುತ್ತಾರೆ. ಸಾಲ ತೀರಿಸಿ ಅಮ್ಮನ ಕನಸಿನ ಮನೆಯನ್ನು ಉಳಿಸಿಕೊಳ್ಳಲು ರಾಜು ಹೆಣೆಯುವ ತಂತ್ರವೇ ಚಿತ್ರದ ಕಥೆ.

ಸಿದ್ಧಸೂತ್ರದ ಮೊದಲಾರ್ಧದ ಚಿತ್ರಕಥೆ ಪೇಲವವಾಗಿದೆ. ಒಟ್ಟಾರೆ ಸಿನಿಮಾದಲ್ಲಿ ಚಿತ್ರಕಥೆಯನ್ನು ಇನ್ನಷ್ಟು ಸೂಕ್ಷ್ಮವಾಗಿ ಹೆಣೆಯಬಹುದಾಗಿತ್ತು. ಜೇಮ್ಸ್ ಬಾಂಡ್ ಎನ್ನುವುದು ಶೀರ್ಷಿಕೆಗಷ್ಟೇ ಸೀಮಿತ. ಇಲ್ಲಿ ನಾಯಕನ ಬುದ್ಧಿವಂತಿಕೆಗಷ್ಟೇ ಕೆಲಸ. ನಗಿಸುವ ಜವಾಬ್ದಾರಿ ಚಿಕ್ಕಣ್ಣ ಹಾಗೂ ಸಾಧು ಕೋಕಿಲ ಅವರ ಪಾತ್ರಗಳ ಮೇಲೆ ಹೆಚ್ಚಿದೆ. ಆ ಪಾತ್ರಗಳ ಬರವಣಿಗೆ ಹಾಗೂ ಸಂಭಾಷಣೆ ಮೇಲೆ ಮತ್ತಷ್ಟು ಒತ್ತು ನೀಡಬೇಕಿತ್ತು. ‘ಕಬಾಲಿ’ ಸ್ಟೈಲ್‌ನಲ್ಲಿ ಸಾಧು ಕೋಕಿಲ ಅವರ ‘ತೆನಾಲಿ’ ಪಾತ್ರ ತೆರೆ ಪ್ರವೇಶಿಸಿದರೂ ಮುಂದಿನ ದೃಶ್ಯಗಳಲ್ಲಿ ಬರವಣಿಗೆಯ ಕೊರತೆಯಿಂದ ಸಪ್ಪೆಯಾಗುತ್ತಾ ಸಾಗಿದೆ. ಚಿಕ್ಕಣ್ಣ ತಮ್ಮ ಹಾವಭಾವದಿಂದ ನಗಿಸುತ್ತಾರೆ. ಗುರುನಂದನ್, ಮೃದುಲ ಹಾಗೂ ಅಚ್ಯುತ್ ಕುಮಾರ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ದ್ವಿತೀಯಾರ್ಧದಲ್ಲಿ ತೆರೆ ಪ್ರವೇಶಿಸುವ ರವಿಶಂಕರ್ ತಮ್ಮ ಭಿನ್ನವಾದ ಧ್ವನಿ ಹಾಗೂ ನಟನೆಯಿಂದ ಸೆಳೆಯುತ್ತಾರೆ. ಹಲವು ದೃಶ್ಯಗಳಲ್ಲಿ ಲಾಜಿಕ್ ಹುಡುಕಲು ಹೋಗಬಾರದು.

‘ಕಣ್ಮಣಿ..’ ಹಾಡು ಮತ್ತೆ ಮತ್ತೆ ಗುನುಗುವಂತಿದೆ. ಹಾಡುಗಳ ಛಾಯಾಚಿತ್ರಗ್ರಹಣ ಚೆನ್ನಾಗಿದೆ. ಹಿನ್ನೆಲೆ ಸಂಗೀತದ ಬಗ್ಗೆ ಇನ್ನಷ್ಟು ಗಮನಹರಿಸಬಹುದಿತ್ತು. ಚಿತ್ರದ ಸೀಕ್ವೆಲ್ ಬಗ್ಗೆಯೂ ಕ್ಲೈಮ್ಯಾಕ್ಸ್‌ನಲ್ಲಿ ಸುಳಿವು ನೀಡಲಾಗಿದೆ.

ಅಭಿಲಾಷ್ ಪಿ.ಎಸ್.



ಗುರುನಂದನ್

ಪದಬಂಧ 5954


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪರಲೋಕಕ್ಕೆ ಸಂಬಂಧಿಸಿದ್ದು (4)
3.ಸಿಂಗರಿಸಿದುದನ್ನು ಹೀಗೆನ್ನಿ (4)
5.ಬಿಸಿಲು ಬಿದ್ದಾಗ ಕಾಣಿಸಿದ್ದು ಸಣ್ಣ ಕೊಂಬೆ (3)
7.ಗಾರುಡಿಗ ಎರಚಿದ ಕೆಸರು (2)
8.ಆದರ ತೋರಿಸಿ ಹೇಳಿದ ಬೆಲೆ! (2)
10.ಪಾಪ ಮಾಡಿದವನು ಇಲ್ಲಿದ್ದಾನೆ (3)
11.ಪಥದಲ್ಲಿ ಸಾಗುವಾಗ ಮಾಡಿದ ಪ್ರತಿಜ್ಞೆ (3)
13.ಪುಢಾರಿ ಜೊತೆಯಲ್ಲಿರುವ ಶತ್ರು (2)
15.ಈತ ಸ್ನೇಹಿತ (2)
16.ಆನೆಯನ್ನು ಹತೋಟಿಯಲ್ಲಿಡಲು ಬಳಸುವಸಾಧನ (3)
18.ಗಳಿಕೆ ಕೊನೆಗಿದ್ದರೂ ಸಿಕ್ಕಿರುವ ನಿಂದೆ! (4)
19.ಈತ ಸೂರ್ಯನ ಮಗ (4)

ಮೇಲಿಂದ ಕೆಳಕ್ಕೆ

1.ಭಾರತೀಯ ವೈದ್ಯಶಾಸ್ತ್ರ (4)
2.ಕಟಕಟೆಯಲ್ಲಿ ನಿಂತಿರುವವಳ ಸೊಂಟ (2)
3.ಮುಂದೆ ಸಾಗಲು ಮಾಡಿದ ದಾರಿಯಲ್ಲಿರುವ ಪಂಕ್ತಿ (2)
4.ವಸ್ತುಗಳನ್ನು ತೂಗುವ ಸಾಧನ (3)
6.ಮರಳಿರುವ ತೀರ (3)
7.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9.ಪುಸ್ತಕದ ಮೇಲು ಹೊದಿಕೆ (4)
12.ತಪರಾಕು ಸಿಕ್ಕ ಮೇಲೆ ಈ ಹೊಗಳಿಕೆಯೇ? (3)
14.ಪುರಕ್ಕೆ ಬಂದಿರುವವನು ಗೌರವಿಸಲ್ಪಟ್ಟ ವ್ಯಕ್ತಿ (4)
15.ಶಿವನ ಕುದುರೆ ಇಲ್ಲಿಗೆ ಬಂದಿದೆ (3)
16.ಶಂಕೆಯುಳ್ಳವ ಹಾಕಿದ ಕಡಿವಾಣ (2)
17.ಶರಧಿಯಲ್ಲಿ ಬಿದ್ದಿರುವ ಬಾಣ (2)



5953ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕ್ಕಸಾಲಿ 3.ಅಭಿಜಾತ
6.ಹೆಸರು 8.ಪಲ್ಲವಿ
10.ಮರುಕ 11.ಲೋಕಕಲ್ಯಾಣ
12.ಗುಲಾಮ 13.ಕಡಸು
15.ಪಣತಿ 18.ಹಿತಶತ್ರು
19.ಅನುಲೇಪ

ಮೇಲಿಂದ ಕೆಳಕ್ಕೆ:
1.ಅಪರೂಪ 2.ಸಾಣೆ
4.ಭಿಡೆ 5.ತಲೆಹೋಕ
7.ಸಮೀಕರಣ 9.ವಿಲೋಮ
10.ಮಣಕ 12.ಗುಣಾಗ್ರಹಿ
14.ಸುರಚಾಪ 16.ಪಾಶ
17.ಗೂನು

ಸುಡೊಕು 6339

8				1				
		9		5		7		3
	1				3		2	
	4					8		
3			8		1			2
1	9			2				7
	8						7	
2		4	9		7	1		6
	5			3				


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6338 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 15, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣತೃತೀಯ ಗಂ. 23-53 ನಕ್ಷತ್ರ: ಉತ್ತರಫಲ್ಗುನಿ ಗಂ. 25-40 ಯೋಗ: ಸುಕರ್ಮ ಗಂ. 07-33 ಕರಣ: ವಣಿಜ ಗಂ. 10-50, ಕುಂಭ ಮಾಸದ 03 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-57 ಸೂರ್ಯಾಸ್ತ : 06-33
ಮುಸ್ಲಿಂ ದಿನಾಂಕ : 16 ಶಬನ್
ಅದೃಷ್ಟ ಸಂಖ್ಯೆ : 5, 3

ಮೇಷ: ಕೈತಪ್ಪಿ ಹೋದ ಕಾರ್ಯಗಳಿಂದ ಆಗುವ ಲಾಭ ನಷ್ಟದ ಮೌಲ್ಯಮಾಪನ ಮಾಡುತ್ತ ಸುಮ್ಮನೆ ಕೂರುವುದರಲ್ಲಿ ಪ್ರಯೋಜನ ಇಲ್ಲ. ಪತ್ರಕರ್ತರಿಗೆ ಭಯ ಮೂಡುವ ಪ್ರಸಂಗ ನಡೆಯಬಹುದು.

ವೃಷಭ: ಮನೆಯ ವಿಸ್ತರಣೆ ವಿಷಯವಾಗಿ ಆಲೋಚನೆಗಳು ಗರಿಗೆದರಲಿವೆ. ಯಾವುದಕ್ಕೂ ಕಳವಳ ಬೇಡ. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ. ಶಿಕ್ಷಣ ನಿಲ್ಲಿಸಿದವರಿಗೆ ಮುಂದುವರಿಸಲು ಸಹಾಯ ದೊರಕುವುದು.

ಮಿಥುನ: ಕಾರ್ಯಕ್ಷೇತ್ರದಲ್ಲಿ ಉಂಟಾದ ಸನ್ನಿವೇಶವನ್ನು ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವುದು ಒಳ್ಳೆಯದು. ವೈಯಕ್ತಿಕವಾಗಿ ನಿಯಮ, ನಿಷ್ಠೆಯಿಂದಿರುವುದು ಉತ್ತಮ. ಅಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹೊರಳುವುದು.

ಕರ್ಕಾಟಕ: ಜೀವನದಲ್ಲಿ ಆಶಾದಾಯಕವಾದ ಭಾವನೆಗಳಿಂದ ನೆಮ್ಮದಿಯಾಗಲಿದೆ. ದೃಷ್ಟಿದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿಮಾಡಿ. ಸಗಟು ವ್ಯಾಪಾರಿಗಳಿಗೆ ಸಣ್ಣ ಸಮಸ್ಯೆ ಎದುರಾಗಬಹುದು.

ಸಿಂಹ: ಒಡಹುಟ್ಟಿದವರ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನ ಇರುವುದು. ಕುಲದೇವರ ದರ್ಶನ ಅಥವಾ ಕ್ಷೇತ್ರಕ್ಕೆ ಕಾಣಿಕೆ ಕಳುಹಿಸಿದ ನಂತರ ಪ್ರಾರಂಭಿಸಿ.

ಕನ್ಯಾ: ಬಹುನಿರೀಕ್ಷಿತ ಫಲಿತಾಂಶ, ಯಶಸ್ಸು ಹಾಗೂ ಹೆಸರು ಒಲಿದು ಬರುತ್ತದೆ. ದೊಡ್ಡ ವಿರಾಮದ ನಂತರ ಮತ್ತೆ ನೃತ್ಯಾಭ್ಯಾಸ ಮುಂದುವರಿಸುವಂತೆ ಮನೆಯವರಿಂದ ಒತ್ತಾಯ ಹೆಚ್ಚಲಿದೆ.

ತುಲಾ: ವಿಷಯಗಳಲ್ಲೂ ಸ್ವಾಭಾವಿಕ ಗುಣಕ್ಕಿಂತ ಸಮಾಧಾನದಿಂದಿರುವುದು ಉತ್ತಮ. ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆಯಾಗಬಹುದು. ವಾತಾವರಣವು ಸಂತಸದಾಯಕವಾಗಿರುತ್ತದೆ.

ವೃಶ್ಚಿಕ: ಪರಿಶ್ರಮಕ್ಕೆ ತಕ್ಕಂಥ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ಅನುಭವ ಕಡಿಮೆ ಇರುವ ವಿಚಾರದಲ್ಲಿ ಸಮಾಲೋಚನೆ ಒಳ್ಳೆಯದು.

ಧನು: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವುದು. ಸತ್ಯ ಸಂಗತಿಗಳು ತಿಳಿಯುವುದರಿಂದ ದುಃಖಗಳು ದೂರಾಗಲಿವೆ. ಯಾರಿಂದಲೂ ಧನ ಸಹಾಯ ಅಪೇಕ್ಷಿಸಬೇಡಿ.

ಮಕರ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿವೆ. ಗುತ್ತಿಗೆದಾರರಿಗೆ ಕಾರ್ಯಭಾರ ಪ್ರಾರಂಭವಾಗುವುದು. ವ್ಯವಹಾರದ ವಿಚಾರದಲ್ಲಿ ಅನುಭವ ಬೇಕಾಗುವುದು.

ಕುಂಭ: ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು. ದಂತ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಸೋದರರೊಂದಿಗಿರುವ ವಿರಸ ಕಡಿಮೆ ಮಾಡಿಕೊಳ್ಳಿ.

ಮೀನ: ಸೋಮಾರಿತನವು ದೂರವಾಗಿ ಕೈಹಿಡಿದ ಕಾರ್ಯ ಅಂತಿಮ ಹಂತವನ್ನು ತಲುಪಲಿದೆ. ಬಯಕೆಗಳು ಸುಲಭವಾಗಿ ಈಡೇರುವುದು. ಸಕಾರಾತ್ಮಕ ನಡವಳಿಕೆಗಳಿಂದ ಲಾಭ ಕಂಡುಕೊಳ್ಳಲಿದ್ದೀರಿ.

ಬೆಳ್ಳಿ ಧಾರಣೆ ಕೆ.ಜಿಗೆ ₹1 ಲಕ್ಷ: ನಾಲ್ಕು ತಿಂಗಳ ಗರಿಷ್ಠ

₹89 ಸಾವಿರ ದಾಟಿದ ಚಿನ್ನದ ದರ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಧಾರಣೆಯ ನಾಗಾಲೋಟ ಮುಂದುವರಿದಿದೆ. ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,300 ಹೆಚ್ಚಳವಾಗಿ, ₹89,400 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹89,000 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2 ಸಾವಿರ ಏರಿಕೆಯಾಗಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟವಾದ ₹1 ಲಕ್ಷಕ್ಕೆ ತಲುಪಿದೆ.

ಡಾಲರ್ ಸೂಚ್ಯಂಕ ಇಳಿಕೆ ಹಾಗೂ ಅಮೆರಿಕದ ಸುಂಕ ನೀತಿಯಿಂದಾಗಿ ಹಳದಿ ಲೋಹದ ಬೆಲೆ ಏರಿಕೆಯಾಗುತ್ತಿದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಜತೀನ್ ತ್ರಿವೇದಿ ಹೇಳಿದ್ದಾರೆ.

ಅಮೆರಿಕದ ಚಿಲ್ಲರೆ ಮಾರಾಟದ ದತ್ತಾಂಶ ವರದಿ ಬಿಡುಗಡೆಯಾಗಿದೆ. ಇದು ಚಿನ್ನ ದರದ ಮೇಲೆ ಮತ್ತಷ್ಟು ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ಅಮೆರಿಕದ ಸರಕುಗಳ ಮೇಲೆ ಚೀನಾ, ಭಾರತ ಸೇರಿ ಹಲವು ರಾಷ್ಟ್ರಗಳು ಹೆಚ್ಚಿನ ಸುಂಕ ವಿಧಿಸುತ್ತಿವೆ. ಇದಕ್ಕೆ ಪ್ರತಿಯಾಗಿ ಟ್ರಂಪ್ ಕೂಡ ಸುಂಕ ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ತಲೆದೋರಿದೆ ಎಂದು ತಜ್ಞರು ಹೇಳಿದ್ದಾರೆ.

ರೂಪಾಯಿ ಮೌಲ್ಯ 21 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 21 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯಕ್ಕೆ ಪ್ರತೀ ಡಾಲರ್ ಮೌಲ್ಯವು ₹86.71 ಆಗಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಏಪ್ರಿಲ್ 1ರಿಂದ ಸುಂಕ ಹೇರಿಕೆ ನೀತಿ ಜಾರಿಗೊಳಿಸುವುದಾಗಿ ಹೇಳಿದ್ದಾರೆ. ಇದರಿಂದ ಏರಿಕೆಯ ಹಾದಿ ಹಿಡಿದಿದ್ದ ಡಾಲರ್‌ಗೆ ತಾತ್ಕಾಲಿಕ ಹಿನ್ನಡೆಯಾಗಿದೆ. ಅಮೆರಿಕದ ಜೊತೆಗೆ ವ್ಯಾಪಾರ ಪಾಲುದಾರಿಕೆ ಹೊಂದಿರುವ ರಾಷ್ಟ್ರಗಳಿಗೆ ಕೊಂಚ ನಿರಾಳತೆ ಸಿಕ್ಕಿದೆ ಎಂದು ತಜ್ಞರು ಹೇಳಿದ್ದಾರೆ.

17 ವರ್ಷದ ಬಳಿಕ ಬಿಎಸ್‌ಎನ್‌ಎಲ್‌ಗೆ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಭಾರತ ಸಂಚಾರ ನಿಗಮ ನಿಯಮಿತವು (ಬಿಎಸ್‌ಎನ್‌ಎಲ್) ₹262 ಕೋಟಿ ನಿವ್ವಳ ಲಾಭಗಳಿಸಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಶುಕ್ರವಾರ ತಿಳಿಸಿದ್ದಾರೆ.

ನಷ್ಟದ ಹಾದಿಯಲ್ಲಿದ್ದ ಸಂಸ್ಥೆಯು 17 ವರ್ಷಗಳ ಬಳಿಕ ಲಾಭದ ಹಳಿಗೆ ಮರಳಿದೆ. ಇದರಿಂದ ತನ್ನ ಸೇವೆಯ ವಿಸ್ತರಣೆ ಮತ್ತು ಚಂದಾದಾರರ ಸಂಖ್ಯೆ ಹೆಚ್ಚಳಕ್ಕೆ ನೆರವಾಗಲಿದೆ. ಸರ್ಕಾರ ಕೈಗೊಂಡಿರುವ ಕ್ರಮಗಳು ಫಲ ನೀಡಿವೆ ಎಂದು ಹೇಳಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಬಿಎಸ್‌ಎನ್‌ಎಲ್ ಬಳಕೆದಾರರ ಸಂಖ್ಯೆ 8.4 ಕೋಟಿ ಇತ್ತು. ಡಿಸೆಂಬರ್ ತ್ರೈಮಾಸಿಕದಲ್ಲಿ 9 ಕೋಟಿಗೆ ಮುಟ್ಟಿದೆ. ಮೊಬಿಲಿಟಿ ಸೇವೆ, ಎಫ್‌ಟಿಟಿಎಚ್ (ಫೈಬರ್ ಟು ದಿ ಹೋಮ್) ಮತ್ತು ಲೀಸ್ಡ್ ಲೈನ್ ಸೇವಾ ವಿಭಾಗದಲ್ಲಿ ಶೇ 14ರಿಂದ ಶೇ 18ರಷ್ಟು ಬೆಳವಣಿಗೆಯಾಗಿದೆ ಎಂದು ವಿವರಿಸಿದ್ದಾರೆ.

‘2007ರಲ್ಲಿ ಲಾಭ ಗಳಿಸಿತ್ತು. ಆ ನಂತರದ ವರ್ಷಗಳಲ್ಲಿ ನಷ್ಟದಲ್ಲಿಯೇ ಮುಳುಗಿತ್ತು’ ಎಂದು ಹೇಳಿದ್ದಾರೆ. ಮೊಬಿಲಿಟಿ ಸೇವೆ ಶೇ 15, ಎಫ್‌ಟಿಟಿಎಚ್ ಶೇ 18 ಹಾಗೂ ಲೀಸ್ಡ್ ಲೈನ್ ಸೇವಾ ವಿಭಾಗದಲ್ಲಿ ಶೇ 14ರಷ್ಟು ಲಾಭಗಳಿಸಿದೆ ಎಂದು ತಿಳಿಸಿದ್ದಾರೆ.

ಹೊಸ ಅನ್ವೇಷಣೆಗೆ ಒತ್ತು ನೀಡಲಿದೆ. ನೆಟ್‌ವರ್ಕ್ ವಿಸ್ತರಣೆಗೆ ಮುಂದಾಗಿದೆ. ವೆಚ್ಚದ ಪ್ರಮಾಣ ತಗ್ಗಿಸಲು ಕ್ರಮವಹಿಸಲಾಗಿದೆ. ಗ್ರಾಹಕ ಕೇಂದ್ರಿತ ಸೇವೆಯ ಸುಧಾರಣೆಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ₹1,800 ಕೋಟಿ ನಷ್ಟ ಅನುಭವಿಸಿತ್ತು. ಹಣಕಾಸು ವೆಚ್ಚ ಸೇರಿ ಇತರೆ ವೆಚ್ಚಗಳನ್ನು ಕಡಿಮೆ ಮಾಡಲಾಗಿದೆ. ಇದು ಲಾಭ ಹೆಚ್ಚಳಕ್ಕೆ ನೆರವಾಗಿದೆ ಎಂದು ಹೇಳಿದ್ದಾರೆ.

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧರಿತ ಹಣದುಬ್ಬರವು ಜನವರಿಯಲ್ಲಿ ಶೇ 2.31ಕ್ಕೆ ಇಳಿಕೆಯಾಗಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಶೇ 2.37ರಷ್ಟಿತ್ತು. ಆಹಾರ ಪದಾರ್ಥಗಳ ಬೆಲೆಯಲ್ಲಿ ಕಡಿಮೆಯಾಗಿದೆ. ಇದು ಹಣದುಬ್ಬರ ಇಳಿಕೆಗೆ ಪ್ರಮುಖ ಕಾರಣವಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಡಿಸೆಂಬರ್‌ನಲ್ಲಿ ಆಹಾರ ಪದಾರ್ಥಗಳ ಬೆಲೆಯು ಶೇ 8.47ರಷ್ಟಿತ್ತು. ಜನವರಿಯಲ್ಲಿ ಶೇ 5.88ಕ್ಕೆ ಇಳಿದಿದೆ. ತರಕಾರಿಗಳ ಬೆಲೆಯು ಶೇ 28.65ರಿಂದ ಶೇ 8.35ಕ್ಕೆ ತಗ್ಗಿದೆ.

ಆದರೆ, ಆಲೂಗೆಡ್ಡೆ ಮತ್ತು ಈರುಳ್ಳಿ ಬೆಲೆಯು ಕ್ರಮ ವಾಗಿ ಶೇ 74.28 ಮತ್ತು ಶೇ 28.33ರಷ್ಟು ಏರಿಕೆಯಾಗಿದೆ.

ಇಂಧನ ಮತ್ತು ವಿದ್ಯುತ್ ವಲಯದ ಹಣದುಬ್ಬರ ಶೇ 2.78ರಷ್ಟಿದೆ. ತಯಾರಿಕಾ ವಲಯದ ಹಣದುಬ್ಬರವು ಶೇ 2.51ರಷ್ಟಾಗಿದೆ. ಡಿಸೆಂಬರ್‌ನಲ್ಲಿ ಶೇ 2.14ರಷ್ಟಿತ್ತು ಎಂದು ತಿಳಿಸಿದೆ. ಮೊಟ್ಟೆ, ಮಾಂಸ ಮತ್ತು ಮೀನಿನ ಬೆಲೆಯು ಶೇ 3.56ರಷ್ಟು ಕಡಿಮೆಯಾಗಿದೆ. ಟೊಮೆಟೊ ಬೆಲೆಯು ಶೇ 18.9ರಷ್ಟು ಕುಸಿದಿದೆ.

‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಗಟು ಹಣದುಬ್ಬರವು ಸರಾಸರಿ ಶೇ 2.4ರಷ್ಟಾಗಬಹುದು. 2025–26ರ ಆರ್ಥಿಕ ವರ್ಷದಲ್ಲಿ ಶೇ 3ರಷ್ಟು ದಾಖಲಾಗುವ ನಿರೀಕ್ಷೆಯಿದೆ’ ಎಂದು ಐಸಿಆರ್‌ಎ ಹಿರಿಯ ಅರ್ಥಶಾಸ್ತ್ರಜ್ಞ ರಾಹುಲ್ ಅಗರ್ವಾಲ್ ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಶಿವಮೊಗ್ಗ		ಶಿರಸಿ	
ಕೋಕ	20000-27500	ಬೆಟ್ಟೆ	41099-57200	ಬೆಟ್ಟೆ	26199-36609
ಹೊಸತು	30000-36000	ಗೊರಬಲು	15381-27699	ಬಿಳಿಗೋಟು	14599-28498
ಹಳತು	45500-49000	ರಾಶಿ	30009-51899	ಚಾಲಿ	30099-39611
ಕುಮಟ		ಸರಕು	54109-91610	ಕೆಂಪುಗೋಟು	12999-23899
ಚಾಲಿ	31869-36698	**ಸಿದ್ದಾಪುರ**		ರಾಶಿ	42109-48009
ಚಿಪ್ಪು	15069-25299	ಬಿಳಿಗೋಟು	20669-25109	**ಯಲ್ಲಾಪುರ**	
ಕೋಕ	6089-15019	ಚಾಲಿ	32109-37849	ಅಪಿ	62489-70779
ಫ್ಯಾಕ್ಟರಿ	3069-23699	ಕೋಕ	12689-21359	ಬಿಳಿಗೋಟು	12012-26899
ಹೊಸಚಾಲಿ	28810-33799	ಹೊಸಚಾಲಿ	24609-33099	ಚಾಲಿ	28205-38610
ಪುತ್ತೂರು		ಕೆಂಪುಗೋಟು	20119-21519	ಕೋಕ	4899-18899
ಕೋಕ	20500-24500	ರಾಶಿ	41889-49139	ಕೆಂಪುಗೋಟು	12899-27969
ಹೊಸತು	26000-37000	ತಟ್ಟಿಬೆಟ್ಟೆ	29099-40999	ರಾಶಿ	40000-59789
ಹಳತು	32000-49500			ತಟ್ಟಿಬೆಟ್ಟೆ	28810-39689

ಹೊಸ ಮಸೂದೆ–2025: ತೆರಿಗೆದಾರರ ಸಾಮಾನ್ಯ ಪ್ರಶ್ನೆಗಳಿಗೆ ಐ.ಟಿ ಇಲಾಖೆ ವಿವರಣೆ

ತೆರಿಗೆ ವರ್ಷ ಮರು ವ್ಯಾಖ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಮಂಡಿಸಿರುವ ಹೊಸ ಆದಾಯ ತೆರಿಗೆ ಮಸೂದೆ–2025 ತೆರಿಗೆಗೆ ಸಂಬಂಧಿಸಿದಂತೆ ತೆರಿಗೆದಾರರಲ್ಲಿ ಇದ್ದ ಹಲವು ಗೊಂದಲಗಳಿಗೆ ಪರಿಹಾರೋಪಾಯ ನೀಡಿದೆ.

ಮಸೂದೆಯಲ್ಲಿ ‘ತೆರಿಗೆ ವರ್ಷ’ ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಲಾಗಿದೆ. ಆಯಾ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆರಂಭವಾಗುವ 12 ತಿಂಗಳ ಅವಧಿ ಇದಾಗಿದೆ.

1961ರ ಆದಾಯ ತೆರಿಗೆ ಕಾಯ್ದೆ ಅಡಿ ಬಳಸಿರುವ ‘ಹಿಂದಿನ ವರ್ಷ’ ಎಂಬುದನ್ನು ಬದಲಾಯಿಸಲಾಗಿದೆ. ‘ಮೌಲ್ಯಮಾಪನ ವರ್ಷ’ದ ಪರಿಕಲ್ಪನೆಯನ್ನೂ ಕೈಬಿಡಲಾಗಿದೆ.

ವೃತ್ತಿ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ತೆರಿಗೆಯು, ಅದು ಆರಂಭಗೊಂಡ ದಿನಾಂಕದಿಂದ ಪ್ರಾರಂಭವಾಗಿ ಆಯಾ ಆರ್ಥಿಕ ವರ್ಷದ ಅಂತ್ಯಕ್ಕೆ ಅನ್ವಯಿಸಲಿದೆ. (ತೆರಿಗೆ ವರ್ಷ). ಈ ಅವಧಿಯೊಳಗಿನ ಆರ್ಥಿಕ ಚಟುವಟಿಕೆಗಳು ಮತ್ತು ಗಳಿಕೆಯ ಆಧಾರದ ಮೇಲೆ ತೆರಿಗೆದಾರರು ಆದಾಯ ತೆರಿಗೆಯನ್ನು ಪಾವತಿಸಬೇಕಿದೆ.

ಪ್ರಸ್ತುತ ಐಟಿಆರ್ ಸಲ್ಲಿಕೆಗೆ ‘ಮೌಲ್ಯಮಾಪನ ವರ್ಷ’ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ. ಇದರಡಿ ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ಆದಾಯದ ಮೇಲೆ ತೆರಿಗೆಯನ್ನು ನಿರ್ಣಯಿಸಲಾಗುತ್ತದೆ.

ಉದಾಹರಣೆಗೆ 2024-25ನೇ ಆರ್ಥಿಕ ವರ್ಷದಲ್ಲಿ (2024ರ ಏಪ್ರಿಲ್ 1ರಿಂದ 2025ರ ಮಾರ್ಚ್ 31ರ ವರೆಗೆ) ಗಳಿಸಿದ ಆದಾಯವನ್ನು 2025-26ನೇ ಮೌಲ್ಯಮಾಪನ ವರ್ಷದಲ್ಲಿ (2025ರ ಏಪ್ರಿಲ್ 1ರಿಂದ ಪ್ರಾರಂಭ) ನಿರ್ಣಯಿಸಲಾಗುತ್ತದೆ. ಇದರಿಂದ ತೆರಿಗೆದಾರರಲ್ಲಿ ನಾವು ಯಾವ ವರ್ಷದ ತೆರಿಗೆ ಪಾವತಿಸುತ್ತಿದ್ದೇವೆ ಎಂಬ ಗೊಂದಲ ಮೂಡುತ್ತಿತ್ತು. ಮಸೂದೆಯಲ್ಲಿ ‘ತೆರಿಗೆ ವರ್ಷ’ ಕುರಿತಂತೆ ಮರು ವ್ಯಾಖ್ಯಾನ ನೀಡಿರುವುದರಿಂದ ಈ ಗೊಂದಲಕ್ಕೆ ತೆರೆ ಬೀಳಲಿದೆ ಎಂದು ತೆರಿಗೆ ತಜ್ಞರು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಅನುಸರಿಸುತ್ತಿರುವ ‘ತೆರಿಗೆ ವರ್ಷ’ದ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ತೆರಿಗೆ ಚೌಕಟ್ಟಿನ ಸುಧಾರಣೆಗೆ ಒತ್ತು ನೀಡಲಾಗಿದೆ. ಮಸೂದೆ ಮಂಡನೆಯು ತೆರಿಗೆ ಬಗ್ಗೆ ಹೆಚ್ಚು ಸ್ಪಷ್ಟತೆ ಮತ್ತು ದಕ್ಷತೆ ತರುವ ಮಹತ್ವದ ಹೆಜ್ಜೆಯಾಗಿದೆ. ಇದು ಸಂಸತ್‌ನಲ್ಲಿ ಅಂಗೀಕಾರವಾದರೆ 2026ರ ಏಪ್ರಿಲ್‌ನಿಂದ ಜಾರಿಗೆ ಬರಲಿದೆ ಎಂದು ಹೇಳಿದ್ದಾರೆ.



ಹಳೆ, ಹೊಸ ತೆರಿಗೆ ಪದ್ಧತಿ ಯಥಾಸ್ಥಿತಿ

ಮಸೂದೆಯಲ್ಲಿ ಹಳೆಯ ಹಾಗೂ ಹೊಸ ತೆರಿಗೆ ಪದ್ಧತಿಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. ಈಗಾಗಲೇ, ಹಲವು ತೆರಿಗೆದಾರರು ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಮಸೂದೆಯು ಕಾಯ್ದೆಯಾಗಿ ಅನುಷ್ಠಾನಗೊಂಡಾಗ ಮತ್ತೆ ಅವರು ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವ ಅಗತ್ಯವಿಲ್ಲ. ಹಾಲಿ ಇರುವ ಕಾಯ್ದೆಯಡಿ ತೆರಿಗೆದಾರರಿಗೆ ಕಲ್ಪಿಸಿರುವ ಹಕ್ಕು ಹಾಗೂ ಕರ್ತವ್ಯಗಳು ಮುಂದುವರಿಯಲಿವೆ.

2025–26ನೇ ಸಾಲಿನ ಬಜೆಟ್‌ನಲ್ಲಿ ಹೊಸ ತೆರಿಗೆ ಪದ್ಧತಿಗೆ ಸಂಬಂಧಿಸಿದಂತೆ ತೆರಿಗೆ ಸ್ಲ್ಯಾಬ್‌ಗಳನ್ನು ಪರಿಷ್ಕರಿಸಲಾಗಿದೆ. ವೇತನದಾರ ವರ್ಗಕ್ಕೆ ಸ್ಟ್ಯಾಂಡರ್ಡ್ ಡಿಡಕ್ಷನ್ ಸೌಲಭ್ಯವಿದೆ.

ಅಲ್ಲದೆ, ಹಳೆಯ ತೆರಿಗೆ ಪದ್ಧತಿಯಡಿ ವೈಯಕ್ತಿಕ ತೆರಿಗೆದಾರರಿಗೆ ಹಲವು ತೆರಿಗೆ ವಿನಾಯಿತಿ ದೊರೆಯುತ್ತಿದೆ. ಹೊಸ ಮಸೂದೆಯಲ್ಲಿಯೂ ಇದರಲ್ಲಿ ಬದಲಾವಣೆ ಮಾಡಿಲ್ಲ.

ಮುಂಗಡ ತೆರಿಗೆ ಪರಿಷ್ಕರಿಸಿಲ್ಲ

ಸಂಬಳ ಹೊರತುಪಡಿಸಿ ಇತರೆ ಆದಾಯದ ಮೂಲ ಹೊಂದಿರುವ ವ್ಯಕ್ತಿಗಳು ಪಾವತಿಸಬೇಕಾದ ತೆರಿಗೆಗೆ ‘ಮುಂಗಡ ತೆರಿಗೆ’ ಎಂದು ಕರೆಯಲಾಗುತ್ತದೆ. ಬಾಡಿಗೆ, ಷೇರುಗಳಿಂದ ಬರುವ ಲಾಭ, ಸ್ಥಿರ ಠೇವಣಿ ಇತ್ಯಾದಿಗಳಿಗೆ ಇದು ಅನ್ವಯಿಸುತ್ತದೆ. ಆರ್ಥಿಕ ವರ್ಷದಲ್ಲಿ ತೆರಿಗೆ ಹೊಣೆಗಾರಿಕೆಯು ₹10 ಸಾವಿರ ಮೀರಿದರೆ ಈ ತೆರಿಗೆ ಅನ್ವಯವಾಗಲಿದೆ. ಯಾವ ಆರ್ಥಿಕ ವರ್ಷದಲ್ಲಿ ಆದಾಯ ಬಂದಿದೆಯೋ ಅದೇ ವರ್ಷದಲ್ಲಿ ತೆರಿಗೆ ಪಾವತಿಸಬೇಕಿದೆ.

ಮಸೂದೆಯಲ್ಲಿ ಇದಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಪರಿಷ್ಕರಿಸಿಲ್ಲ. ಆದರೆ, ಗೊಂದಲವಿದ್ದ ನಿಬಂಧನೆಗಳನ್ನು ಕೈಬಿಡಲಾಗಿದೆ.



80ಸಿ ಪುನರ್‌ರಚನೆ

ಸೆಕ್ಷನ್ 80ಸಿ ಅಡಿ ವೈಯಕ್ತಿಕ ತೆರಿಗೆದಾರರಿಗೆ ಪಿಪಿಎಫ್, ಜೀವ ವಿಮೆ, ಟ್ಯೂಷನ್ ಶುಲ್ಕ, ಬ್ಯಾಂಕ್ ಮತ್ತು ಅಂಚೆ ಕಚೇರಿಯಲ್ಲಿ ಐದು ವರ್ಷದ ಅವಧಿಯ ಠೇವಣಿ ಒಳಗೊಂಡು, ಒಂದು ವರ್ಷದಲ್ಲಿ ₹1.5 ಲಕ್ಷದವರೆಗಿನ ಮೊತ್ತಕ್ಕೆ ತೆರಿಗೆ ವಿನಾಯಿತಿ ಸಿಗಲಿದೆ. ಈ ವಿನಾಯಿತಿ ಕುರಿತು ಇದ್ದ ಸುದೀರ್ಘ ವಿವರಣೆಯನ್ನು ಮಸೂದೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಡಿಡಕ್ಷನ್ ಮಿತಿ ಬಗ್ಗೆ ಸ್ಪಷ್ಟಪಡಿಸಲಾಗಿದೆ. ತೆರಿಗೆದಾರರಿಗೆ ಲಭ್ಯವಿರುವ ಡಿಡಕ್ಷನ್‌ಗಳ ಬಗ್ಗೆ ಸರಳವಾಗಿ ವಿವರಿಸಲಾಗಿದೆ. ಇದು ತೆರಿಗೆದಾರರಿಗೆ ಸುಲಭವಾಗಿ ಅರ್ಥವಾಗಲಿದೆ.

80ಟಿಟಿಎ ಮತ್ತು 80ಟಿಟಿಬಿ ವಿಲೀನ

ಸೆಕ್ಷನ್ 80ಟಿಟಿಎ ಅಡಿ ವ್ಯಕ್ತಿಯೊಬ್ಬರು ಗಳಿಸುವ ₹10 ಸಾವಿರದ ವರೆಗಿನ ಬಡ್ಡಿ ಆದಾಯಕ್ಕೆ ತೆರಿಗೆ ವಿನಾಯಿತಿಯಿದೆ. ಅಂಚೆ ಕಚೇರಿ ಹಾಗೂ ಉಳಿತಾಯ ಖಾತೆ ಹೂಡಿಕೆಗಳ ಮೇಲೆ ಬರುವ ಬಡ್ಡಿಗೆ ಇದು ಅನ್ವಯವಾಗಲಿದೆ. ಸೆಕ್ಷನ್ 80ಟಿಟಿಬಿ ಅಡಿ ಹಿರಿಯ ನಾಗರಿಕರಿಗೆ ಉಳಿತಾಯ ಖಾತೆ ಮತ್ತು ಅವಧಿ ಠೇವಣಿ ಮೇಲೆ ಸಿಗುವ ಬಡ್ಡಿಗೆ ₹50 ಸಾವಿರದ ತನಕ ವಿನಾಯಿತಿ ದೊರೆಯಲಿದೆ. ಮಸೂದೆಯಲ್ಲಿ ಈ ಸೆಕ್ಷನ್‌ಗಳನ್ನು ವಿಲೀನಗೊಳಿಸಿ ಒಂದೇ ಸೆಕ್ಷನ್ ರೂಪಿಸಲಾಗಿದೆ. ಸಬ್ ಸೆಕ್ಷನ್‌ಗಳ ಅಡಿ ವಿನಾಯಿತಿ ಬಗ್ಗೆ ವಿವರಣೆ ನೀಡಲಾಗಿದೆ. ವಿವಿಧ ವರ್ಗದ ತೆರಿಗೆದಾರರಿಗೆ ವಿನಾಯಿತಿಯ ಅರ್ಹತೆ, ಡಿಡಕ್ಷನ್ ಮಿತಿ ಬಗ್ಗೆ ವಿವರಿಸಲಾಗಿದೆ. ಇದರಿಂದ ಹಿರಿಯ ನಾಗರಿಕರು ಸುಲಭವಾಗಿ ಅರ್ಥೈಸಿಕೊಳ್ಳಲು ನೆರವಾಗಲಿದೆ.

80ಜಿ ಸುಧಾರಣೆ

ಆದಾಯ ತೆರಿಗೆ ಇಲಾಖೆಯಡಿ ನೋಂದಣಿಯಾದ ದತ್ತಿ ಸಂಸ್ಥೆಗಳಿಗೆ ನೀಡಿದ ದೇಣಿಗೆಯಿಂದ ತೆರಿಗೆ ವಿನಾಯಿತಿ ಪಡೆಯಲು ಸೆಕ್ಷನ್ 80ಜಿ ಅಡಿ ಅವಕಾಶವಿದೆ. ಶೇಕಡಾವಾರು ಲೆಕ್ಕಾಚಾರದಲ್ಲಿ ದೇಣಿಗೆ ಮೊತ್ತವನ್ನು ಪರಿಷ್ಕರಿಸಲಾಗಿದೆ. ಶೇ 100ರಷ್ಟು ಮತ್ತು ಶೇ 50ರಷ್ಟು ಎಂದು ವರ್ಗೀಕರಿಸಲಾಗಿದ್ದು, ಎಷ್ಟು ಮೊತ್ತದ ದೇಣಿಗೆಗೆ ಎಷ್ಟು ರಿಯಾಯಿತಿ ದೊರೆಯಲಿದೆ ಎಂದು ಮಸೂದೆಯಲ್ಲಿ ಸ್ಪಷ್ಟಪಡಿಸಲಾಗಿದೆ.

80ಆರ್‌ಆರ್‌ಬಿ ಸರಳೀಕರಣ


ಪೇಟೆಂಟ್‌ನಿಂದ ರಾಯಧನದ ರೂಪದಲ್ಲಿ ಪಡೆಯುವ ಆದಾಯಕ್ಕೆ ಸೆಕ್ಷನ್ 80 ಆರ್‌ಆರ್‌ಬಿ ಅಡಿ ಡಿಡಕ್ಷನ್ ಸೌಲಭ್ಯವಿದೆ. ಈ ಪ್ರಯೋಜನ ಪಡೆಯಲು ಯಾವ ತೆರಿಗೆದಾರರು ಅರ್ಹ ಎಂಬ ಬಗ್ಗೆ ಮಸೂದೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಡಿಡಕ್ಷನ್ ಮೊತ್ತದ ಬಗ್ಗೆ ಅರ್ಥ ವಿವರಣೆಯನ್ನು ಸರಳೀಕರಣಗೊಳಿಸಲಾಗಿದೆ.



ಹೂಡಿಕೆ ವಿನಾಯಿತಿ ಮುಂದುವರಿಕೆ

ಈಗಿರುವ ಕಾಯ್ದೆಯಡಿ ವೈಯಕ್ತಿಕ ತೆರಿಗೆದಾರರು ಹೂಡಿಕೆಗೆ ಅನುಗುಣವಾಗಿ ತೆರಿಗೆ ವಿನಾಯಿತಿ ಪಡೆಯಬಹುದಾಗಿದೆ. 80ಸಿ, 80ಸಿಸಿಡಿ, 80ಡಿ, 80ಡಿಡಿ, 80ಡಿಡಿಬಿ, 80ಇಇಎ, 80ಇಇಬಿ ಮತ್ತು 80ಯು ಅಡಿ ವಿನಾಯಿತಿ ಸಿಗಲಿದೆ. ಹೊಸ ಮಸೂದೆಯಲ್ಲೂ ಈ ಸೌಲಭ್ಯವನ್ನು ಮುಂದುವರಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,031
ಇಂದಿನ ಅಂತ್ಯ	22,929
▼	102
ದಿನದ ಕನಿಷ್ಠ	22,774

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹301-661
ದ್ವಿತಳಿ (ಬಿ.ವಿ)	₹303-803

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1310 (1295)
ಸೂರ್ಯಕಾಂತಿ (ರಿಫೈನ್ಡ್)	₹1420 (1410)
ಪಾಮೋಲಿನ್	₹1360 (1350)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186.50
ಆರ್‌ಎಸ್‌ಎಸ್-5	₹181.50
ಗುಡ್ ಲಾಟ್	₹176.50

(ಪ್ರತಿ ಕೆ.ಜಿಗೆ)

ಕರಡಿ ಕುಣಿತ ಅಬಾಧಿತ

ಮುಂಬೈ (ಪಿಟಿಐ): ಸತತ ಎಂಟನೇ ದಿನವಾದ ಶುಕ್ರವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿಯಿತು.

ವಿದೇಶಿ ಬಂಡವಾಳದ ಹೊರಹರಿವು ಮುಂದುವರಿಕೆ ಹಾಗೂ ಅಮೆರಿಕದ ಸುಂಕ ನೀತಿಯಿಂದಾಗಿ ಸೂಚ್ಯಂಕಗಳು ಇಳಿಕೆ ಕಂಡಿವೆ. ಕಂಪನಿಗಳ ತ್ರೈಮಾಸಿಕದ ಗಳಿಕೆ ಕಡಿಮೆಯಾಗಿದೆ. ಇದು ಕೂಡ ಸೂಚ್ಯಂಕ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎಂಟು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹25.31 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 199 ಅಂಶ ಕಡಿಮೆಯಾಗಿ, 75,939ಕ್ಕೆ ವಹಿವಾಟು ಅಂತ್ಯಗೊಂಡಿತು. ಒಂದು ಸಂದರ್ಭದಲ್ಲಿ 699 ಅಂಶ ಕುಸಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 102 ಅಂಶ ಇಳಿಕೆಯಾಗಿ, 22,929ಕ್ಕೆ ಕೊನೆಗೊಂಡಿತು.

ಅದಾನಿ ಪೋರ್ಟ್ಸ್ ಷೇರಿನ ಮೌಲ್ಯದಲ್ಲಿ ಶೇ 4ರಷ್ಟು ಇಳಿಕೆಯಾಗಿದೆ. ಅಲ್ಟ್ರಾಟೆಕ್ ಸಿಮೆಂಟ್, ಸನ್ ಫಾರ್ಮಾ, ಇಂಡಸ್‌ಇಂಡ್ ಬ್ಯಾಂಕ್, ಎನ್‌ಟಿಪಿಸಿ ಮತ್ತು ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಇಳಿದಿದೆ.

ಪರಿಸ್ಥಿತಿ ಆಧರಿಸಿ ಹೊಸ ಸರ್ಕಾರ

ಇಂಫಾಲ್ (ಪಿಟಿಐ): ‘ಮಣಿಪುರದಲ್ಲಿ ವಿಧಾನಸಭೆಯ ವಿಸರ್ಜನೆಯಾಗಿಲ್ಲ. ತಾತ್ಕಾಲಿಕವಾಗಿ ಅಮಾನತಿನಲ್ಲಿ ಇರಿಸಲಾಗಿದೆ. ಸ್ಥಳೀಯ ಪರಿಸ್ಥಿತಿ ಆಧರಿಸಿ ಹೊಸ ಸರ್ಕಾರ ರಚನೆಯ ಸಾಧ್ಯತೆಗಳು ಉಳಿದಿವೆ’ ಎಂದು ಬಿಜೆಪಿಯ ಈಶಾನ್ಯ ವಲಯದ ಉಸ್ತುವಾರಿ ಸಂಬಿತ್ ಪಾತ್ರಾ ತಿಳಿಸಿದ್ದಾರೆ.

ಮಣಿಪುರದ ಪ್ರಾದೇಶಿಕ ಸಮಗ್ರತೆ ಕಾಪಾಡಲು ಬಿಜೆಪಿ ಬದ್ಧವಾಗಿದೆ ಎಂದು ಅವರು ಪುನರುಚ್ಚರಿಸಿದರು.

ಬಿಗಿಭದ್ರತೆ: ರಾಜಧಾನಿ ಇಂಫಾಲ್‌ನಲ್ಲಿರುವ ರಾಜಭವನ, ಮುಖ್ಯಮಂತ್ರಿ ಸಚಿವಾಲಯದ ಸುತ್ತ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದ್ದು, ಭದ್ರತಾ ಪಡೆಗಳು ಕಟ್ಟೆಚ್ಚರವಹಿಸಿವೆ.

ಪ್ರಧಾನಿ ಕ್ಷಮೆಗೆ ಆಗ್ರಹ: ‘ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಮೂಲಕ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ತಮ್ಮ ವೈಫಲ್ಯವನ್ನು ಒಪ್ಪಿಕೊಂಡಿವೆ. ಇದಕ್ಕಾಗಿ ಪ್ರಧಾನಿ ಮೋದಿ ಅವರು ರಾಜ್ಯದ ಜನರ ಕ್ಷಮೆ ಯಾಚಿಸಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರದ ಮೇಲೆ ಡ್ರೋನ್ ದಾಳಿ

ಕೀವ್, ಉಕ್ರೇನ್ (ಎ.ಪಿ): ಭಾರಿ ಸ್ಫೋಟ ಸಾಮರ್ಥ್ಯದ ಸಿಡಿತಲೆ ಅಳವಡಿಸಿದ್ದ ರಷ್ಯಾದ ಡ್ರೋನ್ ಗುರುವಾರ, ಇಲ್ಲಿನ ಸಂರಕ್ಷಿತ ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರ ಸಂಕೀರ್ಣಕ್ಕೆ ಅಪ್ಪಳಿಸಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

‘ಈ ದಾಳಿಯಿಂದಾಗಿ ಚೆರ್ನೋಬಿಲ್ ಸ್ಥಾವರದಲ್ಲಿ ವಿಕಿರಣಗಳ ಮಟ್ಟದಲ್ಲಿ ಯಾವುದೇ ಏರುಪೇರು ಉಂಟಾಗಿಲ್ಲ’ ಎಂದು ಉಕ್ರೇನ್ ಮತ್ತು ವಿಶ್ವಸಂಸ್ಥೆಯ ಪರಮಾಣು ಏಜೆನ್ಸಿ ಸ್ಪಷ್ಟಪಡಿಸಿವೆ. ರಷ್ಯಾದ ಅಧಿಕಾರಿಗಳು ಈ ಬಗ್ಗೆ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

ವಿಶ್ವಸಂಸ್ಥೆಯ ಪರಮಾಣು ಏಜೆನ್ಸಿಯು, ‘ಘಟನಾ ಸ್ಥಳಕ್ಕೆ ತಂಡ ಭೇಟಿ ನೀಡಿದೆ. ಡ್ರೋನ್ ಅಪ್ಪಳಿಸಿದೆ ಎಂಬುದನ್ನು ದೃಢಪಡಿಸಿದೆ’ ಎಂದು ತಿಳಿಸಿದೆ.

ಡ್ರೋನ್ ಅಪ್ಪಳಿಸಿದ ಹಿಂದೆಯೆ ಬೆಂಕಿ ಹೊತ್ತಿಕೊಂಡಿದ್ದು, ನಂದಿಸಲಾಗಿದೆ. ಡ್ರೋನ್ ದಾಳಿಯಿಂದ ಸ್ಥಾವರಕ್ಕೆ ಹಾನಿಯಾಗಿದೆ ಎಂದು ಝೆಲೆನ್‌ಸ್ಕಿ ಅವರು ತಿಳಿಸಿದ್ದಾರೆ.



ಯುದ್ಧ ಅಂತ್ಯಗೊಳಿಸಲು ಶೀಘ್ರವೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭೇಟಿ ಆಗುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ಚೆರ್ನೋಬಿಲ್ ಸ್ಥಾವರದ ಮೇಲೆ ಸ್ಥಳೀಯ ಕಾಲಮಾನ ಬೆಳಗಿನ ಜಾವ 1.50ರ ವೇಳೆಗೆ ದಾಳಿ ನಡೆದಿದೆ. ಸ್ಥಾವರ ಒಳ ರಕ್ಷಣಾ ವ್ಯವಸ್ಥೆಗೆ ಯಾವುದೇ ಧಕ್ಕೆ ಆಗಿಲ್ಲ ಎಂದು ವಿಶ್ವಸಂಸ್ಥೆಯ ಅಂತರ-ರಾಷ್ಟ್ರೀಯ ಪರಮಾಣು ಏಜೆನ್ಸಿಯು ತಿಳಿಸಿದೆ. ಈ ದಾಳಿಯು ಪುಟಿನ್ ಅವರು ಮಾತುಕತೆಗೆ ಸಿದ್ಧರಿಲ್ಲ ಎಂಬುದನ್ನು ಬಿಂಬಿಸಲಿದೆ. ‘ಈ ದಾಳಿಗೆ ರಷ್ಯಾವನ್ನು ಹೊಣೆಯಾಗಿಸಬೇಕು’ ಎಂದು ಝೆಲೆನ್‌ಸ್ಕಿ ಒತ್ತಾಯಿಸಿದ್ದಾರೆ.

ರಷ್ಯಾ ನಿರಾಕರಣೆ

ಕೀವ್ (ಎ.ಪಿ): ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರದ ಮೇಲೆ ಡ್ರೋನ್ ದಾಳಿ ನಡೆಸಲಾಗಿದೆ ಎಂಬ ಉಕ್ರೇನ್ ಹೇಳಿಕೆಯನ್ನು ರಷ್ಯಾ ತಳ್ಳಿಹಾಕಿದೆ.

‘ಪರಮಾಣು ಮೂಲಸೌಕರ್ಯ, ಅಣುವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಪ್ರಶ್ನೆಯೇ ಇಲ್ಲ. ಇಂಥ ಯಾವುದೇ ಆರೋಪ ಸತ್ಯವಲ್ಲ. ನಮ್ಮ ಸೇನೆ ಈ ಕೆಲಸ ಮಾಡಿಲ್ಲ’ ಎಂದು ರಷ್ಯಾದ ವಕ್ತಾರ ಡಿಮಿತ್ರಿ ಪೆಸ್ಕೋವ್ ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಈಶಾ ಫೌಂಡೇಷನ್ ವಿರುದ್ಧ ಅರ್ಜಿ ಸಲ್ಲಿಸಲು ವಿಳಂಬ

ಟಿಎನ್‌ಪಿಸಿಬಿಗೆ ‘ಸುಪ್ರೀಂ’ ತರಾಟೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಈಶಾ ಫೌಂಡೇಷನ್ ವಿರುದ್ಧ ನೀಡಲಾಗಿದ್ದ ಶೋಕಾಸ್ ನೋಟಿಸ್ ರದ್ದುಗೊಳಿಸಿದ ಆದೇಶವನ್ನು ಪ್ರಶ್ನಿಸಲು ಎರಡು ವರ್ಷಗಳಷ್ಟು ಸುದೀರ್ಘ ಅವಧಿಯನ್ನು ತೆಗೆದುಕೊಂಡ ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿಯನ್ನು (ಟಿಎನ್‌ಪಿಸಿಬಿ) ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

ಜಗ್ಗಿ ವಾಸುದೇವ ಅವರ ‘ಈಶಾ ಫೌಂಡೇಷನ್’ 2006ರಿಂದ 2014ರ ಅವಧಿಯಲ್ಲಿ ನಿರ್ಮಿಸಿರುವ ವಿವಿಧ ಕಟ್ಟಡಗಳು ಪರಿಸರ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಟಿಎನ್‌ಪಿಸಿಬಿ ಶೋಕಾಸ್ ನೋಟಿಸ್ ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿ ಫೌಂಡೇಷನ್ ಮದ್ರಾಸ್ ಹೈಕೋರ್ಟ್ ಮೊರೆ ಹೋಗಿತ್ತು. 2022ರ ಡಿಸೆಂಬರ್ 14ರಂದು ಈಶಾ ಫೌಂಡೇಷನ್ ಪರ ತೀರ್ಪು ನೀಡಿ ಮದ್ರಾಸ್ ಹೈಕೋರ್ಟ್, ಶೋಕಾಸ್ ನೋಟಿಸ್ ರದ್ದುಗೊಳಿಸಿತ್ತು.



ಮದ್ರಾಸ್ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಟಿಎನ್‌ಪಿಸಿಬಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಟಿಎನ್‌ಪಿಸಿಬಿ ತಡವಾಗಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ಪೀಠವು ‘ಸ್ನೇಹಪರ ಪಂದ್ಯ’ ಎಂದು ಬಣ್ಣಿಸಿತಲ್ಲದೆ, ‘ಶೋಕಾಸ್ ನೋಟಿಸ್ ರದ್ದುಗೊಳಿಸಿರುವ ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಕೋರ್ಟ್ ಕೂಡಾ ತನ್ನ ಮುದ್ರೆಯೊತ್ತಬೇಕು ಎಂದು ಅಧಿಕಾರಿಗಳು ಬಯಸುತ್ತಿದ್ದಾರೆ’ ಎಂದಿತು.

ಈಶಾ ಫೌಂಡೇಶನ್‌ನವರು ಕೊಯಮತ್ತೂರು ಜಿಲ್ಲೆಯ ವೆಳ್ಳಿಯಂಗಿರಿಯಲ್ಲಿ ಯೋಗ ಮತ್ತು ಧ್ಯಾನ ಕೇಂದ್ರವನ್ನು ನಿರ್ಮಿಸಿದ್ದು, ಆ ಕಟ್ಟಡವು ಪರಿಸರಕ್ಕೆ ಸಂಬಂಧಿಸಿದ ಎಲ್ಲ ನಿಯಮಗಳನ್ನೂ ಪಾಲಿಸಿದೆ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂದು ತಮಿಳುನಾಡು ಅಡ್ವೊಕೇಟ್ ಜನರಲ್ ಪಿ.ಎಸ್.ರಾಮನ್ ಅವರಿಗೆ ಪೀಠವು ಸೂಚಿಸಿತು.

‘ಹೈಕೋರ್ಟ್ ಆದೇಶ ಪ್ರಶ್ನಿಸಿ ಅಧಿಕಾರಿಗಳು ಸಕಾಲದಲ್ಲಿ ಅರ್ಜಿ ಸಲ್ಲಿಸಿಲ್ಲ ಏಕೆ? ಸರ್ಕಾರವು ತಡವಾಗಿ ಅರ್ಜಿ ಸಲ್ಲಿಸಿದಾಗ ನಮಗೆ ಅನುಮಾನ ಮೂಡುತ್ತದೆ’ ಎಂದು ಹೇಳಿತು.

‘ಶೋಕಾಸ್ ನೋಟಿಸ್ ನೀಡಿ ಮತ್ತು ಒಳಚರಂಡಿ ವ್ಯವಸ್ಥೆ ಹಾಗೂ ಪರಿಸರಕ್ಕೆ ಸಂಬಂಧಿಸಿದ ಇತರ ಎಲ್ಲ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಆದರೆ ಅವರ (ಟಿಎನ್‌ಪಿಸಿಬಿ) ಕಣ್ಣೆದುರೇ ನಿರ್ಮಾಣಗೊಂಡ ಕಟ್ಟಡವನ್ನು ಕೆಡವಲು ನಿಮಗೆ ಅನುಮತಿಸಲಾಗುವುದಿಲ್ಲ. ಏಕೆಂದರೆ, ಅದು ಸಣ್ಣ ಗುಡಿಸಲು ಅಲ್ಲ. ಲಕ್ಷಕ್ಕೂ ಅಧಿಕ ಚದರ ಯಾರ್ಡ್ ವಿಸ್ತೀರ್ಣದಲ್ಲಿ ಅಲ್ಲಿ ಕಟ್ಟಡ ನಿರ್ಮಾಣಗೊಂಡಿದೆ’ ಎಂದು ರಾಜ್ಯ ಸರ್ಕಾರಕ್ಕೆ ಪೀಠವು ತಿಳಿಸಿತು. ಈಶಾ ಫೌಂಡೇಷನ್ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರ ಮನವಿಯಂತೆ ಪೀಠವು ಮುಂದಿನ ವಿಚಾರಣೆಯನ್ನು ಶಿವರಾತ್ರಿ ಬಳಿಕ ನಿಗದಿಪಡಿಸಿತು.

ಶ್ವೇತಭವನದಲ್ಲಿ ಟ್ರಂಪ್ ಜೊತೆಗೆ ನಡೆದ ಸಭೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

‘ಅದಾನಿ ಪ್ರಕರಣ ಖಾಸಗಿ ವಿಷಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅಮೆರಿಕದ ಕೋರ್ಟ್‌ನಲ್ಲಿ ಉದ್ಯಮಿ ಗೌತಮ್ ಅದಾನಿ ವಿರುದ್ಧ ಮೊಕದ್ದಮೆ ದಾಖಲಾಗಿರುವುದು ‘ಖಾಸಗಿ ವಿಷಯ’. ಎರಡು ದೇಶಗಳ ನಾಯಕರು ಇಂತಹ ಖಾಸಗಿ ಸಂಗತಿ ಚರ್ಚಿಸಲು ಭೇಟಿ ಆಗುವುದಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಶ್ವೇತಭವನದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜೊತೆಗೆ ನಡೆದ ಸಭೆಯ ಬಳಿಕ ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ಮೋದಿ ಹೀಗೆ ಪ್ರತಿಕ್ರಿಯೆ ನೀಡಿದರು.

ಟ್ರಂಪ್ ಜೊತೆಗಿನ ಸಭೆಯಲ್ಲಿ ಅದಾನಿ ವಿಷಯವೂ ಚರ್ಚೆಯಾಯಿತೇ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಎರಡು ದೇಶಗಳ ನಾಯಕರು ಎಂದಿಗೂ ಇಂತಹ ವಿಷಯಗಳ ಚರ್ಚೆಗೆ ಭೇಟಿ ಆಗುವುದಿಲ್ಲ. ಚರ್ಚಿಸುವುದೂ ಇಲ್ಲ’ ಎಂದು ಮೋದಿ ಪ್ರತಿಕ್ರಿಯಿಸಿದರು.

ಅದಾನಿ ಅವರು ಪ್ರಧಾನಿಯವರ ಆಪ್ತ ಎಂದು ಬಿಂಬಿಸುವುದನ್ನು ಉಲ್ಲೇಖಿಸಿ, ‘ಮೊದಲಿಗೆ ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ನಮ್ಮ ಸಂಸ್ಕೃತಿ, ಸಿದ್ಧಾಂತಗಳು ‘ವಸುಧೈವ ಕುಟುಂಬಕಂ’ ಧ್ಯೇಯ ಆಧರಿಸಿದೆ. ಭಾರತೀಯರೆಲ್ಲರೂ ನನ್ನವರು ಎಂದು ಭಾವಿಸುತ್ತೇನೆ’ ಎಂದರು.

ಬಂಡವಾಳ ಸೆಳೆಯಲು ಷೇರು ಮಾರುಕಟ್ಟೆಯ ವಹಿವಾಟಿನಲ್ಲಿ ಅಕ್ರಮ ಹಾಗೂ ನಿಯಮಗಳ ಉಲ್ಲಂಘನೆ ಆರೋಪದಡಿ ಉದ್ಯಮಿ ಗೌತಮ್ ಅದಾನಿ, ಅವರ ಸಂಬಂಧಿ ಸಾಗರ್ ಅದಾನಿ ವಿರುದ್ಧ ಅಮೆರಿಕ ಫೆಡರಲ್ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ.

ಈ ಹಿಂದೆ ಅದಾನಿ ವಿರುದ್ಧದ ಪ್ರಕರಣವನ್ನು ಉಲ್ಲೇಖಿಸಿ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, ‘ಇದು ಖಾಸಗಿ ಸಂಸ್ಥೆ, ಉದ್ಯಮಿ ಮತ್ತು ಅಮೆರಿಕದ ನ್ಯಾಯಾಂಗ ಇಲಾಖೆಗೆ ಸಂಬಂಧಿಸಿದ ವಿಷಯ’ ಎಂದು ಪ್ರತಿಕ್ರಿಯಿಸಿತ್ತು.



ಶ್ವೇತಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

‘ಭ್ರಷ್ಟಾಚಾರ ಮುಚ್ಚಿಕೊಳ್ಳುವ ಯತ್ನ’

‘ಅದಾನಿ ಪ್ರಕರಣ ‘ಖಾಸಗಿ ವಿಷಯ’ ಎನ್ನುವ ಮೂಲಕ ಪ್ರಧಾನಿ ನರೇಂದ್ರ ಮೋದಿ, ಅಮೆರಿಕದಲ್ಲೂ ಉದ್ಯಮಿ ವಿರುದ್ಧದ ಭ್ರಷ್ಟಾಚಾರ ಆರೋಪ ಮುಚ್ಚಿಕೊಳ್ಳಲು ಯತ್ನಿಸಿದ್ದಾರೆ’ ಎಂದು ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್‌ಗಾಂಧಿ ಟೀಕಿಸಿದ್ದಾರೆ.

‘ಎಕ್ಸ್’ ಜಾಲತಾಣದಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಅವರು, ‘ದೇಶದಲ್ಲಿ ಈ ಬಗ್ಗೆ ಪ್ರಶ್ನಿಸಿದರೆ ಮೌನವಹಿಸುತ್ತಾರೆ. ವಿದೇಶದಲ್ಲಿ ಪ್ರಶ್ನಿಸಿದರೆ ಅದು ಖಾಸಗಿ ವಿಷಯ ಆಗುತ್ತದೆ’ ಎಂದು ಹೇಳಿದ್ದಾರೆ.

ಮೂರನೆಯವರ ಮಧ್ಯಸ್ಥಿಕೆ ಒಪ್ಪಲ್ಲ–ಭಾರತ

ವಾಷಿಂಗ್ಟನ್ (ಪಿಟಿಐ): ಚೀನಾ ಜೊತೆಗಿನ ಗಡಿ ವಿವಾದ ಕುರಿತು ಮೂರನೆಯರ ಮಧ್ಯಸ್ಥಿಕೆ ಒಪ್ಪುವುದಿಲ್ಲ ಎಂದು ನಿಲುವನ್ನು ಭಾರತ ಪುನರುಚ್ಚರಿಸಿದೆ.

ಚೀನಾ –ಭಾರತ ಗಡಿ ವಿವಾದ ಪರಿಹರಿಸಲು ಅಗತ್ಯವಿದ್ದರೆ ಸಹಕಾರ ನೀಡಲು ಸಿದ್ಧ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಹಿನ್ನೆಲೆಯಲ್ಲಿ ಭಾರತ ಈ ಮಾತು ಹೇಳಿದೆ.

ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರು, ಇಂತಹ ವಿಷಯಗಳಲ್ಲಿ ಭಾರತ ಎಂದಿಗೂ ದ್ವಿಪಕ್ಷೀಯ ಮಾತುಕತೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಿದೆ ಎಂದು ಹೇಳಿದರು.

ನೆರೆಹೊರೆ ರಾಷ್ಟ್ರಗಳ ಜೊತೆಗಿನ ಯಾವುದೇ ವಿಷಯ ಇರಲಿ. ಎಂದಿಗೂ ದ್ವಿಪಕ್ಷೀಯ ಚರ್ಚೆಗೆ ಭಾರತ ಒತ್ತು ನೀಡಲಿದೆ. ಚೀನಾ–ಭಾರತ ವಿಷಯದಲ್ಲಿಯೂ ಇದೇ ನಿಲುವು ಅನ್ವಯವಾಗಲಿದೆ ಎಂದು ಮಿಸ್ರಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಹಿತಾಸಕ್ತಿಗೆ ಧಕ್ಕೆ ಆಗದಿರಲಿ –ಚೀನಾ

ಬೀಜಿಂಗ್ (ಪಿಟಿಐ): ‘ಭಾರತ ಮತ್ತು ಅಮೆರಿಕ ನಡುವಣ ದ್ವಿಪಕ್ಷೀಯ ಮಾತುಕತೆಯು ಮೂರನೇ ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯಾಗದಂತೆ ಇರಲಿ’ ಎಂದು ಚೀನಾ ಪ್ರತಿಕ್ರಿಯಿಸಿದೆ.

ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಣ ಮಾತುಕತೆಗೆ ಪ್ರತಿಕ್ರಿಯಿಸಿರುವ ಚೀನಾ, ‘ಏಷ್ಯಾ ಪೆಸಿಫಿಕ್ ವಲಯ ಶಾಂತಿಯುತ ಪ್ರಗತಿಗೆ ತಾಣವಾಗಿದೆ. ಜಾಗತಿಕ ರಾಜಕೀಯ ವೈರತ್ವದ ನೆಲೆಯಲ್ಲ’ ಎಂದು ಹೇಳಿದೆ.

ಎರಡು ರಾಷ್ಟ್ರಗಳ ನಡುವಣ ಬಾಂಧವ್ಯ ಮತ್ತು ಸಹಕಾರ ಚೀನಾಗೆ ಸಮಸ್ಯೆ ಆಗಬಾರದು ಮತ್ತು ಹಿತಾಸಕ್ತಿಗೆ ಧಕ್ಕೆ ತರಬಾರದು. ಅದು, ಶಾಂತಿ, ಸ್ಥಿರತೆ ಮತ್ತು ಪ್ರಗತಿಗೆ ಪೂರಕವಾಗಿರಬೇಕು ಎಂದು ಬಯಸುತ್ತದೆ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜೈಕುನ್ ಅವರು ಪ್ರತಿಕ್ರಿಯಿಸಿದರು.

‘ಎಫ್‌–35’ ಖರೀದಿ ಸನ್ನಿಹಿತ

ಸಶಸ್ತ್ರ ಪಡೆಗಳ ಬತ್ತಳಿಕೆ ಸೇರಲಿವೆ ‘ಜಾವೆಲಿನ್’, ‘ಸ್ಟ್ರೈಕರ್’

ವಾಷಿಂಗ್ಟನ್(ಪಿಟಿಐ): ಟ್ಯಾಂಕ್ ನಿರೋಧಕ, ನಿರ್ದೇಶಿತ ಕ್ಷಿಪಣಿ ವ್ಯವಸ್ಥೆ ‘ಜಾವೆಲಿನ್’ ಹಾಗೂ ಯುದ್ಧವಾಹನಗಳಾದ ‘ಸ್ಟ್ರೈಕರ್’ಗಳನ್ನು ಜಂಟಿಯಾಗಿ ಉತ್ಪಾದಿಸುವುದು ಸೇರಿದಂತೆ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿ ಖರೀದಿ ಹಾಗೂ ಪಾಲುದಾರಿಕೆಗೆ ಭಾರತ ಮತ್ತು ಅಮೆರಿಕ ಸಮ್ಮತಿಸಿವೆ.

‘ಎಫ್‌–35’ ಯುದ್ಧವಿಮಾನಗಳ ಪೂರೈಕೆಗೆ ಇದ್ದ ಅಡೆತಡೆಗಳ ನಿವಾರಣೆಗೂ ಅಮೆರಿಕ ಕ್ರಮ ಕೈಗೊಂಡಿದೆ.

ಅಮೆರಿಕ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಡೆಸಿದ ಮಾತುಕತೆ ವೇಳೆ, ಪ್ರಮುಖ ಶಸ್ತ್ರಾಸ್ತ್ರಗಳ ಖರೀದಿ ಹಾಗೂ ಜಂಟಿಯಾಗಿ ತಯಾರಿಸುವ ಕುರಿತು ಚರ್ಚಿಸಿದ್ದಾರೆ.

ಹಿಂದೂ ಮಹಾಸಾಗರ ಪ್ರದೇಶ ಹಾಗೂ ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ) ಉದ್ದಕ್ಕೂ ಚೀನಾ ತನ್ನ ಸೇನಾ ಪ್ರಾಬಲ್ಯ ಹೆಚ್ಚಿಸುತ್ತಿದೆ. ಈ ಕಾರಣಕ್ಕೆ, ಗಡಿ ಉದ್ದಕ್ಕೂ ಕಣ್ಗಾವಲು ಹಾಗೂ ಸಶಸ್ತ್ರ ಪಡೆಗಳ ಸಾಮರ್ಥ್ಯ ಹೆಚ್ಚಿಸುವ ಭಾಗವಾಗಿ ಭಾರತವು ಇಂತಹ ನಿರ್ಧಾರ ಕೈಗೊಂಡಿದೆ.

5ನೇ ತಲೆಮಾರಿನ, ಶಕ್ತಿಶಾಲಿ ‘ಎಫ್‌–35’ ಯುದ್ಧವಿಮಾನಗಳನ್ನು ಭಾರತಕ್ಕೆ ಪೂರೈಸಲು ನೆರವಾಗುವಂತೆ ಸಂಬಂಧಪಟ್ಟ ನೀತಿಯನ್ನು ಪರಿಶೀಲಿಸುವುದಾಗಿಯೂ ಟ್ರಂಪ್ ಹೇಳಿದ್ದಾರೆ.

‘ಎಫ್‌–35’ ಯುದ್ಧವಿಮಾನಗಳು ರಹಸ್ಯವಾಗಿ ಕಾರ್ಯಾಚರಣೆ ನಡೆಸಲಿದ್ದು, ವಿಶ್ವದಲ್ಲಿಯೇ ಅತ್ಯಂತ ಮಾರಕ ಎಂದೇ ಹೆಸರಾಗಿವೆ.

‘ಈ ಯುದ್ಧವಿಮಾನಗಳ ಖರೀದಿ ವಿಚಾರವು ಪ್ರಸ್ತಾವದ ಹಂತದಲ್ಲಿದೆ. ಖರೀದಿಗೆ ಸಂಬಂಧಿಸಿ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ’ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ತಿಳಿಸಿದ್ದಾರೆ.

ನೌಕಾಪಡೆಗಾಗಿ ಹೆಚ್ಚುವರಿಯಾಗಿ ಆರು ‘ಪಿ–8ಐ’ ಕಣ್ಗಾವಲು ಯುದ್ಧ ವಿಮಾನಗಳನ್ನು ಖರೀದಿಸಲು ಭಾರತ ಉದ್ದೇಶಿಸಿದೆ. ಇವು, ದೀರ್ಘವ್ಯಾಪ್ತಿ ಕಡಲಗಡಿ ಕಣ್ಗಾವಲು ಹಾಗೂ ಜಲಾಂತರ್ಗಾಮಿ ನಿರೋಧಕ ವ್ಯವಸ್ಥೆಯಾಗಿವೆ. ಈ ಕುರಿತು ಟ್ರಂಪ್ ಹಾಗೂ ಮೋದಿ ಚರ್ಚಿಸಿದರು.

ನೌಕಾಪಡೆಯು ಈಗಾಗಲೇ 11 ‘ಪಿ–8ಐ’ ಯುದ್ಧವಿಮಾನಗಳನ್ನು ಹೊಂದಿದೆ.

‘ಟ್ಯಾಂಕ್ ನಿರೋಧಕ ಕ್ಷಿಪಣಿ ವ್ಯವಸ್ಥೆ ‘ಜಾವೆಲಿನ್’ ಅನ್ನು ಜಂಟಿಯಾಗಿ ಉತ್ಪಾದಿಸಲು ನಿರ್ಧರಿಸಲಾಗಿದೆ. ಭಾರತದ ಸೇನೆಗಾಗಿ ‘ಸ್ಟ್ರೈಕರ್’ ಯುದ್ಧವಾಹನಗಳನ್ನು ಸಹ ಜಂಟಿಯಾಗಿ ಉತ್ಪಾದಿಸಲು ಉದ್ದೇಶಿಸಲಾಗಿದೆ’ ಎಂದು ಉಭಯ ನಾಯಕರು ಸಭೆ ಬಳಿಕ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.



ಎಫ್‌–35 ಯುದ್ಧವಿಮಾನ

ಸಭೆಯ ಪ್ರಮುಖ ಅಂಶಗಳು

- ಬಾಹ್ಯಾಕಾಶ, ವಾಯುಪ್ರದೇಶ ರಕ್ಷಣೆ, ಕ್ಷಿಪಣಿ ವ್ಯವಸ್ಥೆ, ಕಡಲ ಗಡಿಯಲ್ಲಿ ಕಣ್ಗಾವಲು ಹಾಗೂ ಆಳ ಸಮುದ್ರದಲ್ಲಿ ಕಾರ್ಯಾಚರಣೆಗೆ ಅಗತ್ಯವಿರುವ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ವೃದ್ಧಿಗೆ ಸಮ್ಮತಿ
- ರಕ್ಷಣಾ ಕ್ಷೇತ್ರದಲ್ಲಿ ಜಂಟಿಯಾಗಿ ಕಾರ್ಯಾಚರಣೆಗೆ ಅವಕಾಶ, ಶಸ್ತ್ರಾಸ್ತ್ರಗಳ ಸಾಗಣೆ, ದುರಸ್ತಿ, ನಿರ್ವಹಣೆಯಲ್ಲಿ ಸಹಕಾರಕ್ಕೆ ಒತ್ತು
- ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿ ಹೊಸದಾಗಿ 10 ವರ್ಷಗಳ ಪಾಲುದಾರಿಕೆ
- ಕಡಲ ಗಡಿ ರಕ್ಷಣೆಗೆ ಸಂಬಂಧಿಸಿ ಸುಸಜ್ಜಿತ ರಕ್ಷಣಾ ವ್ಯವಸ್ಥೆ ಅಭಿವೃದ್ಧಿ, ಕೃತಕಬುದ್ಧಿಮತ್ತೆ ಆಧಾರಿತ ‘ಮಾನವರಹಿತ ವೈಮಾನಿಕ ವಾಹನ’ (ಯುಎಎಸ್) ನಿರೋಧಕ ವ್ಯವಸ್ಥೆ ಅಭಿವೃದ್ಧಿಗಾಗಿ ಅಂದುರಿಲ್ ಇಂಡಸ್ಟ್ರೀಜ್ ಹಾಗೂ ಮಹೀಂದ್ರ ಗ್ರೂಪ್ ನಡುವೆ ಪಾಲುದಾರಿಕೆ
- ವಿವಿಧ ಶಸ್ತ್ರಾಸ್ತ್ರಗಳ ಜಂಟಿ ಉತ್ಪಾದನೆಗಾಗಿ ಅಮೆರಿಕದ ‘ಎಲ್3 ಹ್ಯಾರಿಸ್’ ಹಾಗೂ ಭಾರತ ಎಲೆಕ್ಟ್ರಾನಿಕ್ಸ್ ನಡುವೆ ಪಾಲುದಾರಿಕೆ

‘ರಾಣಾ ವಶಕ್ಕೆ ಪಡೆಯಲು ಅಗತ್ಯ ಕ್ರಮ’

ವಿದೇಶಾಂಗ ಕಾರ್ಯದರ್ಶಿ ಹೇಳಿಕೆ • ಭಾರತಕ್ಕೆ ಒಪ್ಪಿಸಲು ಒಪ್ಪಿಗೆ –ಟ್ರಂಪ್



ತಹವ್ವುರ್ ರಾಣಾ

ವಾಷಿಂಗ್ಟನ್ (ಪಿಟಿಐ): ಮುಂಬೈನಲ್ಲಿ ನಡೆದಿದ್ದ 26/11ರ ಭಯೋತ್ಪಾದಕರ ದಾಳಿ ಕೃತ್ಯದ ಆರೋಪಿ ತಹವ್ವುರ್ ರಾಣಾ ಶರಣಾಗತಿ ಮತ್ತು ಆತನನ್ನು ತನ್ನ ವಶಕ್ಕೆ ಪಡೆಯಲು ಭಾರತ ಎಲ್ಲ ಅಗತ್ಯ ಕ್ರಮವಹಿಸಿದೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ಹೇಳಿದೆ.

‘ಕಾನೂನು ಕ್ರಮ ಎದುರಿಸಲು, ರಾಣಾನನ್ನು ಭಾರತದ ವಶಕ್ಕೆ ಒಪ್ಪಿಸಲು ನನ್ನ ಸರ್ಕಾರ ಅನುಮೋದನೆ ನೀಡಿದೆ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯ ಬೆನ್ನಲ್ಲೇ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ವಿಕ್ರಂ ಮಿಸ್ರಿ ಈ ಹೇಳಿಕೆ ನೀಡಿದ್ದಾರೆ.

‘ಅಮೆರಿಕ ಸರ್ಕಾರ ಸ್ಪಷ್ಟ ನಿಲುವು ತಳೆದಿರುವ ಪ್ರಕರಣ ಇದು. ಶ್ವೇತಭವನದಲ್ಲಿ ಅಧ್ಯಕ್ಷರು ನೀಡಿದ ಹೇಳಿಕೆಯನ್ನು ನೀವೂ ಗಮನಿದ್ದೀರಿ. ಆರೋಪಿ ರಾಣಾ ವಶಕ್ಕೆ ಪಡೆಯಲು ಅಗತ್ಯ ಕ್ರಮ ವಹಿಸಲಾಗುತ್ತಿದೆ’ ಎಂದು ಮಿಸ್ರಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಶಕ್ಕೆ ಪಡೆಯಲು ಕಾಲಮಿತಿ ಗೊತ್ತುಪಡಿಸಲಾಗಿದೆಯೇ ಎಂಬ ಪ್ರಶ್ನೆಗೆ, ‘ಈ ಕುರಿತು ಯತ್ನಗಳು ನಡೆದಿವೆ. ಅಂತಿಮ ಹಂತದ ಕೆಲ ವಿಧಿಗಳು ಚಾಲ್ತಿಯಲ್ಲಿವೆ’ ಎಂದರು.

ತಹವ್ವುರ್ ರಾಣಾ ಪಾಕಿಸ್ತಾನ ಮೂಲದವನಾಗಿದ್ದು, ಕೆನಡಾ ಪ್ರಜೆಯಾಗಿದ್ದಾನೆ. ಪ್ರಸ್ತುತ, ಲಾಸ್ ಏಂಜಲೀಸ್‌ನ ಜೈಲಿನಲ್ಲಿ ಇದ್ದಾನೆ. ಪಾಕ್ ಮೂಲದ ಅಮೆರಿಕ ಪ್ರಜೆ ಡೇವಿಡ್ ಕೋಲ್ಮನ್ ಹೆಡ್ಲಿ ಸಹಚರನಾದ ಈತ 26/11 ಕೃತ್ಯದ ಪ್ರಮುಖ ಸಂಚುಕೋರನಾಗಿದ್ದಾನೆ.

ತನ್ನನ್ನು ಭಾರತದ ವಶಕ್ಕೆ ಒಪ್ಪಿಸುವುದನ್ನು ಪ್ರಶ್ನಿಸಿ ರಾಣಾ ಈ ಹಿಂದೆ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂಕೋರ್ಟ್ ಜನವರಿ 21ರಂದು ವಜಾ ಮಾಡಿತ್ತು.

2008ರ ನ. 26ರಂದು 10 ಪಾಕಿಸ್ತಾನಿ ಉಗ್ರರ ತಂಡ ಮುಂಬೈಗೆ ನುಸುಳಿ ರೈಲು ನಿಲ್ದಾಣ, ಎರಡು ತಾರಾ ಹೋಟೆಲ್‌ಗಳಲ್ಲಿ ಗುಂಡಿನ ದಾಳಿ ನಡೆಸಿತ್ತು. ಈ ದಾಳಿಯನ್ನು ತಡೆಯುವ ಕಾರ್ಯಾಚರಣೆ 60 ಗಂಟೆ ನಡೆದಿತ್ತು. 166 ಮಂದಿ ಮೃತಪಟ್ಟಿದ್ದರು.

ಕಾರ್ಯಾಚರಣೆಯಲ್ಲಿ ಉಗ್ರರೂ ಹತರಾಗಿದ್ದರು. ಸಿಕ್ಕಿಬಿದ್ದಿದ್ದ ಉಗ್ರ ಅಜ್ಮಲ್ ಅಮೀರ್ ಕಸಬ್‌ನನ್ನು ವಿಚಾರಣೆ ಬಳಿಕ 2012ರ ನವೆಂಬರ್‌ನಲ್ಲಿ ಗಲ್ಲು ಶಿಕ್ಷೆಗೆ ಗುರಿಪಡಿಸಲಾಗಿತ್ತು.

‘26/11ಕ್ಕೆ ಮುನ್ನ ಮುಂಬೈಗೂ ಭೇಟಿ’

- ಮುಂಬೈ ದಾಳಿ ಕೃತ್ಯದ ಸಂಚುಕೋರ ತಹವ್ವುರ್ ಹುಸೇನ್ ರಾಣಾ 1961ರ ಜನವರಿ 12ರಂದು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಚಿಕವತ್ನಿಯಲ್ಲಿ ಜನಿಸಿದ್ದ.
- ವೈದ್ಯನಾಗಿದ್ದ ಆತ ಪಾಕ್ ಸೇನೆಯ ಆರೋಗ್ಯ ಶಿಬಿರಗಳಲ್ಲಿ ಕ್ಯಾಪ್ಟನ್ ಜನರಲ್ ಆಗಿ ಕಾರ್ಯನಿರ್ವಹಿಸಿದ್ದ.
- ಈತನ ಪತ್ನಿ ಕೂಡಾ ವೈದ್ಯೆ, 1997ರಲ್ಲಿ ಕೆನಡಾಗೆ ವಲಸೆ ಹೋಗಿದ್ದ ಈತ ಅಲ್ಲಿನ ಪೌರತ್ವ ಪಡೆದಿದ್ದ. ಷಿಕಾಗೊದಲ್ಲಿ ವಲಸಿಗ ಸೇವೆ ಏಜೆನ್ಸಿ ನಡೆಸುತ್ತಿದ್ದು, ನ್ಯೂಯಾರ್ಕ್, ಟೊರಾಂಟೊದಲ್ಲೂ ಕಚೇರಿ ಹೊಂದಿದ್ದಾನೆ.
- ರಾಣಾ ತನ್ನ ಸಹಚರ ಹೆಡ್ಲಿ ಜೊತೆಗೂಡಿ ಲಷ್ಕರ್ ಎ ತೊಯಬಾ ಸಂಘಟನೆ ಪಾಕ್‌ನಲ್ಲಿ ನಡೆಸುತ್ತಿರುವ ತರಬೇತಿ ಶಿಬಿರಕ್ಕೆ ಭೇಟಿ ನೀಡಿದ್ದ.
- 2009ರ ಅಕ್ಟೋಬರ್ 18ರಂದು ರಾಣಾ, ಹೆಡ್ಲಿಯನ್ನು ಜೈಲ್ಯಾಂಡ್ಸ್ ಪಾಸ್ಟನ್ ದೈನಿಕದ ಕಚೇರಿ ಮೇಲಿನ ದಾಳಿ ಕೃತ್ಯಕ್ಕೆ ಸಂಬಂಧಿಸಿ ಬಂಧಿಸಲಾಗಿತ್ತು.
- ಮುಂಬೈಗೆ ಭೇಟಿ ನೀಡಿದ್ದಾಗ ತಾಜ್ ಮಹಲ್ ಹೋಟೆಲ್‌ನಲ್ಲಿ ತಂಗಿದ್ದ. 2008ರ ನವೆಂಬರ್ 26ರಂದು ಈ ಹೋಟೆಲ್‌ನ ಮೇಲೂ ಉಗ್ರರು ದಾಳಿ ನಡೆಸಿದ್ದರು.

ರಾಣಾ ಇರಿಸಲು ಮುಂಬೈನ ಜೈಲು ಸಿದ್ಧವಾಗಿದೆ. 26/11 ಕೃತ್ಯದಲ್ಲಿ ಹುತಾತ್ಮರಾದವರು ಮತ್ತು ಸಂತ್ರಸ್ತರಿಗೆ ನ್ಯಾಯ ಸಿಗಲಿದೆ

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಮುಖ್ಯಮಂತ್ರಿ

'ಮಗ','ಮಿಗ' ಸೇರಿ 'ಮೆಗಾ ಪಾಲುದಾರಿಕೆ': ಪ್ರಧಾನಿ ಮೋದಿ ಬಣ್ಣನೆ

ಬಾಂಧವ್ಯ: ಹೊಸ ಪದ ಟಂಕಿಸಿದ ಮೋದಿ

ವಾಷಿಂಗ್ಟನ್(ಪಿಟಿಐ): ಅಮೆರಿಕ ಮತ್ತು ಭಾರತದ ಬಾಂಧವ್ಯ ಹೊಸ ಹಂತ ತಲುಪಿದೆ ಎಂಬುದನ್ನು ವಿವರಿಸುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಪದಗಳನ್ನೇ ಟಂಕಿಸಿದ್ದಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗಿನ ಸಭೆ ಸಾಕ್ಷಿಯಾಯಿತು.


ಸಭೆ ಬಳಿಕ, ಟ್ರಂಪ್ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೋದಿ, “ಮೇಕ್ ಅಮೆರಿಕ ಗ್ರೇಟ್ ಅಗೇನ್’(ಎಂಎಜಿಎ– ‘ಮಗ’) ಎಂಬ ಟ್ರಂಪ್ ಮಾತಿನಿಂದ ಪ್ರೇರಿತನಾಗಿ ನಾನು ‘ಮೇಕ್ ಇಂಡಿಯಾ ಗ್ರೇಟ್ ಅಗೇನ್’(ಎಂಐಜಿಎ– ಮಿಗ) ಎಂಬ ಪದವನ್ನು ಟಂಕಿಸಿದ್ದೇನೆ. ಈ ಎರಡು ಮುನ್ನೋಟಗಳನ್ನು ಒಟ್ಟಿಗೆ ಸೇರಿಸಿದಾಗ ‘ಸಮೃದ್ಧಿಗಾಗಿ ‘ಮೆಗಾ’ ಪಾಲುದಾರಿಕೆ’ ಎಂದಾಗುತ್ತದೆ. ಇದು ಉಭಯ ದೇಶಗಳ ಸಂಬಂಧ ಹೊಸ ಎತ್ತರಕ್ಕೆ ಏರಿರುವುದನ್ನು ಸೂಚಿಸುತ್ತದೆ’ ಎಂದರು.

ಇದಕ್ಕೂ ಮುನ್ನ, ಶ್ವೇತಭವನದಲ್ಲಿ ನಡೆದ ಸಭೆಗೆ ಆಗಮಿಸಿದ ಮೋದಿ ಅವರನ್ನು ಟ್ರಂಪ್ ಆತ್ಮೀಯವಾಗಿ ಬರಮಾಡಿಕೊಂಡರು. ಸುದೀರ್ಘ ಹಸ್ತಲಾಘವ ಮಾಡಿ, ಮೋದಿ ಅವರನ್ನು ಆಲಂಗಿಸಿದ ಟ್ರಂಪ್, ‘ಮೋದಿ ನನ್ನ ಅತ್ಯುತ್ತಮ ಸ್ನೇಹಿತ, ದೈತ್ಯಶಕ್ತಿಯ ವ್ಯಕ್ತಿ’ ಎಂದರು.

ಇದಕ್ಕೆ ಪ್ರತಿಯಾಗಿ, ಎರಡನೇ ಅವಧಿಗೆ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕಾಗಿ ಟ್ರಂಪ್ ಅವರನ್ನು ಮೋದಿ ಅಭಿನಂದಿಸಿದರು.

ಉಡುಗೊರೆ: ‘ಮಿಸ್ಟರ್ ಪ್ರೈಮ್ ಮಿನಿಸ್ಟರ್ ಯು ಆರ್ ಗ್ರೇಟ್’ ಎಂಬುದಾಗಿ ತಮ್ಮ ಹಸ್ತಾಕ್ಷರವುಳ್ಳ ‘ಅವರ್ ಜರ್ನಿ ಟುಗೆದರ್’ ಎಂಬ ಪುಸ್ತಕವನ್ನು ಟ್ರಂಪ್ ಅವರು ಮೋದಿಗೆ ಉಡುಗೊರೆಯಾಗಿ ನೀಡಿದರು. ಟ್ರಂಪ್ ಹಾಗೂ ಮೋದಿ ಅವರ ಸ್ನೇಹ, ಟ್ರಂಪ್ ದಂಪತಿ ಭಾರತಕ್ಕೆ ನೀಡಿದ್ದ ವೇಳೆ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದ್ದಕ್ಕೆ ಸಂಬಂಧಿಸಿದ ಚಿತ್ರಗಳನ್ನು ಈ ಪುಸ್ತಕ ಒಳಗೊಂಡಿದೆ.

‘ನಾವು, ಅಮೆರಿಕ ಹಾಗೂ ಭಾರತದಲ್ಲಿ ಒಟ್ಟಿಗೆ ಸಮಯ ಕಳೆದಿದ್ದೇವೆ. ಮೋದಿ ಅವರೇ, ನಾನು ಮತ್ತು ಪತ್ನಿ ಮೆಲನಿಯಾ ಐದು ವರ್ಷಗಳ ಹಿಂದೆ ಭಾರತ ಭೇಟಿ ವೇಳೆ ನೀವು ನೀಡಿದ್ದ ಆತಿಥ್ಯವನ್ನೇ ನಿಮಗೆ ಒದಗಿಸಲು ಸಂತಸವಾಗುತ್ತದೆ’ ಟ್ರಂಪ್ ಹೇಳಿದರು.



ಟ್ರಂಪ್ ಅವರು ತಮ್ಮ ಹಸ್ತಾಕ್ಷರ ಹಾಗೂ ಸಂದೇಶವುಳ್ಳ ಪುಸ್ತಕವನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿದರು —ಪಿಟಿಐ ಚಿತ್ರ

ವಿ.ವಿಗಳಿಗೆ ಆಹ್ವಾನ

ಭಾರತದಲ್ಲಿ ತಮ್ಮ ಕ್ಯಾಂಪಸ್ ಸ್ಥಾಪಿಸುವಂತೆ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಪ್ರಧಾನಿ ನರೇಂದ್ರ ಮೋದಿ ಆಹ್ವಾನ ನೀಡಿದರು.

‘ಎರಡೂ ದೇಶಗಳ ಸಹಭಾಗಿತ್ವದಲ್ಲಿ, ಅಮೆರಿಕದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್‌ಗಳನ್ನು ಹಾಗೂ ಉತ್ಕೃಷ್ಟತಾ ಕೇಂದ್ರಗಳನ್ನು ಭಾರತದಲ್ಲಿ ಸ್ಥಾಪಿಸಲು ಉಭಯ ನಾಯಕರು ಸಮ್ಮತಿಸಿದರು’ ಎಂದು ಪ್ರಕಟಣೆ ತಿಳಿಸಿದೆ.

ಗಮನ ಸೆಳೆದ ಟ್ರಂಪ್ ಮಾತು– ನಡೆ

ಭಾರತಕ್ಕೆ ವಿಧಿಸುವ ಪ್ರತಿ ಸುಂಕ ವಿಚಾರವಾಗಿ ಡೊನಾಲ್ಡ್ ಟ್ರಂಪ್ ಕಠಿಣ ನಿಲುವು ತೆಗೆದುಕೊಂಡಿದ್ದರೂ, ಪ್ರಧಾನಿ ಮೋದಿ ಅವರೊಂದಿಗಿನ ಸಭೆಯಲ್ಲಿ ಅವರು ನಡೆದುಕೊಂಡ ರೀತಿ, ಆಡಿದ ಮಾತು ಗಮನ ಸೆಳೆದಿವೆ.

‘ಮೋದಿ ನನಗಿಂತ ಹೆಚ್ಚು ಕಠಿಣ ಹಾಗೂ ಅತ್ಯುತ್ತಮ ಸಂಧಾನಕಾರ. ಈ ವಿಷಯದಲ್ಲಿ ನಮ್ಮಿಬ್ಬರ ನಡುವೆ ಸ್ಪರ್ಧೆಯೂ ಇಲ್ಲ’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಅವರೊಬ್ಬ ದೊಡ್ಡ ನಾಯಕ. ಪ್ರತಿಯೊಬ್ಬರೂ ಅವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ’ ಎಂದರು.

ಭಾರತದ ಮೇಲೂ ಪ್ರತಿ ಸುಂಕ: ಟ್ರಂಪ್

ಒಂದನೇ ಪುಟದಿಂದ...

ಟ್ರಂಪ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮೋದಿ, ಭಾರತದ ಹಿತಾಸಕ್ತಿಯನ್ನೂ ಕಾಪಾಡಿಕೊಳ್ಳುವುದಾಗಿ ಸ್ಪಷ್ಟಪಡಿಸಿದರು. ‘ಟ್ರಂಪ್ ಅವರಿಗೆ ಅವರ ದೇಶದ ಹಿತಾಸಕ್ತಿಯೇ ಪರಮೋಚ್ಚವಾದುದು. ಅವರ ಈ ಗುಣವನ್ನು ಮೆಚ್ಚುತ್ತೇನೆ ಮತ್ತು ನಾನೂ ಅವರಿಂದ ಕಲಿತಿದ್ದೇನೆ. ಅವರಂತೆಯೇ, ನನಗೂ ಭಾರತದ ಹಿತಾಸಕ್ತಿಯೇ ಎಲ್ಲಕ್ಕಿಂತಲೂ ಮುಖ್ಯವಾಗಿದೆ’ ಎಂದು ಹೇಳಿದರು.

‘ಭಾರತವು ಅಮೆರಿಕದಿಂದ ಅಧಿಕ ಪ್ರಮಾಣದ ತೈಲ, ನೈಸರ್ಗಿಕ ಅನಿಲ, ಎಫ್‌–35 ಯುದ್ಧ ವಿಮಾನಗಳು ಮತ್ತು ಮಿಲಿಟರಿ ಶಸ್ತ್ರಾಸ್ತ್ರ ಖರೀದಿಸಲಿದೆ. ಆ ಮೂಲಕ, ಭಾರತ ತನ್ನ ವ್ಯಾಪಾರ ಕೊರತೆಯನ್ನು ತಗ್ಗಿಸಿಕೊಳ್ಳಲಿದೆ’ ಎಂದು ಟ್ರಂಪ್ ಸ್ಪಷ್ಟಪಡಿಸಿದರು.

‘ರಕ್ಷಣಾ ಕ್ಷೇತ್ರದಲ್ಲಿ ಪಾಲುದಾರಿಕೆ ವಿಸ್ತರಿಸಲು ಎರಡೂ ದೇಶಗಳು ನಿರ್ಧರಿಸಿವೆ. ಜಗತ್ತಿನಲ್ಲಿಯೇ ಅತ್ಯಂತ ವಿನಾಶಕಾರಿಯಾದ ಹಾಗೂ ಎಂಥದೇ ಸನ್ನಿವೇಶದಲ್ಲಿಯೂ ಪ್ರಬಲ ದಾಳಿ ಸಾಮರ್ಥ್ಯ ಹೊಂದಿರುವ ‘ಎಫ್‌–35’ ಯುದ್ಧ ವಿಮಾನಗಳನ್ನು ಭಾರತಕ್ಕೆ ಪೂರೈಸಲಾಗುತ್ತದೆ’ ಎಂದು ಹೇಳಿದರು.

‘ಮುಯ್ಯಿಗೆ ಮುಯ್ಯಿ’ ತೀರಿಸುವ ಸುಂಕ ಸಮರದ ವಿಷಯವಾಗಿ ಪರಿಹಾರದ ಮಾರ್ಗೋಪಾಯ ಕಂಡುಕೊಳ್ಳಲು ಎರಡೂ ದೇಶಗಳ ಮಧ್ಯೆ ನಡೆದ ಉನ್ನತಮಟ್ಟದ ಸಭೆಯಲ್ಲಿ ತೀರ್ಮಾನಕ್ಕೆ ಬರಲಾಗಿದೆ. ‘ವಾಣಿಜ್ಯ ವಹಿವಾಟಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೂ ಮುಂದಿನ ಏಳು ತಿಂಗಳಲ್ಲಿ ಪರಿಹಾರ ಕಂಡುಕೊಳ್ಳಲು ನಿರ್ಧರಿಸಲಾಗಿದೆ’ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಮಾಹಿತಿ ನೀಡಿದರು.

‘ಸುಂಕಗಳ ವಿಷಯವಾಗಿ ಇಬ್ಬರೂ ನಾಯಕರು ತಮ್ಮ ತಮ್ಮ ದೃಷ್ಟಿಕೋನ ಹೊಂದಿದ್ದಾರೆ. ಗಮನಾರ್ಹವಾದ ಸಂಗತಿ ಏನೆಂದರೆ, ಈ ವಿಷಯದ ಕುರಿತು ಚರ್ಚೆ ಮುಂದುವರಿಸಲು ಮಾರ್ಗವೊಂದು ನಮ್ಮ ಮುಂದಿದೆ’ ಎಂದು ಮಿಸ್ರಿ ವಿವರಿಸಿದರು.

‘2025ರಲ್ಲೇ ಎರಡೂ ದೇಶಗಳ ಮಧ್ಯೆ ವ್ಯಾಪಾರ ಒಪ್ಪಂದವೊಂದನ್ನು ಮಾಡಿಕೊಳ್ಳುವ ಪ್ರಯತ್ನಗಳು ಆರಂಭವಾಗಿವೆ. ಈ ಮಧ್ಯೆ, ಅಮೆರಿಕದ ಕೆಲವು ಆಯ್ದ ಸರಕುಗಳ ಮೇಲಿನ ಸುಂಕವನ್ನು ನವದೆಹಲಿಯು (ಭಾರತ) ಇತ್ತೀಚೆಗೆ ಕಡಿತ ಮಾಡಿ, ಅಮೆರಿಕದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯ ಅವಕಾಶ ಹಿಗ್ಗಿಸಿರುವುದನ್ನು ವಾಷಿಂಗ್ಟನ್ (ಅಮೆರಿಕ) ಸ್ವಾಗತಿಸುತ್ತದೆ’ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

‘ಉಕ್ರೇನ್‌–ರಷ್ಯಾ ಕದನ ಭಾರತ ತಟಸ್ಥವಾಗಿಲ್ಲ’

ಒಂದನೇ ಪುಟದಿಂದ...

‘ನಾನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, ‘ಇದು ಯುದ್ಧದ ಕಾಲವಲ್ಲ’ ಎಂಬುದಾಗಿ ಹೇಳಿದ್ದೆ. ಯುದ್ಧಭೂಮಿಯಲ್ಲಿ ಪರಿಹಾರ ಸಿಗುವುದಿಲ್ಲ. ಎಲ್ಲ ಕಡೆಯವರು ಒಟ್ಟಿಗೆ ಕುಳಿತು ಮಾತುಕತೆ ನಡೆಸಿದಾಗ ಮಾತ್ರ ಪರಿಹಾರ ಸಿಗಲಿದೆ ಎಂದೂ ಹೇಳಿದ್ದೆ’ ಎಂದು ಮೋದಿ ತಿಳಿಸಿದರು.

ಎಂಎಸ್‌ಪಿ ಖಾತ್ರಿ: 22ಕ್ಕೆ ಮುಂದಿನ ಸುತ್ತಿನ ಸಭೆ

ಚಂಡೀಗಢ (ಪಿಟಿಐ): ಬೆಳೆಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ ನೀಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ರೈತರ ಪ್ರತಿನಿಧಿಗಳು ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ನೇತೃತ್ವದ ಕೇಂದ್ರ ತಂಡದ ನಡುವೆ ಶುಕ್ರವಾರ ಸೌಹಾರ್ದ ಸಭೆ ನಡೆದಿದ್ದು, ಮುಂದಿನ ಸುತ್ತಿನ ಮಾತುಕತೆಯನ್ನು ಇದೇ 22ಕ್ಕೆ ನಿಗದಿಪಡಿಸಲಾಗಿದೆ.

ರೈತರ ಒಂದು ವರ್ಷದ ಪ್ರತಿಭಟನೆಯ ನಂತರ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾದ 28 ಸದಸ್ಯರ ನಿಯೋಗದೊಂದಿಗೆ ಕೇಂದ್ರ ತಂಡವು ಎರಡೂವರೆ ಗಂಟೆಗಳ ಕಾಲ ಸಭೆ ನಡೆಸಿತು. ಪಂಜಾಬ್ ರಾಜ್ಯ ಸರ್ಕಾರದ ಕೃಷಿ ಸಚಿವ ಗುರ್ಮೀತ್ ಸಿಂಗ್ ಖುದ್ದಿಯಾನ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಲಾಲ್ ಚಂದ್ ಕಟರುಚಕ್ ಹಾಗೂ ರಾಜ್ಯ ಸರ್ಕಾರದ ಇತರ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಪಂಜಾಬ್-ಹರಿಯಾಣ ಗಡಿಯಲ್ಲಿರುವ ಶಂಭು ಮತ್ತು ಖಾನೌರಿಯಲ್ಲಿ ಕಳೆದ ಒಂದು ವರ್ಷದಿಂದ ರೈತರ ಪ್ರತಿಭಟನೆ ನಡೆಯುತ್ತಿದೆ.

ಇಲ್ಲಿನ ಮಹಾತ್ಮ ಗಾಂಧಿ ರಾಜ್ಯ ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ ನಡೆದ ಸಭೆಯ ನಂತರ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ‘ಸೌಹಾರ್ದ ವಾತಾವರಣದಲ್ಲಿ ಮಾತುಕತೆ ನಡೆಯಿತು. ಮತ್ತೊಂದು ಸುತ್ತಿನ ಮಾತುಕತೆಯನ್ನು ಇದೇ 22ರಂದು ನಡೆಸಲಾಗುವುದು. ಮುಂದಿನ ಸಭೆಯಲ್ಲಿ ಕೇಂದ್ರ ತಂಡದ ನೇತೃತ್ವವನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ವಹಿಸಲಿದ್ದಾರೆ. ಆ ದಿನದ ಮಾತುಕತೆಯಲ್ಲಿ ನಾನೂ ಭಾಗವಹಿಸುವೆ’ ಎಂದು ತಿಳಿಸಿದರು.

ರೈತರ ಕಲ್ಯಾಣಕ್ಕಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಸಭೆಯಲ್ಲಿ ರೈತ ನಾಯಕರ ಜತೆ ಹಂಚಿಕೊಳ್ಳಲಾಗಿದೆ ಎಂದು ಹೇಳಿದರು.

ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತ ಮುಖಂಡ ಜಗಜಿತ್ ಸಿಂಗ್ ಡಲ್ಲೇವಾಲ್ ಸುದ್ದಿಗಾರರೊಂದಿಗೆ ಮಾತನಾಡಿ, ಸಭೆ ಸಕಾರಾತ್ಮಕ ವಾತಾವರಣದಲ್ಲಿ ನಡೆದಿದೆ. ಮುಂದಿನ ವಾರ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ ಎಂದು ತಿಳಿಸಿದರು.

ಜಗಜಿತ್ ಸಿಂಗ್ ಡಲ್ಲೇವಾಲ್ ಅವರನ್ನು ಖನೌರಿ ಪ್ರತಿಭಟನಾ ಸ್ಥಳದಿಂದ ಸಭೆಯ ಸ್ಥಳಕ್ಕೆ ಆಂಬುಲೆನ್ಸ್‌ನಲ್ಲಿ ಕರೆತರಲಾಯಿತು. ಡಲ್ಲೇವಾಲ್ ಅವರು ಚಂಡೀಗಢ ತಲುಪಲು ನಾಲ್ಕು ಗಂಟೆ ಬೇಕಾಯಿತು ಎಂದು ರೈತ ಮುಖಂಡ ಕಾಕಾ ಸಿಂಗ್ ಕೊಟ್ರಾ ಹೇಳಿದ್ದಾರೆ.

ಪ್ರೊ ಲೀಗ್: ಹರ್ಮನ್‌ಪ್ರೀತ್ ಬಳಗಕ್ಕೆ ಸ್ಪೇನ್ ಸವಾಲು

ಭಾರತ ತಂಡಗಳ ಅಭಿಯಾನ ಇಂದಿನಿಂದ

ಭುವನೇಶ್ವರ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಶನಿವಾರ ಇಲ್ಲಿನ ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಕ್ರಮವಾಗಿ ಸ್ಪೇನ್ ಮತ್ತು ಇಂಗ್ಲೆಂಡ್ ತಂಡಗಳ ವಿರುದ್ಧ ಅಭಿಯಾನ ಆರಂಭಿಸಲಿವೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಹರ್ಮನ್‌ಪ್ರೀತ್ ಸಿಂಗ್ ಬಳಗವು ಈ ಬಾರಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ. ಇಲ್ಲಿ ಕಿರೀಟ ಗೆದ್ದು 2026ರ ವಿಶ್ವಕಪ್ ಟೂರ್ನಿಗೆ ನೇರ ಪ್ರವೇಶ ಪಡೆಯುವ ಛಲದಲ್ಲಿದೆ. ಭಾರತ ತಂಡವು ಭಾನುವಾರ ಮತ್ತೆ ಸ್ಪೇನ್ ವಿರುದ್ಧ ಸೆಣಸಲಿದೆ. 19ರಂದು ಜರ್ಮನಿ ತಂಡವನ್ನು; 21ರಂದು ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್, ಜರ್ಮನಿ, ಬೆಲ್ಜಿಯಂ ಸೇರಿದಂತೆ ಒಟ್ಟು ಒಂಬತ್ತು ತಂಡಗಳು ಟೂರ್ನಿಯಲ್ಲಿ ಪೈಪೋಟಿ ನಡೆಸಲಿವೆ. ಸದ್ಯ ನೆದರ್ಲೆಂಡ್ಸ್ (8 ಪಂದ್ಯಗಳಿಂದ 14 ಅಂಕ) ಇಂಗ್ಲೆಂಡ್ (4 ಪಂದ್ಯಗಳಿಂದ 11) ತಂಡಗಳು ಪಾಯಿಂಟ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನದಲ್ಲಿವೆ.

ಕಳೆದ ಆವೃತ್ತಿಯಲ್ಲಿ ಭಾರತ ಮತ್ತು ಸ್ಪೇನ್ ತಂಡಗಳು ಕ್ರಮವಾಗಿ ಏಳನೇ ಮತ್ತು ಎಂಟನೇ ಸ್ಥಾನಗಳನ್ನು ಪಡೆದಿದ್ದವು. ಭಾರತ ತಂಡವು ಒಟ್ಟು 16 ಪಂದ್ಯಗಳ ಪೈಕಿ ಐದರಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಆರರಲ್ಲಿ ಡ್ರಾ ಸಾಧಿಸಿದ್ದರೆ, ಉಳಿದ ಐದು ಪಂದ್ಯಗಳಲ್ಲಿ ಪರಾಭವಗೊಂಡಿತ್ತು.

‘ಹಾಕಿ ಇಂಡಿಯಾ ಲೀಗ್‌ನಿಂದ ನಮ್ಮ ತರಬೇತಿ ಉತ್ತಮವಾಗಿ ನಡೆದಿದೆ. ಎಚ್‌ಐಎಲ್ ಟೂರ್ನಿಯಿಂದ ನಮ್ಮ ಫಿಟ್‌ನೆಸ್ ಕಾಪಾಡಿಕೊಳ್ಳಲು ಸಾಧ್ಯವಾಯಿತು. ಸ್ಪೇನ್ ಪ್ರಬಲ ತಂಡವಾಗಿದೆ. ನಾವು ಅದನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಅತ್ಯುತ್ತಮ ಪ್ರದರ್ಶನ ನೀಡಿ ಪಂದ್ಯವನ್ನು ಗೆಲ್ಲುವುದು ನಮ್ಮ ಗುರಿ’ ಎಂದು ಹರ್ಮನ್‌ಪ್ರೀತ್ ಹೇಳಿದ್ದಾರೆ.

ಟೆಟೆ ಬಳಗಕ್ಕೆ ಇಂಗ್ಲೆಂಡ್ ಸವಾಲು: ಸಲಿಮಾ ಟೆಟೆ ನಾಯಕತ್ವದ ಭಾರತದ ಮಹಿಳಾ ತಂಡವೂ ಸುಧಾರಿತ ಆಟದ ವಿಶ್ವಾಸದಲ್ಲಿದೆ. ಕಳೆದ ಬಾರಿ 16 ಪಂದ್ಯಗಳ ಪೈಕಿ ಎರಡರಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಒಂದರಲ್ಲಿ ಡ್ರಾ ಸಾಧಿಸಿ, ಉಳಿದ 13 ಪಂದ್ಯಗಳಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನ ಪಡೆದಿತ್ತು.

ಭಾರತದ ವನಿತೆಯರು 16ರಂದು ಮತ್ತೆ ಇಂಗ್ಲೆಂಡ್ ವಿರುದ್ಧ ಪಂದ್ಯ ಆಡಲಿದ್ದಾರೆ. ಫೆ. 18 ಮತ್ತು 19ರಂದು ಸ್ಪೇನ್ ವಿರುದ್ಧ ಪೈಪೋಟಿ ನಡೆಸುವರು. ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್ ಸೇರಿ ಒಂಬತ್ತು ತಂಡಗಳು ಕಣದಲ್ಲಿವೆ. ಚೀನಾ ತಂಡ ಮಹಿಳಾ ವಿಭಾಗದಲ್ಲಿ ಮಾತ್ರ ಸ್ಪರ್ಧಿಸುತ್ತಿದೆ.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಸೌತ್ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಸೌತ್ ಯುನೈಟೆಡ್ ಎಫ್‌ಸಿ ತಂಡವು ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–0 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ ಪರ ಮೊಹಮ್ಮದ್ ಅಲ್ತಾಬ್ ಹುಸೇನ್ (2ನೇ ನಿಮಿಷ), ಇಶಾನ್ ಸಾಹಿ (3ನೇ ಮತ್ತು 7ನೇ), ಅಜಯ್ ಅಲೆಕ್ಸ್ (62ನೇ) ಮತ್ತು ರೆಯಾನ್ ವಿಲ್ಫ್ರೆಡ್ (90 + 2ನೇ) ಗೋಲು ಗಳಿಸಿದರು.

ಯಂಗ್ ಡೈನಮೋಸ್‌ಗೆ ಜಯ: ಜಶ್ವಂತ್ ಜಿ. ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಯಂಗ್ ಡೈನಮೋಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0ಯಿಂದ ಫ್ರೀಡಂ ಎಫ್‌ಸಿ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯಗಳಲ್ಲಿ ಯುನಿವರ್ಸಲ್ ಎಫ್‌ಸಿ 2–1ರಿಂದ ಭರತ್ ನಗರ ಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಬ್ಯಾಡ್ಮಿಂಟನ್: ಜಪಾನ್‌ಗೆ ಸೋತು ಹೊರಬಿದ್ದ ಭಾರತ

ಕ್ವಿಂಗ್‌ದಾವೊ (ಚೀನಾ), (ಪಿಟಿಐ): ಎಚ್.ಎಸ್.ಪ್ರಣಯ್ ವೀರೋಚಿತ ಹೋರಾಟ ವಾಡಿದರೂ ಅದೇನೂ ಲೆಕ್ಕಕ್ಕೆ ಬರಲಿಲ್ಲ. ಪ್ರಮುಖ ಆಟಗಾರರಿಲ್ಲದೇ ಕಣಕ್ಕಿಳಿದಿದ್ದ ಜಪಾನ್ ತಂಡ, ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ಟೀಮ್ ಚಾಂಪಿಯನ್‌ಷಿಪ್ ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ 3–0 ಯಿಂದ ಭಾರತ ತಂಡವನ್ನು ಸೋಲಿಸಿತು.

ಎರಡು ವರ್ಷಗಳ ಹಿಂದೆ ದುಬೈನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಭಾರತ ಈ ಸಲ ಟೂರ್ನಿಯಿಂದ ಬೇಗನೇ ಹೊರಬಿತ್ತು. ವಿಶ್ವ ಕ್ರಮಾಂಕದಲ್ಲಿ 37ನೇ ಸ್ಥಾನದಲ್ಲಿ ರುವ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಪ್ರತಿರೋಧ ತೋರಿದರೂ ಅಂತಿಮವಾಗಿ 13–21, 21–17, 13–21ರಲ್ಲಿ 12ನೇ ಕ್ರಮಾಂಕದ ಹಿರೋಕಿ ಮಿಡೊರಿಕಾವಾ– ನಾಟ್ಸು ಸೈಟೊ ಜೋಡಿಗೆ ಮಣಿಯಬೇಕಾಯಿತು.

2022ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಗೆದ್ದ ಬಳಿಕ ಮಹಿಳಾ ಸಿಂಗಲ್ಸ್ ಕ್ರಮಾಂಕದಲ್ಲಿ ತ್ವರಿತ ಪ್ರಗತಿ ಕಂಡು ಎಂಟನೇ ಸ್ಥಾನದಲ್ಲಿರುವ ತಮೊಕಾ ಮಿಯಾಝಾಕಿ ಎದುರು ಸಿಂಧು ಅನುಪಸ್ಥಿತಿಯಲ್ಲಿ ಆಡಲು ಇಳಿದ ಮಾಳವಿಕಾ ಬನ್ಸೋಡ್ ಸ್ವಲ್ಪ ಹೋರಾಟ ತೋರಿದರು. ಆದರೆ ಜಪಾನ್ ಆಟಗಾರ್ತಿ 21–12, 21–19ರಲ್ಲಿ 31ನೇ ಕ್ರಮಾಂಕದ ಮಾಳವಿಕಾ ಅವರನ್ನು ಮಣಿಸಿ ಜಪಾನ್‌ಗೆ 2–0 ಮುನ್ನಡೆ ಒದಗಿಸಿದರು.

ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ ತೀವ್ರ ಪ್ರತಿಹೋರಾಟ ಪ್ರದರ್ಶಿಸಿದರೂ ವಿಶ್ವ ಕ್ರಮಾಂಕದಲ್ಲಿ 16ನೇ ಸ್ಥಾನದಲ್ಲಿರುವ ಕೆಂಟಾ ನಿಶಿಮೊಟೊ ಎದುರು ಸೋಲನುಭವಿಸಬೇಕಾಯಿತು. ಜಪಾನ್‌ನ ಆಟಗಾರ ಒಂದು ಗಂಟೆ 17 ನಿಮಿಷಗಳ ಪಂದ್ಯದಲ್ಲಿ 21–14, 15–21, 21–12ರಲ್ಲಿ 32 ವರ್ಷ ವಯಸ್ಸಿನ ಪ್ರಣಯ್ ಮೇಲೆ ಜಯ ಗಳಿಸಿದರು

ಬೆಂಗಳೂರಲ್ಲಿ ಸಕ್ಷಮ್ 2025 ಉದ್ಘಾಟನೆ

ಸುಸ್ಥಿರ ಇಂಧನ ಪದ್ಧತಿ ಅಳವಡಿಸಿಕೊಳ್ಳಲು ಕರೆ: ಕೆ.ಎಚ್. ಮುನಿಯಪ್ಪ

ಬೆಂಗಳೂರು: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ವಾರ್ಷಿಕ ಪ್ರಮುಖ ಉಪಕ್ರಮ ಸಕ್ಷಮ್ 2025 (ಸಂರಕ್ಷಣ ಕ್ಷಮತ ಮಹೋತ್ಸವ)ವನ್ನು ಬೆಂಗಳೂರಿನಲ್ಲಿ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು ಉದ್ಘಾಟಿಸಿದರು.

ನಂತರ ಸಚಿವ ಕೆ.ಎಚ್. ಮುನಿಯಪ್ಪ ಅವರು ಇಂಧನ ಸಂರಕ್ಷಣೆ ಮತ್ತು ಪರಿಸರ ಜವಾಬ್ದಾರಿಯ ತುರ್ತು ಅಗತ್ಯದ ಬಗ್ಗೆ ಹೆಚ್ಚಿನ ಒತ್ತು ನೀಡಿ ಮಾತನಾಡಿದರು. ಸುಸ್ಥಿರ ಇಂಧನ ಪರಿಹಾರಗಳು ಇನ್ನು ಮುಂದೆ ಆಯ್ಕೆಯಾಗಿ ಉಳಿದಿಲ್ಲ. ಬದಲಿಗೆ ಅವಶ್ಯಕತೆ ಎನಿಸಿರುವ ನಿರ್ಣಾಯಕ ಹಂತದಲ್ಲಿ ಭಾರತವಿದೆ. ಹೆಚ್ಚುತ್ತಿರುವ ಇಂಧನಗಳ ಬೇಡಿಕೆಗಳೊಂದಿಗೆ ಪ್ರತಿಯೊಬ್ಬ ನಾಗರಿಕನು ಶುದ್ಧ ಇಂಧನ ಬಳಸಿಕೊಳ್ಳಬೇಕು. ಇಂಧನ ವ್ಯರ್ಥವನ್ನು ಕಡಿಮೆ ಮಾಡುವ ಹಾಗೂ ಸಮರ್ಥ ಇಂಧನ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಕೊಡುಗೆ ನೀಡಬೇಕೆಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಮಟ್ಟದ ಸಂಯೋಜಕರು (ತೈಲ ಉದ್ಯಮ) ಮತ್ತು ಇಂಡಿಯನ್ ಆಯಿಲ್ (ಕರ್ನಾಟಕ ರಾಜ್ಯ ಕಚೇರಿ) ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ರಾಜ್ಯ ಮುಖ್ಯಸ್ಥ ಸಿದ್ಧಾರ್ಥ್ ಅಗರ್ವಾಲ್ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾದ ಈ ಅಭಿಯಾನವು ಇಂಧನ ಸಂರಕ್ಷಣೆ, ಇಂಧನ ದಕ್ಷತೆ ಮತ್ತು ಶುದ್ಧ ಮತ್ತು ಹಸಿರು ಇಂಧನ ಮೂಲಗಳ ಅಳವಡಿಕೆಯ ಕುರಿತು ವ್ಯಾಪಕ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ.

ಜವಾಬ್ದಾರಿಯುತ ಇಂಧನ ಬಳಕೆ ಬಗ್ಗೆ ಜನರಿಗೆ ಶಿಕ್ಷಣ ನೀಡುವಲ್ಲಿ ಮತ್ತು ಭವಿಷ್ಯದ ಪೀಳಿಗೆಯು ಪರಿಸರ ರಕ್ಷಿಸುವಲ್ಲಿ ಸಕ್ಷಮ್ ಉಪಕ್ರಮ ಪ್ರಮುಖ ಪಾತ್ರ ವಹಿಸುತ್ತದೆ. ಹಸಿರು ಇಂಧನ ಉಪಕ್ರಮಗಳಿಗೆ ಕರ್ನಾಟಕದ ಬದ್ಧತೆಯನ್ನು ಪುನರುಚ್ಚರಿಸಿದ ಸಚಿವರು, ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆ ಮಾಡಲು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳನ್ನು ಉತ್ತೇಜಿಸಲು ನಾಗರಿಕರು ಕ್ರಮ ಕೈಗೊಳ್ಳುವಂತೆ ಕರೆ ನೀಡಿದರು.

ಐಒಸಿಎಲ್, ಕರ್ನಾಟಕದ ಕಾರ್ಯ ನಿರ್ವಾಹಕ ನಿರ್ದೇಶಕ ಮತ್ತು ಹಿರಿಯ ಮುಖ್ಯಸ್ಥ ಸಿದ್ಧಾರ್ಥ್ ಅಗರ್ವಾಲ್ ಮಾತನಾಡಿ, ಭಾರತದ ಇಂಧನ ಭದ್ರತಾ ಗುರಿಗಳನ್ನು ಸಾಧಿಸುವಲ್ಲಿ ಸಕ್ಷಮ್ 2025ರ ಮಹತ್ವವನ್ನು ವಿವರಿಸಿದರು.

ಐಒಸಿಎಲ್ ಜಿಎಂ (ಲ್ಯೂಬ್ಸ್) ಸಯಂತನ್ ಸ್ಯಾಮ್ ಅವರು ಸುಸ್ಥಿರ ಇಂಧನ, ಭವಿಷ್ಯದ ಕಡೆಗೆ ಸಾಮೂಹಿಕ ಜವಾಬ್ದಾರಿಯನ್ನು ಬಲಪಡಿಸುವ ಸಕ್ಷಮ್ 2025 ಇಂಧನ ಸಂರಕ್ಷಣಾ ಪ್ರತಿಜ್ಞೆ ಬೋಧಿಸಿದರು.

ಶಾಲಿಗ್ರಾಮ್ ಮೊವಾರ್, ಇಡಿ (ಒ ಮತ್ತು ಎಂ–ಎಸ್‌ಆರ್) ಜಿಎಐಎಲ್, ಎಂ. ಸಂದೀಪ್ ರೆಡ್ಡಿ, ಎಚ್‌ಪಿಸಿಎಲ್ ಜಿಎಂ (ಐ/ಸಿ), ರಿಟೇಲ್, ಎಸ್‌ಡಬ್ಲ್ಯೂಆರ್ ವಲಯ, ನೀರಾ ಸಿಂಗ್, ಎಸ್‌ಎಚ್ (ಎಲ್‌ಪಿಜಿ), ಬಿಪಿಸಿಎಲ್, ರಜತ್ ಬಾತ್ರಾ, ಡಿಜಿಎಂ (ಲ್ಯೂಬ್ಸ್) ಐಒಸಿಎಲ್, ತೈಲ ಮತ್ತು ಅನಿಲ ವಲಯದ ಹಿರಿಯ ಅಧಿಕಾರಿಗಳು, ಉದ್ಯಮ ಮುಖಂಡರು, ಪರಿಸರ ವಕೀಲರು ಹಾಗೂ ಇತರರು ಭಾಗವಹಿಸಿದ್ದರು.



ಪ್ರತಿಜ್ಞೆ ತೆಗೆದುಕೊಳ್ಳುತ್ತಿರುವ ಎಂ. ಸಂದೀಪ್ ರೆಡ್ಡಿ, ಜಿಎಂ–ಐಸಿ, ಎಚ್‌ಪಿಸಿಎಲ್, ಎಲ್. ಅರುಮುಗಂ, ಸಿಜಿಎಂ–ಜಿಐಎಎಲ್, ಸಿದ್ಧಾರ್ಥ್ ಅಗರ್ವಾಲ್, ಐಒಸಿಎಲ್, ಸಚಿವ ಮುನಿಯಪ್ಪ, ಸಯಂತನ್ ಸ್ಯಾಮ್, ಐಒಸಿಎಲ್, ಬಿ. ಪ್ರಕಾಶ್, ಬಿಪಿಸಿಎಲ್.

ಐಸಿಸಿ ಚಾಂಪಿಯನ್ಸ್ ಟ್ರೋಫಿ ವಿಜೇತರಿಗೆ ₹ 20 ಕೋಟಿ ಬಹುಮಾನ



ಜಯ್ ಶಾ

ದುಬೈ (ಪಿಟಿಐ): ಇದೇ ತಿಂಗಳು ಆರಂಭವಾಗಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ನಗದು ಪುರಸ್ಕಾರವನ್ನು ಶೇ 53ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ವಿಜೇತ ತಂಡವು ಸುಮಾರು ₹ 20 ಕೋಟಿ ಹಾಗೂ ರನ್ನರ್ಸ್ ಅಪ್ ತಂಡವು ₹ 10 ಕೋಟಿ ಪಡೆಯಲಿವೆ.

ಈ ಬಾರಿ ಟೂರ್ನಿಯ ಪ್ರತಿ ಹಂತದಲ್ಲಿಯೂ ನಗದು ಬಹುಮಾನ ನಿಗದಿ ಪಡಿಸಲಾಗಿದೆ. ಇದರಿಂದಾಗಿ ಟೂರ್ನಿಯಲ್ಲಿ ಆಡುವ ಎಂಟು ತಂಡಗಳಿಗೂ ನಗದು ಲಭಿಸುವುದು ಖಚಿತವಾಗಿದೆ. ಒಟ್ಟು ಬಹುಮಾನ ಮೊತ್ತವನ್ನು ₹ 60 ಕೋಟಿಗೆ ಹೆಚ್ಚಿಸಲಾಗಿದೆ.

‘ಕ್ರಿಕೆಟ್ ಚಟುವಟಿಕೆಗಳು ಮತ್ತು ಜಾಗತಿಕವಾಗಿ ಈ ಕ್ರೀಡೆಯ ಘನತೆಯನ್ನು ಉತ್ತುಂಗಕ್ಕೇರಿಸಲು ಹೆಚ್ಚು ಸಂಪನ್ಮೂಲ ವಿನಿಯೋಗಕ್ಕೆ ಬದ್ಧರಾಗಿದ್ದೇವೆ’ ಎಂದು ಅಂತರ-ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಂಪು ಹಂತದ ವಿಜೇತರಿಗೆ ₹30 ಲಕ್ಷ, ಐದು ಮತ್ತು ಆರನೇ ಸ್ಥಾನ ಪಡೆಯುವ ತಂಡಗಳು ತಲಾ ₹3 ಕೋಟಿ, ಏಳು ಹಾಗೂ ಎಂಟನೇ ಸ್ಥಾನ ಪಡೆಯುವ ತಂಡಗಳಿಗೆ ತಲಾ ₹1.2 ಕೋಟಿ ಲಭಿಸಲಿದೆ. ಟೂರ್ನಿಯಲ್ಲಿ ಭಾಗವಹಿಸುವ ಪ್ರತಿ ತಂಡವೂ ₹ 1.08 ಕೋಟಿ ಗಳಿಸುವುದು ಖಚಿತ ಎಂದು ತಿಳಿಸಲಾಗಿದೆ.


ಪಾಕಿಸ್ತಾನವು ಈ ಟೂರ್ನಿಯ ಆತಿಥ್ಯ ವಹಿಸುತ್ತಿದೆ. ಎಂಟು ತಂಡಗಳು ಆಡಲಿದ್ದು, ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನ ಅಗ್ರ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಪಾಕಿಸ್ತಾನದ ಕರಾಚಿ, ಲಾಹೋರ್ ಮತ್ತು ರಾವಲ್ಪಿಂಡಿ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ. ಆದರೆ ಭಾರತ ತಂಡದ ಪಂದ್ಯಗಳು ಮಾತ್ರ ದುಬೈನಲ್ಲಿ ಆಯೋಜನೆಗೊಳ್ಳಲಿವೆ. ಟೂರ್ನಿಯು ಇದೇ 19ರಿಂದ ನಡೆಯಲಿದೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ನಾಲ್ಕು ವರ್ಷಗಳಿಗೊಮ್ಮೆ ಆಯೋಜಿಸಲಾಗುತ್ತದೆ. 2009 ರಿಂದ 2017ರವರೆಗೆ ಇದೇ ರೀತಿ ಆಯೋಜನೆ ಟೂರ್ನಿಗಳು ಆಯೋಜನೆಗೊಂಡಿದ್ದರು. ಆದರೆ ಕೋವಿಡ್ ಕಾರಣದಿಂದಾಗಿ ಕ್ರಿಕೆಟ್ ವೇಳಾಪಟ್ಟಿ ಬದಲಾದ ಕಾರಣಕ್ಕೆ 2021ರ ಟೂರ್ನಿ ನಡೆದಿರಲಿಲ್ಲ.

1998ರಿಂದ ಚಾಂಪಿಯನ್ಸ್ ಟ್ರೋಫಿ ಆಯೋಜಿಸಲಾಗುತ್ತಿದೆ. 2027ರಲ್ಲಿ ಮೊದಲ ಬಾರಿಗೆ ಟಿ20 ಮಾದರಿಗೂ ಈ ಟ್ರೋಫಿಯ ಟೂರ್ನಿ ನಡೆಯಲಿದೆ.

ವರ್ಷದಲ್ಲಿ 10 ತಿಂಗಳ ಆಟದಿಂದ ಕ್ರಿಕೆಟಿಗರಿಗೆ ಗಾಯ: ಕಪಿಲ್ ದೇವ್



ಕಪಿಲ್ ದೇವ್

ಕೋಲ್ಕತ್ತ (ಪಿಟಿಐ): ಕ್ರಿಕೆಟಿಗರು ವರ್ಷದ 10 ತಿಂಗಳೂ ಆಡುತ್ತಿದ್ದರೆ ಗಾಯಗೊಳ್ಳುವ ಸಾಧ್ಯತೆ ಸಹಜ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಕಳವಳ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ಟಾಟ್ ಸ್ಟೀಲ್ ಗಾಲ್ಫ್ ಟೂರ್ನಿಯ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ ನಂತರದ ಸಂವಾದದಲ್ಲಿ ಕಪಿಲ್ ಮಾತನಾಡಿದರು.

ಜಸ್‌ಪ್ರೀತ್ ಬೂಮ್ರಾ ಅವರು ಗಾಯ ಗೊಂಡಿದ್ದು, ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹೊರಗುಳಿದಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ತಂಡದಲ್ಲಿ ಇಲ್ಲದಿರುವವರ ಬಗ್ಗೆ ಏಕೆ ಮಾತನಾಡುವುದು? ಇದು ತಂಡದ ಆಟ. ತಂಡವು ಜಯಸಬೇಕು. ಬ್ಯಾಡ್ಮಿಂಟನ್, ಟೆನಿಸ್ ಅಥವಾ ಗಾಲ್ಫ್ ರೀತಿಯಲ್ಲ ಇದು. ನಾವು ಸಂಘಟಿತವಾಗಿ ಆಡಿದಾಗ ಮಾತ್ರ ಜಯ ಖಚಿತ’ ಎಂದರು.

‘ತಂಡದ ಪ್ರಮುಖ ಆಟಗಾರರು ಗಾಯಗೊಳ್ಳಬಾರದು ಎಂಬ ಆಶಯ ಎಲ್ಲರದ್ದು. ಆದರೆ ಅದು ಸಾಧ್ಯವಿಲ್ಲ. ಗಾಯಗೊಳ್ಳುವುದು ಸಹಜ. ಈ ವಿಷಯದಲ್ಲಿ ಏನೂ ಮಾಡಲಾಗದು. ಭಾರತ ತಂಡಕ್ಕೆ ಶುಭವಾಗಲಿ’ ಎಂದು 1983ರ ವಿಶ್ವಕಪ್ ವಿಜೇತ ತಂಡದ ನಾಯಕ ಕಪಿಲ್ ಹಾರೈಸಿದರು.

‘ಇವತ್ತಿನ ಯುವ ಆಟಗಾರರಲ್ಲಿ ಅಪಾರ ಆತ್ಮವಿಶ್ವಾಸವಿದೆ. ನಾವು ಆಡುವಾಗ ಅಷ್ಟು ಆತ್ಮವಿಶ್ವಾಸ ನಮಗಿರಲಿಲ್ಲ. ಅವರೆಲ್ಲರಿಗೂ ಒಳ್ಳೆಯದಾಗಲಿ’ ಎಂದರು.

ಡೆಲ್ಲಿ ಓಪನ್ ಟೆನಿಸ್: ಫೈನಲ್‌ಗೆ ಪೂಣಚ್ಚ– ಲಾಕ್ ಜೋಡಿ



ನಿಕಿ ಪೂಣಚ್ಚ

ನವದೆಹಲಿ (ಪಿಟಿಐ): ಭಾರತದ ನಿಕಿ ಪೂಣಚ್ಚ ಮತ್ತು ಜಿಂಬಾಬ್ವೆಯ ಕೋರ್ಟ್ನಿ ಜಾನ್ ಲಾಕ್ ಅವರು ಡೆಲ್ಲಿ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್ ತಲುಪಿದರು. ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಈ ಜೋಡಿಯು, ಮೂರನೇ ಶ್ರೇಯಾಂಕದ ಜೇ ಕ್ಲಾರ್ಕ್– ಜೊಹಾನೆಸ್ ಇಂಗ್ಲಿಡ್‌ಸೆನ್ ಅವರನ್ನು ಮಣಿಸಿತು.

ಎರಡನೇ ಶ್ರೇಯಾಂಕದ ಪೂಣಚ್ಚ– ಜಾನ್ ಲಾಕ್ ಜೋಡಿ, ದೆಹಲಿ ಲಾನ್‌ಟೆನಿಸ್ ಸಂಸ್ಥೆ ಅಂಕಣದಲ್ಲಿ ಒಂದು ಗಂಟೆ 24 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 6–2, 7–6 (1) ರಿಂದ ಜೇ ಕ್ಲಾರ್ಕ್ (ಬ್ರಿಟನ್)– ಇಂಗ್ಲಿಡ್‌ಸೆನ್ (ಡೆನ್ಮಾರ್ಕ್) ಜೋಡಿಯನ್ನು ಮಣಿಸಿತು. ಮೊದಲ ಸೆಟ್‌ನಲ್ಲಿ ಪೂಣಚ್ಚ– ಜಾನ್ ಲಾಕ್ ಮೇಲುಗೈ ಸಾಧಿಸಿದರೂ, ಎರಡನೇ ಸೆಟ್‌ನಲ್ಲಿ ಎದುರಾಳಿಗಳಿಂದ ಪ್ರತಿರೋಧ ಎದುರಿಸಬೇಕಾಯಿತು. ಟೈಬ್ರೇಕರ್‌ನಲ್ಲಿ ಭಾರತ-ಜಿಂಬಾಬ್ವೆ ಆಟಗಾರರ ಜೋಡಿ ಮೇಲುಗೈ ಸಾಧಿಸಿತು.

ಪೂಣಚ್ಚ– ಲಾಕ್ ಜೋಡಿ ಪ್ರಶಸ್ತಿಗಾಗಿ ನಡೆಯುವ ಸೆಣಸಾಟದಲ್ಲಿ ಶ್ರೇಯಾಂಕರಹಿತ ಜೋಡಿಯಾದ ಮಸಾಮಿಚಿ ಇಮಾಮುರಾ– ರಿಯೊ ನೊಗುಚಿ (ಜಪಾನ್) ಅವರನ್ನು ಎದುರಿಸಲಿದೆ.

ಮಹಿಳಾ ಪ್ರೀಮಿಯರ್ ಲೀಗ್: ಆರ್‌ಸಿಬಿ ಶುಭಾರಂಭ • ಗುಜರಾತ್‌ಗೆ ನಿರಾಸೆ

ರಿಚಾ ಆಟಕ್ಕೆ ಒಲಿದ ಜಯ



ರಿಚಾ ಘೋಷ್

ರನ್ 64*

ಎಸೆತ 27

ಬೌಂಡರಿ 7

ಸಿಕ್ಸರ್ 4

ಎಎಫ್‌ಪಿ ಚಿತ್ರ

ವಡೋದರಾ (ಪಿಟಿಐ): ರಿಚಾ ಘೋಷ್ ಮತ್ತು ಎಲಿಸ್ ಪೆರಿ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕೋತಂಬಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಟೂರ್ನಿಯ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಬೆಂಗಳೂರು ತಂಡವು 6 ವಿಕೆಟ್‌ಗಳಿಂದ ಜಯಿಸಿತು. 202 ರನ್‌ಗಳ ಗುರಿಯನ್ನು ಬೆಂಗಳೂರು ತಂಡವು 18.3 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಮುಟ್ಟಿತು. ಇದಕ್ಕೆ ಕಾರಣವಾಗಿದ್ದು ಎಲಿಸ್ (57; 34ಎ, 4X6, 6X2) ಮತ್ತು ರಿಚಾ (ಔಟಾಗದೇ 64;27ಎ, 4x7, 6x4) ಅವರ ಅರ್ಧಶತಕಗಳು.

ಆರ್‌ಸಿಬಿ ತಂಡವು 109 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು. ಎಲಿಸ್ ಅವರು ಔಟಾಗುತ್ತಿದ್ದಂತೆ ತಂಡದಲ್ಲಿ ಸೋಲಿನ ಛಾಯೆ ಕಂಡಿತ್ತು. ಆದರೆ, ಅದನ್ನು ದೂರ ಮಾಡುವಲ್ಲಿ ರಿಚಾ ಯಶಸ್ವಿಯಾದರು. ಫ್ರಂಟ್‌ಫುಟ್ ಆಟದ ಮೂಲಕ ಬೌಲರ್‌ಗಳನ್ನು ಕಂಗೆಡಿಸಿದರು. ಅವರಿಗೆ ಕನಿಕಾ ಅಹುಜಾ (ಔಟಾಗದೇ 30;13ಎ) ಜೊತೆ ನೀಡಿದರು. ಇಬ್ಬರೂ ಸೇರಿ ತಂಡವನ್ನು ಗೆಲುವಿನ ದಡ ಸೇರಿಸಿದರು. ರಿಚಾ 237ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಮೂನಿ, ಗಾರ್ಡನರ್ ಆಟ: ಇದಕ್ಕೂ ಮೊದಲು ಟಾಸ್ ಗೆದ್ದ ಆರ್‌ಸಿಬಿ ತಂಡವು ಗುಜರಾತ್ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಬೆತ್ ಮೂನಿ (56; 42ಎ, 4X8) ಮತ್ತು ನಾಯಕಿ ಆ್ಯಷ್ಲೆ ಗಾರ್ಡನರ್ (ಔಟಾಗದೇ 79; 37ಎ) ಅವರ ಆಟದ ಬಲದಿಂದ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 ರನ್ ಗಳಿಸಿತು.

ಆರಂಭಿಕ ಆಟಗಾರ್ತಿ ಲಾರಾ ವೊಲ್ವಾರ್ಟ್ (6 ರನ್) ಮತ್ತು ದಯಾಳನ್ ಹೇಮಲತಾ (4 ರನ್) ಬೇಗನೆ ನಿರ್ಗಮಿಸಿದರು. ಇನ್ನೊಂದೆಡೆ ಬೀಸಾಟವಾಡುತ್ತಿದ್ದ ಮೂನಿ ಅವರೊಂದಿಗೆ ಗಾರ್ಡನರ್ ಸೇರಿಕೊಂಡರು. ಇವರಿಬ್ಬರು ಮೂರನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ಅರ್ಧಶತಕ ಗಳಿಸಿದ ಮೂನಿ ಅವರು 12ನೇ ಓವರ್‌ನಲ್ಲಿ ಪ್ರೇಮಾ ರಾವತ್ ಬೌಲಿಂಗ್‌ನಲ್ಲಿ ಸ್ಮೃತಿ ಮಂದಾನಗೆ ಕ್ಯಾಚಿತ್ತರು.

ಇದಾದ ನಂತರ ಇನಿಂಗ್ಸ್ ಕಟ್ಟುವ ಸಂಪೂರ್ಣ ಹೊಣೆಯನ್ನು ನಾಯಕಿ ತಮ್ಮ ಮೇಲೆ ಹೊತ್ತುಕೊಂಡರು. 213.51ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. 8 ಸಿಕ್ಸರ್‌ಗಳು ಅವರ ಬ್ಯಾಟ್‌ನಿಂದ ಸಿಡಿದವು. 3 ಬೌಂಡರಿ ಬಾರಿಸಿದರು. ಗಾರ್ಡನರ್ ಮತ್ತು ದಿಯಾಂದ್ರ ಡಾಟಿನ್ (25; 13 ಎ) 4ನೇ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದರು. ಆರ್‌ಸಿಬಿಯ ರೇಣುಕಾ ಸಿಂಗ್ ಎರಡು ವಿಕೆಟ್ ಪಡೆದರೆ, ಕನಿಕಾ ಅಹುಜಾ, ಜಾರ್ಜಿಯಾ ವೇರ್‌ಹ್ಯಾಮ್ ಮತ್ತು ಪ್ರೇಮಾ ರಾವತ್ ತಲಾ ಒಂದು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 (ಬೆತ್ ಮೂನಿ 56, ಆ್ಯಷ್ಲೆ ಗಾರ್ಡನರ್ ಔಟಾಗದೇ 79, ದಿಯಾಂದ್ರ ಡಾಟಿನ್ 25, ರೇಣುಕಾ ಸಿಂಗ್ 25ಕ್ಕೆ2). ರಾಯಲ್ ಚಾಲೆಂಜರ್ಸ್ ಬೆಂಗಳೂರು: 18.3 ಓವರ್‌ಗಳಲ್ಲಿ 4 ವಿಕೆಟ್‌ಗೆ 202 (ಎಲಿಸ್ ಪೆರಿ 57, ರಾಘ್ವಿ ಬಿಸ್ಟ್ 25, ರಿಚಾ ಘೋಷ್ ಔಟಾಗದೇ 64, ಕನಿಕಾ ಅಹುಜಾ ಔಟಾಗದೇ 30; ಆ್ಯಷ್ಲೆ ಗಾರ್ಡನರ್ 33ಕ್ಕೆ 2). **ಫಲಿತಾಂಶ:** ರಾಯಲ್ ಚಾಲೆಂಜರ್ಸ್ ತಂಡಕ್ಕೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ರಿಚಾ ಘೋಷ್

ಎರಡನೇ ಕುಸ್ತಿ ಸರಣಿ: ಭಾರತದ ಕುಸ್ತಿಪಟುಗಳಿಗೆ ಸಿಗದ ಅನುಮತಿ?

ನವದೆಹಲಿ (ಪಿಟಿಐ): ಅಲ್ಬೇನಿಯಾದಲ್ಲಿ ನಡೆಯಲಿರುವ ಎರಡನೇ ರ‍್ಯಾಂಕಿಂಗ್ ಸರಣಿಯ ಕುಸ್ತಿಯಲ್ಲಿ ಭಾಗವಹಿಸಲಿರುವ ಭಾರತ ತಂಡಕ್ಕೆ ಕೇಂದ್ರ ಕ್ರೀಡಾ ಸಚಿವಾಲಯವು ಅನುಮತಿಯನ್ನು ತಡೆ ಹಿಡಿದಿದೆ. ಇದರಿಂದಾಗಿ ಭಾರತದ ಕುಸ್ತಿಪಟುಗಳು ಈ ಸರಣಿಯನ್ನು ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ.

ಆದರೆ, ಇದರಲ್ಲಿ ಡಬ್ಲ್ಯುಎಫ್‌ಐ (ಭಾರತ ಕುಸ್ತಿ ಫೆಡರೇಷನ್) ತಪ್ಪಿದೆ ಎಂದು ಕ್ರೀಡಾ ಸಚಿವಾಲಯವು ದೂರಿದೆ. ಕೆಲವು ಅತ್ಯಗತ್ಯ ಕ್ರಮಗಳನ್ನು ಸಕಾಲದಲ್ಲಿ ಪೂರೈಸಲು ಡಬ್ಲ್ಯುಎಫ್‌ಐ ವಿಫಲವಾಗಿದೆ ಎಂದೂ ಸಚಿವಾಲಯ ಹೇಳಿದೆ.

ಸಚಿವಾಲಯ ಮತ್ತು ಡಬ್ಲ್ಯುಎಫ್‌ಐ ನಡುವಿನ ಇಂತಹದೇ ಜಟಾಪಟಿಯಿಂದಾಗಿ ಕ್ರೊವೇಷ್ಯಾದಲ್ಲಿ ನಡೆದಿದ್ದ ಮೊದಲ ರ‍್ಯಾಂಕಿಂಗ್ ಸರಣಿಯ ಕುಸ್ತಿಯನ್ನೂ ಭಾರತದ ಕುಸ್ತಿಪಟುಗಳು ತಪ್ಪಿಸಿಕೊಂಡಿದ್ದರು.

2023ರ ಡಿಸೆಂಬರ್‌ನಲ್ಲಿ ಡಬ್ಲ್ಯುಎಫ್‌ಐ ಅನ್ನು ಸಚಿವಾಲಯವು ಅಮಾನತು ಮಾಡಿದೆ. ಆದರೆ ಅಂತರರಾಷ್ಟ್ರೀಯ ಕುಸ್ತಿ ಫೆಡರೇಷನ್‌ನಿಂದ ಡಬ್ಲ್ಯುಎಫ್‌ಐ ಮಾನ್ಯತೆ ಮುಂದುವರಿದಿದೆ. ಫೆಡರೇಷನ್ ಕೊನೆಯ ಕ್ಷಣದಲ್ಲಿ ಭಾರತ ಕ್ರೀಡಾ ಪ್ರಾಧಿಕಾರಕ್ಕೆ (ಎಸ್‌ಎಐ) ಪ್ರಸ್ತಾವ ಸಲ್ಲಿಸಿತ್ತು.

‘ಡಬ್ಲ್ಯುಎಫ್‌ಐ ಕೊನೆಯ ಕ್ಷಣದಲ್ಲಿ ಪ್ರಸ್ತಾವವನ್ನು ಎಸ್‌ಎಐಗೆ ಸಲ್ಲಿಸಿತ್ತು. ಶಿಫಾರಸು ಮಾಡಿದ ಕುಸ್ತಿಪಟುಗಳ ಹೆಸರುಗಳ ಪಟ್ಟಿಯನ್ನೂ ವಿಳಂಬವಾಗಿ ಕಳಿಸಿತ್ತು. ಆದ್ದರಿಂದ ಅದನ್ನು ಅನುಮೋದಿಸಲು ಸಾಧ್ಯವಾಗಲಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಡಬ್ಲ್ಯುಎಫ್‌ಐ ಯಾವುದೇ ಟ್ರಯಲ್ಸ್ ಆಯೋಜಿಸಿಲ್ಲ. ಆದ್ದರಿಂದ ತಂಡವನ್ನು ಆಯ್ಕೆ ಮಾಡಿದ ಪ್ರಕ್ರಿಯೆಯ ಕುರಿತು ವಿವರಗಳನ್ನು ಒದಗಿಸಬೇಕು. ಅದೂ ಸ್ಪಷ್ಟವಾಗಿಲ್ಲ. ಅಂತರರಾಷ್ಟ್ರೀಯ ಸ್ಪರ್ಧೆಗಳಿಗೆ ಹೋಗುವ ಅಥ್ಲೀಟ್‌ಗಳಿಗೆ ಅನುಮೋದನೆ ನೀಡಲು ನಾವು ಸಿದ್ಧ. ಆದರೆ ಪೂರ್ವನಿಗದಿತ ಪ್ರಕ್ರಿಯೆಗಳನ್ನು ಪೂರೈಸುವುದೂ ಕಡ್ಡಾಯ’ ಎಂದೂ ಮೂಲಗಳು ಹೇಳಿವೆ.

ಎರಡನೇ ರ‍್ಯಾಂಕಿಂಗ್ ಸರಣಿಯು ಇದೇ 26 ರಿಂದ ಮಾರ್ಚ್ 2ರವರೆಗೆ ನಡೆಯಲಿದೆ. ಸಚಿವಾಲಯವು ಇನ್ನೂ ಹಸಿರು ನಿಶಾನೆ ತೋರಿಸಿಲ್ಲ. ಶೀಘ್ರದಲ್ಲಿಯೇ ಅನುಮತಿ ಸಿಗುವ ನಿರೀಕ್ಷೆಯಲ್ಲಿ ಕುಸ್ತಿಪಟುಗಳಿದ್ದಾರೆ.

38ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ತೆರೆ

ಪಾರಮ್ಯ ಮೆರೆದ ಸರ್ವಿಸಸ್

ಹಲ್ದ್ವಾನಿ (ಉತ್ತರಾಖಂಡ), (ಪಿಟಿಐ): ಉತ್ತರಾಖಂಡದ ವಿವಿಧ ತಾಣಗಳಲ್ಲಿ ನಡೆದ 38ನೇ ರಾಷ್ಟ್ರೀಯ ಕ್ರೀಡೆಗಳಿಗೆ ಶುಕ್ರವಾರ ತೆರೆಬಿದ್ದಿತು. ‘ವಿಶ್ವ ಕ್ರೀಡಾ ಕ್ಷೇತ್ರದಲ್ಲಿ ಭಾರತಕ್ಕೆ ಭವ್ಯ ಭವಿಷ್ಯವಿದೆ. 2036ರ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಿಕೊಳ್ಳಲು ಭಾರತ ಪ್ರಯತ್ನ ನಡೆಸುತ್ತಿದೆ. ನಾವು ಅತಿ ದೊಡ್ಡ ಕ್ರೀಡಾಮೇಳಕ್ಕೆ ಸಿದ್ಧರಾಗಿದ್ದೇವೆ’ ಎಂದು ಸಮಾರೋಪ ಸಮಾರಂಭದಲ್ಲಿ ಗೃಹ ಸಚಿವ ಅಮಿತ್ ಶಾ ಹೇಳಿದರು.

ಕ್ರೀಡಾಕೂಟದ ಮುಕ್ತಾಯವನ್ನು ಘೋಷಿಸಿದ ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು, ಕ್ರೀಡೆಗಳ ಧ್ವಜವನ್ನು ಮೇಘಾಲಯದ ಮುಖ್ಯಮಂತ್ರಿ ಕೊನ್ರಾಡ್ ಸಂಗ್ಮಾ ಅವರಿಗೆ ಹಸ್ತಾಂತರಿಸಿದರು. ಮೇಘಾಲಯ 2027ರ ರಾಷ್ಟ್ರೀಯ ಕ್ರೀಡೆಗಳ ಆತಿಥ್ಯ ವಹಿಸಲಿದೆ.

‘ಭಾರತಕ್ಕೆ ಒಲಿಂಪಿಕ್ಸ್ ಆತಿಥ್ಯದ ಅವಕಾಶ ಒದಗಿದರೆ ನಮ್ಮ ಅಥ್ಲೀಟುಗಳು ಪದಕಗಳನ್ನು ಗೆಲ್ಲಲಿದ್ದಾರೆ. ದೇಶದ ಧ್ವಜವನ್ನು ಎತ್ತರಕ್ಕೆ ಏರಿಸಲಿದ್ದಾರೆ’ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದರು.

ಆದರೆ ಆತಿಥ್ಯದ ನಿರೀಕ್ಷೆ ಈಡೇರುವುದೇ ಎಂಬುದನ್ನು ತಿಳಿಯಲು ಇನ್ನೂ ಸಾಕಷ್ಟು ಸಮಯ ಹಿಡಿಯಲಿದೆ. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮುಂದಿನ ವರ್ಷ ಆರಂಭದವರೆಗಂತೂ ಈ ಬಗ್ಗೆ ನಿರ್ಧಾರ ಕೈಗೊಳ್ಳುವುದಿಲ್ಲ.

‘ರಾಷ್ಟ್ರೀಯ ಕ್ರೀಡೆಗಳಿಂದಷ್ಟೇ ಅಲ್ಲ, ಉತ್ತರಾಖಂಡ ಅಥ್ಲೀಟುಗಳ ಉತ್ತಮ ಪ್ರದರ್ಶನದಿಂದ ದೇವಭೂಮಿ ಈಗ ಖೇಲ್ (ಕ್ರೀಡಾ) ಭೂಮಿಯೂ ಆಗಿದೆ’ ಎಂದು ಶಾ ಬಣ್ಣಿಸಿದರು.


ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವಿಸಸ್	68	26	27	121
ಮಹಾರಾಷ್ಟ್ರ	54	71	76	201
ಹರಿಯಾಣ	48	47	58	153
ಮಧ್ಯಪ್ರದೇಶ	34	26	22	82
ಕರ್ನಾಟಕ	34	18	28	80

ಇಂದಿರಾಗಾಂಧಿ ಅಂತರರಾಷ್ಟ್ರೀಯ ಕ್ರೀಡಾ ಸಂಕೀರ್ಣದಲ್ಲಿ ನಡೆದ ಈ ಸಮಾರಂಭದಲ್ಲಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರೂ ಹಾಜರಿದ್ದರು.

ಸರ್ವಿಸಸ್ ಮೇಲುಗೈ: ಈ ಕ್ರೀಡೆಗಳ ಇತಿಹಾಸದಲ್ಲಿ ಐದನೇ ಬಾರಿ ಸರ್ವಿಸಸ್ ಪದಕ ಪಟ್ಟಿಯಲ್ಲಿ (68 ಚಿನ್ನ ಸೇರಿ 121 ಪದಕ) ಅಗ್ರಸ್ಥಾನ ಪಡೆಯಿತು. ಗೋವಾದಲ್ಲಿ ನಡೆದ 2023ರ ಕ್ರೀಡೆಗಳ ವೇಳೆ ಅಗ್ರಸ್ಥಾನದಲ್ಲಿದ್ದ ಮಹಾರಾಷ್ಟ್ರ (54 ಚಿನ್ನ ಸೇರಿ 201 ಪದಕ) ಈ ಬಾರಿ ಎರಡನೇ ಸ್ಥಾನ ಪಡೆಯಿತು.

ಕರ್ನಾಟಕದ ಈಜು ತಾರೆಯರಾದ ಧಿನಿಧಿ ದೇಸಿಂಗು ಮತ್ತು ಶ್ರೀಹರಿ ನಟರಾಜ್ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದ ಶ್ರೇಷ್ಠ ಅಥ್ಲೀಟ್ ಗೌರವಕ್ಕೆ ಪಾತ್ರರಾದರು. ಧಿನಿಧಿ 9 ಚಿನ್ನ, 1 ಬೆಳ್ಳಿ, 1 ಕಂಚಿನ ಪದಕ ಬಾಚಿಕೊಂಡರೆ, ಶ್ರೀಹರಿ 9 ಚಿನ್ನ, 1 ಬೆಳ್ಳಿ ಪದಕ ಗೆದ್ದುಕೊಂಡರು.



ಟ್ರೋಫಿಯೊಂದಿಗೆ ಕರ್ನಾಟಕದ ಧಿನಿಧಿ ದೇಸಿಂಗು ಮತ್ತು ಶ್ರೀಹರಿ ನಟರಾಜ್



ಕೆಎಸ್‌ಸಿಎ 14 ವರ್ಷದೊಳಗಿನವರ ಶಾಲಾ ತೃತೀಯ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಬಿ.ಟಿ.ರಾಮಯ್ಯ ಶೀಲ್ಡ್ ಪ್ರಶಸ್ತಿ ಗೆದ್ದ ಶ್ರೀ ಶ್ರೀ ರವಿಶಂಕರ ವಿದ್ಯಾಮಂದಿರ ತಂಡ. ಎಡದಿಂದ ಬಲಕ್ಕೆ (ನಿಂತವರು); ಜಿ.ಪಿ. ಶಶಾಂಕ್, ಆದಿತ್ಯ ಕಶ್ಯಪ್, ಅಭ್ಯುದಯ್ ಸಿಂಗ್, ಪವನ್ ಜೆ.ಬಿ, ದೈವಿಕ್ ಶರ್ಮಾ, ಪಾರ್ಥ ಬಿ.ಎನ್, ಅಂಶ್ ಶುಕ್ಲಾ, ಸುದೀಪ್ ಬಾಲಗುರು, ಎನ್. ಅರ್ಷದ್, ಅಥರ್ವ ದೇವಿಪ್ರಸಾದ್, ಎನ್. ಸಿದ್ದಾಂತ್, ಸ್ವಸ್ತಿಕ್, ಇ. ಅಭಿರಾಮ್ ರೆಡ್ಡಿ (ಕುಳಿತವರು): ಕೇಶವ್ ಜುಜು (ನಾಯಕ), ಡಿ. ಕಿರಣ್ ಕುಮಾರ್ (ಮುಖ್ಯ ಕೋಚ್), ಗೀತಾ ಜಿ. (ಉಪ ಪ್ರಾಂಶುಪಾಲರು), ರೇಷ್ಮಾ ಗಣೇಶ್ (ಸ್ಥಾಪಕ ಪ್ರಾಂಶುಪಾಲರು), ದೀಪಾ ವಿ. (ಶೈಕ್ಷಣಿಕ ವಿಭಾಗದ ಮುಖ್ಯಸ್ಥರು), ಇ.ಅಶೋಕ್ (ಕೋಚ್), ತೇಜಸ್ವಿ ಶರ್ಮಾ (ಉಪನಾಯಕ).

ಆಸ್ಟ್ರೇಲಿಯಾ ವಿರುದ್ಧ ಲಂಕಾಕ್ಕೆ ದಾಖಲೆ ಅಂತರದ ಜಯ

ಕೊಲಂಬೊ (ಎಎಫ್‌ಪಿ): ಬೌಲರ್‌ಗಳ ಉತ್ತಮ ಪ್ರದರ್ಶನದಿಂದ ಶ್ರೀಲಂಕಾ ತಂಡ, ಎರಡನೇ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಶುಕ್ರವಾರ 174 ರನ್‌ಗಳ ದೊಡ್ಡ ಅಂತರದಿಂದ ಸೋಲಿಸಿತು.

282 ರನ್‌ಗಳ ಗುರಿ ಎದುರಿಸಿದ ಆಸ್ಟ್ರೇಲಿಯಾ 25ನೇ ಓವರ್‌ನಲ್ಲೇ 107 ರನ್‌ಗಳಿಗೆ ಆಲೌಟ್ ಆಯಿತು.

ವೇಗದ ಬೌಲರ್ ಅಸಿತ್ ಫೆರ್ನಾಂಡೊ ಮೊದಲ ಸ್ಪೆಲ್‌ನಲ್ಲೇ ಪೆಟ್ಟು ನೀಡಿ 23 ರನ್ನಿಗೆ 3 ವಿಕೆಟ್ ಪಡೆದರು. ಸ್ಪಿನ್ನರ್‌ಗಳು ಎದುರಾಳಿಗಳ ಕುಸಿತವನ್ನು ತ್ವರಿತಗೊಳಿಸಿದರು. ಕಾಂಗರೂ ಪಡೆಯ ಕೊನೆಯ ಏಳು ವಿಕೆಟ್‌ಗಳು ಕೇವಲ 28 ರನ್‌ಗಳಿಗೆ ಉರುಳಿದವು.

ಲಂಕಾ, ವಿಶ್ವ ಚಾಂಪಿಯನ್ ತಂಡದ ಎದುರು ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆಯಿತು. ಏಕದಿನ ಕ್ರಮಾಂಕ ಪಟ್ಟಿಯಲ್ಲಿ ಬಡ್ತಿ ಪಡೆದು ಐದನೇ ಸ್ಥಾನಕ್ಕೇರಿತು. ಇತ್ತೀಚಿನ ಕೆಲ ತಿಂಗಳಿಂದ ಲಂಕಾ ಬ್ಯಾಟಿಂಗ್ ಬಗ್ಗೆ ಟೀಕೆಗಳು ಕೇಳಿಬಂದಿದ್ದವು. ಆದರೆ ಪ್ರಮುಖ ಬ್ಯಾಟರ್‌ಗಳು ಅವುಗಳನ್ನು ತಳ್ಳಿಹಾಕು ವಂತೆ ಆಡಿದರು. ಕುಸಲ್ ಮೆಂಡಿಸ್ ಶತಕ (101, 115ಎ, 4x11) ದಾಖಲಿಸಿದರು.

ಸ್ಕೋರುಗಳು: ಶ್ರೀಲಂಕಾ: 50 ಓವರುಗಳಲ್ಲಿ 4 ವಿಕೆಟ್‌ಗೆ 281 (ಪಥುಮ್ ನಿಸಾಂಕ 51, ಕುಸಲ್ ಮೆಂಡಿಸ್ 101, ಚರಿತ್ ಅಸಲಂಕಾ ಔಟಾಗದೇ 78); ಆಸ್ಟ್ರೇಲಿಯಾ: 24.2 ಓವರುಗಳಲ್ಲಿ 101 (ಸ್ಟೀವ್ ಸ್ಮಿತ್ 29, ಅಸಿತ ಫೆರ್ನಾಂಡೊ 23ಕ್ಕೆ3, ದುನಿತ್ ವೆಲ್ಲಾಳಗೆ 23ಕ್ಕೆ4, ವನಿಂದು ಹಸರಂಗ 23ಕ್ಕೆ3). ಪಂದ್ಯದ ಆಟಗಾರ: ಕುಸಲ್ ಮೆಂಡಿಸ್.

ತ್ರಿಕೋನ ಸರಣಿ ಗೆದ್ದ ಕಿವೀಸ್ ಪಡೆ

ಕರಾಚಿ: ಡೇರಿಲ್ ಮಿಚೆಲ್ ಮತ್ತು ಟಾಮ್ ಲೇಥಮ್ ಅವರ ಅರ್ಧ ಶತಕಗಳ ನೆರವಿನಿಂದ ನ್ಯೂಜಿಲೆಂಡ್ ತಂಡ ಶುಕ್ರವಾರ ನಡೆದ ಫೈನಲ್‌ನಲ್ಲಿ ಐದು ವಿಕೆಟ್‌ಗಳಿಂದ ಆತಿಥೇಯ ಪಾಕಿಸ್ತಾನ ತಂಡವನ್ನು ಸೋಲಿಸಿ ಏಕದಿನ ಕ್ರಿಕೆಟ್ ತ್ರಿಕೋನ ಸರಣಿ ಗೆದ್ದುಕೊಂಡಿತು.

ಸ್ಕೋರುಗಳು: ಪಾಕಿಸ್ತಾನ: 49.3 ಓವರುಗಳಲ್ಲಿ 242 (ಮೊಹಮ್ಮದ್ ರಿಜ್ವಾನ್ 46, ಸಲ್ಮಾನ್ ಆಘಾ 45, ತಯ್ಯಬ್ ತಾಹಿರ್ 38; ವಿಲ್ ಓ ರೂರ್ಕ್ 43ಕ್ಕೆ4); ನ್ಯೂಜಿಲೆಂಡ್: 45.2 ಓವರುಗಳಲ್ಲಿ 5 ವಿಕೆಟ್‌ಗೆ 243 (ಡೆವಾನ್ ಕಾನ್ವೆ 48, ಕೇನ್ ವಿಲಿಯಮ್ಸನ್ 34, ಡೇರಿಲ್ ಮಿಚೆಲ್ 57, ಟಾಮ್ ಲೇಥಮ್ 56, ಗ್ಲೆನ್ ಫಿಲಿಪ್ಸ್ ಔಟಾಗದೇ 20; ನಸೀಮ್ ಶಾ 43ಕ್ಕೆ2). ಫಲಿತಾಂಶ: ನ್ಯೂಜಿಲೆಂಡ್‌ಗೆ ಐದು ವಿಕೆಟ್‌ಗಳ ಜಯ.